
ಸಂಪುಟ 24 ಸಂಚಿಕೆ 43
ಅಕ್ಟೋಬರ್ 27.2002 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ




ಅಳಂದ ಮಸೀದಿ ವಿವಾದದ 'ಮತ'ವಾದಿಗಳು



ಕೃಷ್ಣಾಡಳಿತದ ಮೂರು ವರ್ಷ ಹುತಾತ್ಮ ಪಟ್ಟದತ್ತ?



ಜಮ್ಮು-ಕಾಶ್ಮೀರ ಹೊಸ ಸರ್ಕಾರ ಹೊಸ ಸವಾಲು



ಅಮೆರಿಕಾ ಕಾರ್ಮಿಕರ ಮಹತ್ವದ ಹೋರಾಟ

14th Asian Games BUSAN 2002

ಭಾವನೆ ಬೆಸೆದ ಏಶ್ಯಾಡ್ ಕ್ರೀಡೆ

ವಿಮೋಚನಾ ಸಮರದಲ್ಲಿ ಮೇಜರ್ ಜಯಪಾಲ್‌ಸಿಂಗ್



ಆತ್ಮಕಥನ

ಅಪ್ರತಿಮ ಕ್ರಾಂತಿಕಾರಿಯ ಆತ್ಮಕಥನ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವವನ್ನೇ ಸತ್ವಹೀನಗೊಳಿಸಿ, ನಾಶಗೊಳಿಸುವ ಭಾರಿ ಪಿತೂರಿಯನ್ನು ಬ್ರಿಟಿಷರು ರೂಪಿಸಿದ್ದರು. ಇದು ಅತ್ಯಂತ ಗುಪ್ತವಾದುದು. ಆದರೆ ಇದು ಬಯಲುಗೊಂಡಿತು. ಬಯಲುಗೊಳಿಸಿದುದು ಭಾರತ ಕಮ್ಯುನಿಸ್ಟ್ ಪಕ್ಷ. ಮುಂದೊದಗಬಹುದಾಗಿದ್ದ ಭಾರಿ ಅನಾಹುತ ಇದರಿಂದ ತಪ್ಪಿತು. ಆದರೆ ಬ್ರಿಟಿಷರ ಸೈನ್ಯದಲ್ಲಿ ಉನ್ನತ ಸೈನ್ಯಾಧಿಕಾರಿಯಾಗಿದ್ದ ಮೇಜರ್ ಒಬ್ಬರನ್ನು ಬ್ರಿಟಿಷರು ಜೈಲಿಗೆ ತಳ್ಳಿದರು. ಆ ಗುಪ್ತ ದಾಖಲೆಯನ್ನು ಬಹಿರಂಗಗೊಳಿಸಲು ಕಾರಣವೆಂಬುದು ಆರೋಪ. ಮುಂದೊದಗಬಹುದಾಗಿದ್ದ ದಂಡನೆಯ ಕ್ರಮಗಳ ಅರಿವಿದ್ದು ದೇಶಪ್ರೇಮ ಮೆರೆದ ಮಹಾಸಾಹಸಿ ಬೇರಾರೂ ಅಲ್ಲ ಮೇಜರ್ ಜಯಪಾಲ್ ಸಿಂಗ್. ಅಷ್ಟೇ ಅಲ್ಲ ಕಲ್ಕತ್ತದ ವಿಲಿಯಂ ಫೋರ್ಟ್‌ನಲ್ಲಿ ಬಂಧಿಯಾಗಿರುವಾಗಲೇ ಅಲ್ಲಿಂದ ತಪ್ಪಿಸಿಕೊಂಡು ಭೂಗತರಾದುದು ಇನ್ನೊಂದು ಸಾಹಸಗಾಥೆ.

ಮೇಜರ್ ಜಯಪಾಲ್ ಸಿಂಗ್ ಭೂಗತರಾಗಿಯೇ ಉಳಿಯಬೇಕಾಗಿ ಬಂದದ್ದು ವರ್ಷಕ್ಕೂ ಅಧಿಕವೇ. ಆಗಲೇ ಅವರು ಕಮ್ಯುನಿಸ್ಟ್ ಪಕ್ಷ ಸೇರಿದರು. ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅವರು ಸ್ವಾತಂತ್ರ್ಯ ನಂತರ ಭೂಗತದಿಂದ ಹೊರಬಂದಾಗ, ಈ ದೇಶಾಭಿಮಾನಿಯನ್ನು ಸ್ವಾತಂತ್ರ್ಯ ಭಾರತದ ಸರ್ಕಾರ ಮತ್ತೇ ಅವರನ್ನು ಜೈಲಿಗೆ ತಳ್ಳಿತು. ಹೂಡಲಾದ ಮೊಕದ್ದಮೆ ಏನು ಗೊತ್ತೆ? ಅದೇ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಹೂಡಿದ ಮೊಕದ್ದಮೆಯ ದೂರುಗಳನ್ನೇ ಆಧರಿಸಿ...

ಕಾಮ್ರೇಡ್ ಜಯಪಾಲ್ ಸಿಂಗ್ ಭೂಗತರಾಗಿರುವಾಗ ಕಮ್ಯುನಿಸ್ಟ್ ಆಂದೋಲನಕ್ಕೆ ಅವರ ಕೊಡುಗೆ ಅಪಾರ, ಅವಿಸ್ಮರಣೀಯ. ತೆಲಂಗಾಣ ವಿಪ್ಲವ ವೀರ ಸಶಸ್ತ್ರ ಸಮರಾಂಗಣದಲ್ಲಿ ಅವರು ವಹಿಸಿದ ಪಾತ್ರ ಅದ್ವಿತೀಯ. ಅಲ್ಲದೇ ಮಣಿಪುರದ ಬುಡಕಟ್ಟು ಜನರ ಸಶಸ್ತ್ರ ಹೋರಾಟ, ಪ.ಬಂಗಾಳದ ಕಾಕಾದ್ವೀಪದ ಹೋರಾಟ, ಅಸ್ಸಾಂ, ಪಾಂಡಿಚೇರಿಗಳಲ್ಲಿ ಜನತೆಯ ಸಮರಗಳಿಗೆ ಅವರು ತೊಡಗಿದ್ದರು. ಅವರ ಸೈನ್ಯದ ತರಬೇತಿ, ಅನುಭವವನ್ನು ದುಡಿವವರ್ಗದ ವಿಮೋಚನಾ ಸಮರಕ್ಕೆ ಧಾರೆಯೆರದರು.

1964 ರಲ್ಲಿ ಸಿಪಿಐ ವಿಭಜನೆಯಾದಾಗ ಸಿಪಿಐ(ಎಂ) ಜೊತೆ ನಿಂತರು. ತುರ್ತು ಪರಿಸ್ಥಿತಿಯಲ್ಲಿಯೂ ಜೈಲು ವಾಸ, ಬಿಡುಗಡೆ. ನಂತರ ದೆಹಲಿ ಘಟಕದ ಕಾರ್ಯದರ್ಶಿ. 1978 ರಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರ.13ನೇ ಮಹಾಧಿವೇಶನದ ಹೊತ್ತಿನಲ್ಲೇ ಅವರು ನಿಧನರಾದದ್ದು ಜನವರಿ 25, 1982 ವಿಜಯವಾಡದಲ್ಲಿ.

ಇಂತಹ ಅಪ್ರತಿಮ ಕ್ರಾಂತಿಕಾರಿಯ ಹೆಸರು ಕೇಳಿದವರು ಈ ಪೀಳಿಗೆಯಲ್ಲಂತೂ ತೀರಾ ಕಡಿಮೆ. ಆದರೆ ಅವರ ಹೆಸರು, ಬದುಕು ಒಂದು ರೋಮಾಂಚಕಾರಿ. ಬದುಕಿನ ಬಗ್ಗೆ ಮಾಹಿತಿಗಳು ಕಡಿಮೆ. ಬರೆದದ್ದು ಅತ್ಯಲ್ಪ. ಈ ವೀರಯೋಧನ ಸಾಹಸಗಾಥೆ ಕನ್ನಡ ನಾಡಿನ ಎಲ್ಲರಿಗೂ ರಿಯಬೇಕು, ಕನ್ನಡ ನಾಡಿನ ಎಲ್ಲರಿಗೂ ತಿಳಿಯಬೇಕು. ಅದರ ಸ್ಫೂರ್ತಿ, ಹೊತ್ತಿನ ಅರಿವಿನ ಬೆಳಕು ಸದಾ ಕ್ರಾಂತಿಕಾರಿ ಕೆಲಸಗಳಲ್ಲಿ ಬೆಳಗಬೇಕು.

ಇಂಗ್ಲೀಷಿನ ಆತ್ಮಕಥನವನ್ನು ಕನ್ನಡಲ್ಲಿ ನೀಡುತ್ತಿದ್ದೇವೆ. ಮೊದಲ ಕಂತಿನ ಅನುವಾದ ಸಂಗಾತಿ ಟಿ.ಎಲ್.ಕೃಷ್ಣೇಗೌಡರು ನೀಡಿದ್ದಾರೆ. ನಂತರದ್ದು ಜ್ಯೋತಿಬಸು ಆತ್ಮಕಥನ ಅನುವಾದಿಸಿದ ಪತ್ರಕರ್ತ ವಿಶ್ವಕುಂದಾಪುರರಿಂದ. ಪ್ರತಿವಾರವೂ ಧಾರವಾಹಿಯಾಗಿ... ಇಗೋ ಈಗಲೇ ಓದಿ.

ನನ್ನನ್ನು ಪರಿಚಯಿಸಿಕೊಳ್ಳಿ

1956 ನವೆಂಬರ್ 24 ರಂದು ಸ್ವಯಂ ಪ್ರೇರಿತನಾಗಿ ಹತ್ತು ವರ್ಷದ ಭೂಗದ ಜೀವನವನ್ನು ಕೊನೆಗೊಳಿಸಿದೆ. ನನ್ನ ಪುನರಾಗಮನದ ಎಲ್ಲಾ ಆಸೆಗಳನ್ನು ನನ್ನ ಜನ ತ್ಯಜಿಸಿದ್ದಾಗಲೇ ಕೆಲವರು ನಾನು ಬದುಕಿರುವುದಾಗಿ ಮತ್ತು ಒಂದು ದಿನ ವಾಪಸ್ಸು ಬಂದೇಬರುವುದಾಗಿ ಬಲವಾಗಿ ನಂಬಿದ್ದರು. ಕೊನೆಗೂ ನಾನು ವಾಪಸ್ಸಾದೆ.

ನನಗೆ ಆತ್ಮೀಯ ಸ್ವಾಗತ ನೀಡುವುದಕ್ಕಾಗಿ ಸಾವಿರಾರು ಜನ ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳು ಉತ್ತರ ಪ್ರದೇಶದ ಸಣ್ಣ ಜಿಲ್ಲಾಕೇಂದ್ರ ಪ್ರಶಾಂತ ಮುಜಾಫರ್ ನಗರದಲ್ಲಿ ಜಮಾಯಿಸಿದ್ದರು.

ಆಸೆಗಣ್ಣುಗಳಿಂದ, ಉತ್ಸಾಹಭರಿತರಾಗಿ ನಗರದ ಉದ್ದಗಲಕ್ಕೂ ನನನ್ನು ಮೆರವಣಿಗೆ ಮಾಡಿದರು. ಮತ್ತು ಇದುವರೆಗೆ ನಾನು ಸಾಗಿಸಿದ್ದ ಭೂಗತ ಜೀವನದ ಕೆಲವು ರಹಸ್ಯಗಳನ್ನು ಹೊರಹಾಕುವಂತೆ ಉಸಿರು ಬಿಗಿಹಿಡಿದು ಪುರಭವನದಲ್ಲಿ ಕಾಯುತ್ತಿದ್ದರು.

"ನೀವು 1946 ರಲ್ಲಿ ಸೇನೆಯನ್ನು ಪರಿತ್ಯಾಗ ಮಾಡಿದ್ದು ಏಕೆ? ಮತ್ತು ಹೇಗೆ? ನಮಗೆ ಹೇಳಿ"ಎಂದು ಒಬ್ಬ ತರುಣ ವಿದ್ಯಾರ್ಥಿ ಅಂಗಲಾಚಿದ.

"ಫೋರ್ಟ್ ವಿಲಿಯಂನ ಭದ್ರಕೋಟೆಯನ್ನು ಮುರಿಯಲು ನಿಮಗೆ ಹೇಗೆ ಸಾಧ್ಯವಾಯಿತು? ನೀವು ಹೇಗೆ ಪಾರಾದಿರಿ?" ಒಬ್ಬ ರೈತ ಒತ್ತಾಯಿಸಿದ.

ಫೋರ್ಟ್ ವಿಲಿಯಂ ನಿಂದ ಪಾರಾದ ನಂತರ ನೀವು ಎಲ್ಲಿ ಹೋದಿರಿ? ನೀವು ಈ ಹತ್ತು ವರ್ಷಗಳಲ್ಲಿ ಯಾವ ರೀತಿಯ ಕೆಲಸಗಳನ್ನು ಮಾಡಿದಿರಿ? ನನ್ನ ಬಗೆಗಿನ ವರದಿಯಲ್ಲಿ ಖಾಲಿಯಿದ್ದ ಜಾಗವನ್ನು ಭರ್ತಿ ಮಾಡಲು ಸಿಐಡಿಯ ವ್ಯಕ್ತಿಯೊಬ್ಬ ಈ ಪ್ರಶ್ನೆ ಕೇಳಿದ.

ನಾನು ಏನನ್ನೂ ಬಹಿರಂಗಪಡಿಸಲಿಲ್ಲ. ನನಗೆ ಆತ್ಮೀಯ ಸ್ವಾಗತ ನೀಡಿದ್ದಕ್ಕಾಗಿ ನಾನವರಿಗೆ ಧನ್ಯವಾದ ಹೇಳಿದೆ ಮತ್ತು ಸಾಮ್ರಾಜ್ಯಶಾಹಿಗಳು ನಮ್ಮದೇಶದ ವಿರುದ್ಧ ಹೂಡುತ್ತಿರುವ ಷಡ್ಯಂತ್ರಗಳ ಕುರಿತು ಕೆಲವು ಮಾತುಗಳನ್ನಾಡಿದೆ.

ಸುಬಾಷ್ ಚಂದ್ರಬೋಸ್‌ರ ಬಗ್ಗೆ ನನಗೆ ತಿಳಿದಿದೆ ಮತ್ತು ರಹಸ್ಯಗಳನ್ನು ತಿಳಿದುಕೊಳ್ಳಲು ಅವರೇ ನನ್ನನ್ನು ಕಳುಹಿಸಿದ್ದಾರೆ ಎಂಬ ನಂಬಲಸಾಧ್ಯವಾದ ಸುದ್ದಿಯೊಂದು ತೇಲಿಬಂತು.

ಆದರೆ ಸಭೆ ಮುಗಿದ ನಂತರ ವಯಸ್ಸಾದ ನನ್ನ ತಂದೆ ತೀವ್ರ ಕುತೂಹಲದಿಂದ ಮಗನೇ ನೀನು ನೇತಾಜಿಯ ಬಗ್ಗೆ ಏನಾದರೂ ಹೇಳುವೆಯೇನೋ ಎಂದು ಅವರು ನಿರೀಕ್ಷಿಸಿದ್ದಾರೆ, ಅವರೇನಾದರೂ ಬದುಕಿದ್ದಾರೆಯೋ ಮಗನೇ?" ಎಂದು ಗದರಿಸಿದಂತೆ ಕೇಳಿದರು.

"ಬೋಸ್ ಬಗ್ಗೆ ನನಗೇನೂ ತಿಳಿಯದು, ನಾನವರನ್ನು ಭೇಟಿಯಾಗೇ ಇಲ್ಲ." ಎಂದು ನಾನುತ್ತರಿಸಿದೆ.

ಒಂದು ದೊಡ್ಡ ಗುಂಪು ನನ್ನ ಸುತ್ತ ನೆರೆಯಿತು. ನನ್ನನ್ನು ನೂಕಾಡಿ ಬೋಸ್ ಬದುಕಿದ್ದಾರೆಯೇ? ಎಂಬುದನ್ನು ತಿಳಿಯಲು ಬಯಸಿದರು.

"ನನಗೆ ಗೊತ್ತಿದೆ, ಅಂತಹ ಅಮೂಲ್ಯ ವಿಷಯದ ಬಗ್ಗೆ ನೀನು ಎಲ್ಲರಿಗೂ ಹೇಳುವುದಿಲ್ಲ. ಆದರೆ ನಾವಿಬ್ಬರೇ ಇದ್ದಾಗ ನನಗೇ ಹೇಳೇ ಹೇಳುತ್ತೀಯ ಎಂಬ ನಂಬಿಕೆ ನನಗಿದೆ" ಎಂದು ನನ್ನ ತಂದೆ ಕಿವಿಯಲ್ಲಿ ಉಸುರಿದರು.

"ಅವರ ಬಗ್ಗೆ ನನಗೆ ಏನೂ ತಿಳಿಯದು" ಎಂದು ದೃಢವಾಗಿ ಹೇಳಿದೆ.


ಆಗ ನನ್ನ ತಂದೆಗೆ ನನ್ನಿಂದ ತುಂಬಾ ನಿರಾಶೆಯಾಯಿತು.

ಹನ್ನೆರೆಡು ವರ್ಷಗಳ ಕಾಲ ದುಃಖ ಮತ್ತು ಸಂಕಟದಿಂದ ತನ್ನ ಒಬ್ಬನೇ ಮಗನಿಂದ ದೂರವಿದ್ದ ಅವರೊಬ್ಬ ಜೀವಂತ ಸ್ಮಾರಕ. ವಯಸ್ಸು ಮತ್ತು ಸಂಕಟಮಯ ವರ್ಷಗಳು ಅವರ ಮೇಲೆ ತಮ್ಮ ಮುದ್ರೆ ಒತ್ತಿದ್ದವು. ಒಮ್ಮೆ ಧೀರ ಸೇನಾನಿಯಾಗಿದ್ದ ಅವರು ಈಗ ಕುಗ್ಗಿ ಹೋಗಿದ್ದರು ಮತ್ತು ಅವರ ಮುಖ ಸುಕ್ಕು ಗಟ್ಟಿತ್ತು.

ನನ್ನ ಸುತ್ತಲಿನ ಜನರ ಪ್ರೀತಿಯಿಂದ ನಾನು ಆವರಿಸಲ್ಪಟ್ಟಿದ್ದೆ. ನಾನು ಮನೆಗೆ ಬಂದಿದ್ದು ಸಂತೋಷಕರವಾಗಿತ್ತು. ನನ್ನನ್ನು ಸ್ವಾಗತಿಸಲು ರಚಿಸಿದ್ದ ಸಮಿತಿಯಲ್ಲಿ ಕಮ್ಯುನಿಸ್ಟರು, ಪಿ.ಎಸ್.ಪಿ.ಯರು ಮತ್ತು ವ್ಯಕ್ತಿಗತ ಕಾಂಗ್ರೆಸ್ಸಿಗರು ಇದ್ದರು. ಸ್ಥಳೀಯ ಕಾಂಗ್ರೆಸ್ ಸಮಿತಿ ಜಾಗರೂಕತೆಯಿಂದ ಸ್ವಾಗತ ಸಮಿತಿಯಿಂದ ದೂರವುಳಿದಿತ್ತು.

ಆದರೂ ಸಹ ಕಾಂಗ್ರೆಸ್ಸಿನ ಒಬ್ಬ ಗಡ್ಡದಾರಿ ಮುಸಲ್ಮಾನ್ ಕಾರ್ಯಕರ್ತ ವೇದಿಕೆ ಮೇಲೆ ಕಾಣಿಸಿಕೊಂಡು ಜಿಲ್ಲಾ ಕಾಂಗ್ರೆಸ್ಸಿನ ಬಗ್ಗೆ ತನ್ನ ಅಸಹನೆ ತೋಡಿಕೊಂಡ.

"ಮೇಜರ್ ಒಬ್ಬ ಕಮ್ಯುನಿಸ್ಟ್‌ನಾಗಿರುವುದರಿಂದ ಅವರ ಸ್ವಾಗತ ಕಾರ್ಯಕ್ರಮಕ್ಕೆ ತಾವು ಹಾಜರಾಗಬಾರದು ಎಂದು ಕಾಂಗ್ರೆಸ್ಸಿಗರು ಹೇಳಿದರು. ನಾನಿಲ್ಲಿ ಕಮ್ಯುನಿಸ್ಟನನ್ನು ಬರ ಮಾಡಿಕೊಳ್ಳಲು ಬಂದಿಲ್ಲ. ದೇಶಪ್ರೇಮಿಯೊಬ್ಬನನ್ನು ಬರ ಮಾಡಿಕೊಳ್ಳಲು ಬಂದಿದ್ದೇನೆ. ಮನೆಗೆ ಮರಳಿದ ಮೇಜರ್ ಮತ್ತವರ ಜನರನ್ನು ನಾನು ಸ್ವಾಗತಿಸುತ್ತೇನೆ" ಎಂದು ಆತ ಹೇಳಿದ.



ಆತನ ಈ ಮಾತುಗಳಿಗೆ ಕಿವಿಗಡಚಿಕ್ಕುವ ಪ್ರತಿಕ್ರಿಯೆ ಕಂಡುಬಂತು.

ನನ್ನ ದೇಶಕ್ಕಾಗಿ ಕರ್ತವ್ಯಚ್ಯುತಿ ಎಸಗಿದೆ

ಆದರೆ ಈ ದೇಶಪ್ರೇಮಿ ಚಿಂತಿಸಿದಂತೆ ಮತ್ತು ಭಾವಿಸಿದಂತೆ ದೇಶದಲ್ಲಿರುವ ಕೆಳಹಂತದ ಮತ್ತು ಮೇಲಿನ ಹಂತದ ಯಾವ ಕಾಂಗ್ರೆಸ್ಸಿಗರೂ ಚಿಂತಿಸಲೂ ಇಲ್ಲ, ಭಾವಿಸಲೂ ಇಲ್ಲ.

ಕೆಲವು ತಿಂಗಳುಗಳ ನಂತರ, ಅಂದರೆ ಕಳೆದ ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು "ಒಬ್ಬ ದರೋಡೆಕೋರ ಜಿಲ್ಲೆಯನ್ನು ಕೊಳ್ಳೆ ಹೊಡೆಯುತ್ತಿದ್ದಾನೆ" ಎಂದು ಗುಡುಗಿದರು. ನಾನೊಬ್ಬ ಆಪಾದಿತ ಡಕಾಯಿತನಾಗಿದ್ದೆ.

ಜನತೆ ಆತನನ್ನು ತಿರಸ್ಕರಿಸಿತು. ಶಾಮ್ಲಿಯಲ್ಲಿ ನಡೆದ ನನ್ನ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಎಪ್ಪತ್ತು ಸಾವಿರ ಜನರು ಸೇರಿದ್ದರು.

"ಈ ಕಾಂಗ್ರೆಸ್ಸಿಗರಿಗೆ ನಿಮ್ಮ ಭೂಗತ ಜೀವನದ ಕಥೆಯನ್ನು ಈಗ ಹೇಳಲೇಬೇಕು" ಎಂದು ಸಾವಿರಾರು ಜನರು ಒತ್ತಾಯಿಸಿದರು.

ಇದರ ಅಗತ್ಯವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ಕಮ್ಯುನಿಸ್ಟ್ ಪಕ್ಷದ ಒಬ್ಬ ಪೂರ್ಣಾವಧಿ ಕಾರ್ಯಕರ್ತನಾಗಿ, ಒಂದು ಪುಸ್ತಕ ಬರೆಯಲು ನನ್ನ ಸಮಯವನ್ನು ವಿನಿಯೋಗಿಸ ಬಹುದಷ್ಟೆ. ಇಂತಹದ್ದರಿಂದ ತಪ್ಪಿಸಿಕೊಳ್ಳಲಾಗದು ಮತ್ತು ತಾಯಿನಾಡಿನ ವಿಮೋಚನೆಗಾಗಿ ನಿಜವಾಗಿ ಸಂಕಟ ಅನುಭವಿಸಿದ, ದುಡಿದ, ಹುತಾತ್ಮರಾದವರಿಂದ ದೇಶಪ್ರೇಮದ ಸರ್ಟಿಫಿಕೇಟುಗಳನ್ನು ಬೇಡುತ್ತಿರುವ ಸ್ವಾತಂತ್ರ್ಯೋತ್ತರ ಭಾರತದ ಪಕ್ಷಾಂತರಿಗಳನ್ನು, ಗರಿಗರಿಯಾದ ಖಾದಿ ತೊಟ್ಟವರನ್ನು ಮೆಚ್ಚಿಸಿಕೊಳ್ಳಲು ನಾನಿದನ್ನು ಬರೆಯುವುದಿಲ್ಲ.

1945-46 ರ ಸಮಯದಲ್ಲಿ ನನ್ನ ರಾಜಕೀಯ ಮತ್ತು ರಾಜದ್ರೋಹದ ಕೆಲಸಗಳನ್ನು ಮಾಡುವಾಗ ನಾನೊಂದು ತಪ್ಪು ಮಾಡಿದ್ದೇನೆ. ಇಂಗ್ಲೆಂಡಿನ ರಾಜ ಮತ್ತು ಭಾರತದ ಚಕ್ರವರ್ತಿಯ ಭಾರತೀಯ ಸೇನೆಯಲ್ಲಿ ದಂಡನಾಯಕನಾಗಿ ಸೇವೆ ಸಲ್ಲಿಸುವಾಗ ಮತ್ತು ವಾಯು ಸೇನೆ ವಿಭಾಗದಲ್ಲಿ ದಳಪತಿಯಾಗಿ ಅವರ ಆಜ್ಞಾಪಾಲಕನಾಗಿರಬೇಕಾಗಿದ್ದಾಗ ನಾನು ಈ ತಪ್ಪು ಮಾಡಿದ್ದೇನೆ. ನಾನು ಈ ಹುದ್ದೆಗಳನ್ನು ಅಲಂಕರಿಸಿದ್ದ ಪ್ರಥಮ ಭಾರತೀಯ.

ಪ್ರಾಮಾಣಿಕ ಭಾವೋದ್ವೇಗದೊಡನೆ, 1947 ಸೆಪ್ಟೆಂಬರ್ 3 ರಂದು, ಅಂದರೆ ನನ್ನ ಮಾತೃಭೂಮಿ ಸ್ವಾತಂತ್ರ್ಯ ಗಳಿಸಿದ 15 ದಿನಗಳಿಗೆ ಸರಿಯಾಗಿ ಭಾರತದ ಪ್ರಧಾನಿಗಳಾಗಿದ್ದ ಜವಾಹರಲಾಲ್ ನೆಹರೂ ಅವರಿಗೆ ಸುದೀರ್ಘವಾದ ಬಹಿರಂಗ ಪತ್ರವೊಂದನ್ನು ಬರೆದೆ. 1946 ರಲ್ಲಿ ಬ್ರಿಟಿಷ್ ಮಿಲಿಟರಿ ಆಡಳಿತಗಾರರು ನನ್ನ ಜೀವನವನ್ನು ಯಾವ ರೀತಿಯಲಿ ಸಾಗಿಸಲು ತಳ್ಳಿದರೋ ಅಂತಹ ಮೊದಲ ಭೂಗತ ಜೀವನದಿಂದ ಆಗತಾನೇ ನಾನು ಹೊರಬಂದಿದ್ದೆ. ಆಗ ಬ್ರಿಟಿಷರು ಖಂಡಿತವಾಗಿಯೂ ನನಗೆ ವಿಧಿಸಬಹುದಾಗಿದ್ದ ಮರಣ ದಂಡನೆಯಿಂದ ತಪ್ಪಿಸಿಕೊಳ್ಳಲು ನಾನು ಭೂಗತನಾಗಬೇಕಾಗಿತ್ತು.

ನನ್ನ ಮಾತೃಭೂಮಿ ಮತ್ತು ನನ್ನ ಜನಗಳನ್ನು ಅಡಿಯಾಳಾಗಿಸಿಕೊಂಡಿದ್ದವರ ವಿರುದ್ಧ ಸಂಚು ನಡೆಸುವ ಸಂಪೂರ್ಣ ಹಕ್ಕು ನನಗಿತ್ತು. ನಾನು ಹಾಗೇ ಮಾಡಿದೆ. ನನಗೆ ಇದರ ಬಗ್ಗೆ ವಿಷಾಧವೇನೂ ಇಲ್ಲ. ಇತಿಹಾಸದ ಸತ್ಯಗಳನ್ನು ನನ್ನ ಜನರ ಮುಂದಿಡುವ ಎಲ್ಲಾ ಹಕ್ಕು ನನಗಿತ್ತು ಎಂದು ಯೋಚಿಸಿದ್ದೇನೆಯೇ ಹೊರತು ನನಗೆ ಇದರಿಂದ ಜನಪ್ರಿಯತೆಯನ್ನು ಗಳಿಸಿಕೊಳ್ಳಬೇಕೆಂಬ ಉದ್ದೇಶದಿಂದಲ್ಲ. ಒಬ್ಬ ಸಿಪಾಯಿಯಾಗಿ ಯಾವುದೇ ಶ್ರದ್ಧಾಂಜಲಿ ಮತ್ತು ದುಃಖವಿಲ್ಲದೆ ಒಂದು ಒಳ್ಳೆಯ ಉದ್ದೇಶಕ್ಕಾಗಿ ನನ್ನ ಪ್ರಾಣವನ್ನು ಒಪ್ಪಿಸಲು ನಾನು ತರಬೇತುಗೊಂಡಿದ್ದೆ. ಬ್ರಿಟಿಷರು ನನ್ನ ವ್ಯಕ್ತಿತ್ವದ ಮೇಲೆ ದೋಷಾರೋಪ ಮಾಡಿದ್ದರು. ಇದಕ್ಕೆ ಉತ್ತರಿಸಲು ನಾನು ಬಯಸಿದ್ದೆ.

ನನ್ನ ಪತ್ರದಲ್ಲಿ ನಮ್ಮ ಇಡೀ ಚಟುವಟಿಕೆಗಳ ಸ್ಥೂಲ ಚಿತ್ರಣವನ್ನು ಪ್ರಧಾನ ಮಂತ್ರಿಗಳಿಗೆ ವಿವರಿಸಿದ್ದೆ. ನಂತರ ಫೋರ್ಟ್‌ವಿಲಿಯಂನಲ್ಲಿ ನಾನು ಬಂಧಿತನಾದಾಗ ನನ್ನ ಹತ್ತಿರವಿದ್ದ ಎಲ್ಲಾ ದಾಖಲೆಗಳನ್ನು, ಭಾರತೀಯ ಸೇನಾ ಬಲದ ಭೂಗತ ಚಟುವಟಿಕೆಗಳ ಕಾರ್ಯದರ್ಶಿ ಮೇಜರ್ ರತನ್ ಸಿಂಗ್ ಮೂಲಕ ಭಾರತೀಯ ಸೇನೆಯ ಗುಪ್ತಾಚಾರ ವಿಭಾಗಕ್ಕೆ ಒಪ್ಪಿಸಲಾಯಿತು.

ಮುಚ್ಚಿಡಲು ನಮ್ಮ ಬಳಿ ಏನೂ ಇರಲಿಲ್ಲ. ವಿದೇಶಿ ಆಳ್ವಿಕೆಗಾರರನ್ನು ಹೊರದಬ್ಬುವುದು ನಾಚಿಕೆಯ ಕೆಲಸವೇನೂ ಆಗಿರಲಿಲ್ಲ. ಅದೊಂದು ನಮ್ಮ ಹಕ್ಕು ಮತ್ತು ಹೆಮ್ಮೆಯ ಕೆಲಸವಾಗಿತ್ತು.

(ಮುಂದುವರಿಯುವುದು)

ಕೃಷ್ಣರ ಮೂರು ವರ್ಷ-ಹುತಾತ್ಮ ಪಟ್ಟಕ್ಕೆ ಸ್ಪರ್ಧೆಯೇ?

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್


ಮುಖ್ಯಮಂತ್ರಿ ಕೃಷ್ಣರವರ ಕಾವೇರಿ ಪಾದಯಾತ್ರೆ ಪರಿವರ್ತನೆಯಾದದ್ದೇ ಅವರ ಸರ್ಕಾರದ ಮೂರು ವರ್ಷಗಳ ಸಾಧನೆ(!)ಗಳ ಬಡಾಯಿ ಸಭೆಯಾಗಿ, ಕಾವೇರಿಗಾಗಿ ರಸ್ತೆಗುಂಟ ನಡೆದುಬಂದು 'ಪ್ರಾಯಶ್ಚಿತ್ತ' ಅನುಭವಿಸಿದೆನೆಂಬುದಾಗಿ ಹೇಳಿದ ಮುಖ್ಯಮಂತ್ರಿಗಳು ಅವರ ದುರಾಡಳಿತದಲ್ಲಿ ಸಂಕಟಪಟ್ಟ ನಾಡಿನ ಜನರ ನೆನಪು



• "ಸ್ಟೈಲ್ ಪ್ಲೀಸ್.."

ಮಾಡಿಕೊಳ್ಳಲಿಲ್ಲ. ರೈತರ ಆತ್ಮಹತ್ಯೆಗಳ ಸರಮಾಲೆ, ಬರದ ಬವಣೆಯಲ್ಲಿ ತತ್ತರಿಸಿದ ಜನತೆ, ಲಾಕಪ್ ಸಾವು, ದುಡಿವವರ ಮೇಲೆ ನಡೆದ ಗೋಲಿಬಾರ್, ದಲಿತರ ಮೇಲಿನ ದೌರ್ಜನ್ಯಗಳು ಕಾಡಲಿಲ್ಲ. ಬದಲಾಗಿ ಈ ಮೂರು ವರಷವೇನು ಇನ್ನುಳಿದ ಎರಡು ವರ್ಷ ಹಾಗೂ ಮತ್ತೇ ಐದು ವರ್ಷಗಳು ಅಧಿಕಾರ ಮಾಡುತ್ತೇನೆ ಎಂಬ ತಾಕೀತು ಮಾಡಿದರು. ಇದೇ 24ರ ನಂತರ ಕೋರ್ಟ್ ನಿಂದನೆಯಡಿ ಸರ್ಕಾರ ಹೋದೀತೇ ಎಂಬ ಅನುಮಾನಕ್ಕೆ, ಕೃಷ್ಣರನ್ನೇ ಬದಲಾಯಿಸುವ ಭಿನ್ನಮತೀಯರಿಗೂ ನೀಡಿದ ಉತ್ತರದಂತಿರ ಬಹುದು. ಹಾಗೇ ಬಹುರಾಷ್ಟ್ರೀಯ ಕಂಪನಿ, ಖಾಸಗೀ ಧಣಿಗಳಿಗೆ ಕೊಟ್ಟ ಭರವಸೆಯೂ ಇರಬಹುದು. ಆದರೆ ಜನರ ಪಾಲಿಗೆ ಅದೊಂದು ಕ್ರೂರ ಶಾಪದಂತೆ ಕೇಳುತ್ತಿದೆ. ಕಳೆದ ಮೂರು ವರ್ಷಗಳ ತಮ್ಮ ಜನವಂಚನೆಯ ಆಡಳಿತದಿಂದ ಕಿಂಚಿತ್ತಾದರೂ ಪಾಠ ಕಲಿಯುವ ಜಾಯಮಾನ ಕೃಷ್ಣರವರು ತೋರಲಿಲ್ಲ ಎಂಬುದೇ ಆತಂಕಕಾರಿ ಬೆಳವಣಿಗೆ.

ಏಶಿಯನ್ ಬ್ಯಾಂಕ್, ವಿಶ್ವಬ್ಯಾಂಕ್, ಬಹುರಾಷ್ಟ್ರೀಯ ಕಂಪನಿಗಳು, ಇನ್‌ಫೋಸಿಸ್, ಖೋಡೆ-ಮಲ್ಯರಂತಹ ದೇಶವಿದೇಶಗಳ ಕಂಪನಿಗಳಿಗೆ ನಾಡನ್ನು ಹರಾಜು ಹಾಕಲಾಗುತ್ತಿದೆ. ವಿಶ್ವೇಶ್ವರಯ್ಯ ಕಬ್ಬಿಣ, ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಪರಭಾರೆ ಮಾಡಲಾಗತ್ತಿದೆ. ಕುಡಿವ ನೀರು, ವಿದ್ಯುತ್ ರಂಗ, ಅರಣ್ಯ - ಪ್ರವಾಸೋದ್ಯಮ, ಶಿಕ್ಷಣ ರಂಗ, ನೀರಾವರಿ-ರಸ್ತೆ, ಹಂತ ಹಂತವಾಗಿ ಖಾಸಗೀಕರಿಸಲಾಗುತಿದೆ. ಬಂಡವಾಳಗಾರರಿಗೆ ಸಾವಿರಾರು ಕೋಟಿ ರೂ.ಗಳ ಯಥೇಚ್ಛ ರಿಯಾಯಿತಿಯೂ ಮುಂದುವರಿದಿದೆ. ಮುಚ್ಚಿದ ಕೈಗಾರಿಕೆಗಳ ನಡೆಯಲಿಲ್ಲ, ಉದ್ಯೋಗಗಳ ನಾಶ ನಿಂತಿಲ್ಲ, ಸರ್ಕಾರದ ಹುದ್ದೆಗಳನ್ನು ನಿರ್ನಾಮ ಮಾಡುವ ಹಾರ್ನಳ್ಳಿ ರಾಮಸ್ವಾಮಿ ವರದಿ ಜಾರಿಗೆ ಕೂತಿದೆ, ಪರಿಹಾರದ ಹಣಕ್ಕಾಗಿ ರೈತರ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಶಿಫಾರಸ್ಸಿನ ವಿರೇಶ ವರದಿ ಅಣಕಿಸುತ್ತಿದೆ. ಒಂದು ವರದಿಯಂತೆ ಈ ಮೂರು ವರ್ಷದಲ್ಲಿ ಸಾವಿಗೀಡಾದ ರೈತರು - 223, ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು 18 ಕ್ಕೂ ಹೆಚ್ಚು. ಲಾಕಪ್ ಡೆತ್‌ಗಳು ಸಾಕ್ಷಿ 'ವಿಚಾರಣೆ'ಯ ಒಂದು ಅಂಗವೆಂದೇ ಭಾವಿಸಲಾಗಿದೆ.



ಕೃಷ್ಣ ಸರ್ಕಾರದಡಿಯ ಗುಬ್ಬಿ ತಾಲ್ಲೂಕಿನ ಒಂದು ಸರ್ಕಾರಿ ಶಾಲೆ


ರೈತ- ಕಾರ್ಮಿಕ- ಕೂಲಿಕಾರರ ಮೇಲಿನ ದೌರ್ಜನ್ಯ ನಿಂತಿಲ್ಲ. ಮಾಲೀಕ, ಜಮೀನ್ದಾರರ ಜೊತೆ ಪೋಲೀಸರೂ ಕೈಜೋಡಿಸುತ್ತಿದ್ದಾರೆ. ಕಾರ್ಮಿಕರ ಹಕ್ಕುಗಳನ್ನು ದಮನಗೊಳಿಸುವ, ಬಂಡವಾಳಶಾಹಿ ಪರವಾದ ತಿದ್ದುಪಡಿಗಳ ಕಾರ್ಮಿಕ ಕಾನೂನು ತಿದ್ದುಪಡಿ ಶಿಫಾರಸು ಸಿದ್ದವಾಗಿ ಕುಳಿತಿದೆ. ಶಿಕ್ಷಣ-ಮಾರಾಟದ ಸರಕು, ಸರ್ಕಾರದಲ್ಲಿನ ಮಂತ್ರಿ, ಅಧಿಕಾರಿಗಳ ಭ್ರಷ್ಟಾಚಾರ ತಾರಕಕ್ಕೇರಿದೆ. ಮುನ್ಸಿಪಾಲಿಟಿಯಲ್ಲಿ 261 ಕೋಟಿ ನುಂಗಿದ ನಿದರ್ಶನ ಕೃಷ್ಣರ ಆಡಳಿತದಲ್ಲೇ. ರಸ್ತೆಗಳಿಗೆಂದು ಸಾವಿರ ಸಾವಿರ ಕೋಟಿ ಹಣ ಹರಿದು ಬಂದರೂ ಇನ್ನೂ ಶೇ 68 ರಸ್ತೆಗಳು ಕಳಪೆ ಎಂಬ ವರದಿ ಇದೆ.

ಕರ್ನಾಟಕದಲ್ಲಿ ಕೋಮುವಾದಿಗಳು ತಮ್ಮ ಗಮನ ಕೇಂದ್ರೀಕರಿಸಿದ್ದು, ರಾಜ್ಯದ ಅನೇಕ ಕಡೆ ಗಲಭೆಗಳು ಭುಗಿಲೆದ್ದರೂ, ಹೊಸ ಹೊಸ ವಿವಾದ ಹುಟ್ಟುಹಾಕಿ ವಿಭಜನೆ ತರಲು ಆರ್‌ಎಸ್‌ಎಸ್, ಬಿಜೆಪಿ ಪರಿವಾರ ಮುಂದಾಗುತಿದ್ದರೂ ಅವುಗಳನ್ನು ದಮನಿಸಲು, ತಕ್ಕ ಉತ್ತರ ಹೇಳಿ ಜನರಿಂದ ದೂರಗೊಳಿಸಲು ಆಡಳಿತಾತ್ಮಕ-ರಾಜಕೀಯ ಕ್ರಮಗಳನ್ನೇ ಕಾಂಗ್ರೆಸ್ ಸರ್ಕಾರ ಕೈಗೊಳ್ಳುತ್ತಿಲ್ಲ. ವೀರಪ್ಪನ್ ಅಪಹರಣದ ಅಟ್ಟಹಾಸ ಬೇರೆ. ಹೀಗೆ ಕೃಷ್ಣರ ಸಾಧನೆಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ರಾಜ್ಯವನ್ನು ಭಾದಿಸುವ ಪ್ರಶ್ನೆಗಳಿಗಾಗಿ ಸಚಿವ, ಮುಖ್ಯಮಂತ್ರಿಗಳನ್ನು ಭೇಟಿ ಮಾಡಬಯಸಿದರೆ ಅಕ್ಟೋಬರ್ 24, ಕಳೆಯಲಿ ಎಂದು ಹೇಳುತ್ತಿದ್ದಾರೆ ಅಧಿಕಾರಿಗಳು, ಅಧಿಕಾರಸ್ಥರು. ಅಂದು 'ಹುತಾತ್ಮ' ರಾಗಿ ಬಿಟ್ಟರೆ ಮತ್ತೈದು ವರ್ಷ ಗದ್ದುಗೆ ಖಾತರಿ ಪಡಿಸಿಕೊಳ್ಳುವಲ್ಲಿ 'ಕೃಷ್ಣ ಪರಿವಾರ' ಇದ್ದಂತಿದೆ.

ಗುಲ್ಬರ್ಗಾ ಲಾಕಪ್ ಸಾವು - ಪಾಳೇಗಾರಿ ಮೇಲುಗೈ ರಾಜಕೀಯಕ್ಕೆ ಬಲಿ

'ಈರಮ್ಮ ಹ್ಯಾಂಗೆ ಸತ್ತಿದ್ದಾಳೆ ಸರ್' ಎಂದು ಪತ್ರಕರ್ತರೊಬ್ಬರು ಕೇಳಿದಾಗ 'ಲಂಗದ ಲಾಡಿಯಿಂದ ಉರುಲು ಹಾಕಿಕೊಂಡು ಪ್ರಾಣ ಬಿಟ್ಟಿದ್ದಾಳೆ. ಅದು ಆತ್ಮಹತ್ಯೆ... ಬೇಕಾದರೆ ಪೋಸ್ಟ್‌ಮಾರ್ಟಂ ರಿಪೋರ್ಟ್ ನೋಡಿ. ಆತ್ಮಹತ್ಯೆಗೆ ಅವಕಾಶ ಮಾಡಿಕೊಟ್ಟು ಮಹಿಳಾ ಪೇದೆಗಳಿಬ್ಬರನ್ನು ಸಸ್ಪೆಂಡ್ ಮಾಡೇನಿ ನೋಡಿ" ಎನ್ನುತ್ತಾರೆ ಗುಲ್ಬರ್ಗಾ ಜಿಲ್ಲಾ ಎಸ್.ಪಿ. ಅಲೋಕ್ ಕುಮಾರ್.



ಅಫಜಲಪುರ ತಾಲೂಕಿನ ಮದ್ರಾ(ಬಿ) ಗ್ರಾಮದ ಕಾಂಗ್ರೆಸ್ ಪಕ್ಷದ ತಾಲೂಕು ಪಂಚಾಯತ್ ಸದಸ್ಯ ಈರಣ್ಣ ಯಾಕಂಚಿ ಕೊಲೆಯ ಪ್ರಕರಣದಲ್ಲಿ ವಿಚಾರಣೆಗೆಂದು ಆತನ ಜೊತೆಗೆ ಸಂಬಂಧವಿತ್ತೆನ್ನಲಾಗುತ್ತಿರುವ ಈರಮ್ಮಳನ್ನು ಸೆಪ್ಟೆಂಬರ್ 27 ರಂದು ಗುಲ್ಬರ್ಗಾದ ಬಿದ್ದಾಪುರ ಪೋಲೀಸ್ ಠಾಣೆಗೆ ಕರೆತರಲಾಗಿತ್ತು. ಇಂತಹ 'ವಿಚಾರಣೆ'ಗಳಲ್ಲಿ ಪರಿಣತಿ ಪಡೆದ ಪೋಲೀಸ್ ಅಧಿಕಾರಿಗಳ 'ನುರಿತ ತಂಡ'ವೇ ಇದೆ ಗೃಹಸಚಿವರ ಜಿಲ್ಲೆಯಲ್ಲಿ. ಅಂತಹ ಪಿ.ಎಸ್.ಐ. ಹುಲ್ಲೂರು- ಆತನ ತಂಡ ಈರಮ್ಮ ಮತ್ತು ಸಂಬಂಧಿಕರನ್ನು ವಿವಿಧ 'ಪೋಲೀಸ್ ಆತಿಥ್ಯ'ಗಳ ಪ್ರಕಾರ ವಿಚಾರಿಸಿಕೊಂಡಿದೆ. ಸಾಕಷ್ಟು ಹೊಡೆತ, ದೌರ್ಜನ್ಯ ನಡೆದಿವೆ. ಹೊಡೆತ ತಾಳಲಾರದೆ ಅಕ್ಟೋಬರ್ 1 ರಂದು ಈರಮ್ಮ ಸತ್ತೇಹೋಗಿದ್ದಾಳೆ. ವಿ.ವಿ. ಠಾಣೆಯ ವೀರಭದ್ರಯ್ಯ, ಜೇವರ್ಗಿ ಸಿಪಿಐ ರಾಠೋಡ, ಹುಲ್ಲೂರು ಜೊತೆ ಮೃಗಗಳಾಗಿ ವರ್ತಿಸಿದ್ದಾರೆ.

ಈರಮ್ಮ ಮತ್ತು ಬಂಧುಗಳನ್ನು ವಿಚಾರಣೆಗೆ ಕರೆದುತಂದಿದ್ದೇ ಅನಧಿಕೃತವಾಗಿ. ಆಕೆ ಸತ್ತ ಕೂಡಲೇ, ಅಲ್ಲಿಗೆ ಕರೆದು ತಂದು ನಾಲ್ಕು ದಿನಗಳಾಯಿತೆಂದು ಯಾರಲ್ಲಿಯೂ ಬಾಯಿಬಿಡಬಾರದೆಂದು, ನಿನ್ನೆ ಬಂದಿದ್ದೇವೆಂದು ಹೇಳಲು ಬೆದರಿಕೆ ಹಾಕಲಾಗಿದೆ. ಏಕಾಏಕಿ ಹೆಣವನ್ನು 'ಪೋಸ್ಟ್‌ಮಾರ್ಟಂ' ಶಾಸ್ತ್ರವನ್ನು ಮುಗಿಸಿ, ನೂರಾರು ಪೋಲೀಸರ ದಂಡಿನೊಂದಿಗೆ ಆಕೆಯ ಊರಿನಲ್ಲಿ (ಮುದ್ರಾ) ಬೆಂಕಿ ಹಚ್ಚಿ ದಹಿಸಲಾಗಿದೆ. 'ಸುಡಬ್ಯಾಡಿಯಪ್ಪಾ' ನಮ್ಮ ಮಗಳ ಹೆಣ ನಮಗಾ ಕೊಡ್ರಿ, ಮಾರಿನಾದ್ರೂ ನೋಡ್ತೀವಿ' ಎಂದು ತಂದೆ-ತಾಯಿಗಳು ಎಷ್ಟೇ ರೋಧಿಸಿ ಅವಲತ್ತುಕೊಂಡರೂ ಕೇಳದೇ ಹೆಣ ಸುಡಿಸಿದ್ದಾರೆ ಪೋಲೀಸರು. ಈರಮ್ಮ ಲಿಂಗಾಯಿತ ಜಾತಿಗೆ ಸೇರಿದಾಕೆ. ಈ ಜಾತಿಯಲ್ಲಿ ಹೆಣವನ್ನು ಮಣ್ಣಿನಲ್ಲಿ ಹೂಳಲಾಗುತ್ತದೆ ಹೊರತು ಸುಡುವುದಿಲ್ಲ. ಆಕೆ ಸತ್ತದ್ದರ ಎಳ್ಳಷ್ಟು ಪುರಾವೆಗಳೂ ಸಿಗದಂತೆ ನೋಡಿಕೊಂಡಿದ್ದಾರೆ ನೇತೃತ್ವ ವಹಿಸಿರುವ ಎಸ್.ಪಿ.ಸಾಹೇಬರು!

ಈ ಒಟ್ಟು ಪ್ರಕರಣದ ಹಿನ್ನೆಲೆ ಹೀಗಿದೆ. ಈರಣ್ಣ ಯಕಂಚಿ ಕೊಲೆಯಾದುದು ಎರಡು ವರ್ಷಗಳ ಹಿಂದೆ. ಆತನ ಹೆಣವೂ ಸಿಕ್ಕಿರಲಿಲ್ಲ. ಇತ್ತೀಚೆಗೆ ಗೋಣಿ ಚೀಲದ ಮೂಟೆಯಲ್ಲಿ ಸಿಕ್ಕ ಸುಟ್ಟ ಹೆಣದ ಎಲುಬುಗಳನ್ನು ಹಾಗೂ ದೊರೆತ ಉಂಗುರವನ್ನು ಫೋರೆನ್ಸ್‌ಸಿಕ್ ಪರೀಕ್ಷೆಯಿಂದ ಅದು ಠಾಣೆಯಾಗಿದ್ದ ಈರಣ್ಣನದೇ ಹೆಣವೆಂದು ಸಾಬೀತಾಯಿತು. ರಾಜಕೀಯ ವೈರತ್ವಕ್ಕಾಗಿ ಕೊಲೆ ನಡೆದಿದೆ ಎಂಬ ಸಂಗತಿ ಹಾಗೂ ಇದನ್ನು ಈಗಾಗಲೇ ಕುಖ್ಯಾತವಾಗಿರುವ 'ಸುಫಾರಿ ಕಿಲ್ಲರ್ಸ್' ಮಾಫಿಯಾ ಮಾಡಿಸಿದೆಯೆಂಬ ಸಂಗತಿಗಳು ಹೊರಬಂದಿವೆ. ಇದೇ ಪ್ರಕರಣ ಬಳಸಿ ತಮ್ಮ ಪ್ರತಿಸ್ಪರ್ಧಿ 'ಸುಫಾರಿ ಮಾಫಿಯಾ' ನಾಯಕರನ್ನು ಹಣಿಯಲು ಇನ್ನೊಂದು ತಂಡ ಕಾರ್ಯಾಚರಣೆಗೆ ಇಳಿದುದುರ ಫಲವೇ ಈರಮ್ಮನ ವಿಚಾರಣೆ. ಬೇಕಾದ ಉತ್ತರ ಪಡೆಯಲು ಇದಕ್ಕೆ ಪೋಲೀಸರದ್ದೇ ಸಾರಥ್ಯ ಎನ್ನುತ್ತಾರೆ ಅಲ್ಲಿನ ಜನ.



ವಿಚಾರಣೆ - ಅಪರಾಧದ ಮೂಲ ಶೋಧಿಸಲು ಬೇಕಾದಷ್ಟು ಮಾಹಿತಿ-ವಿಧಾನಗಳಿದ್ದರೂ ಲಾಕಪ್‌ನಲ್ಲಿ ಕೊಲ್ಲುವಷ್ಟು ಉತ್ಸುಕತೆ, ನಿಷ್ಠೆಯನ್ನು ಪೋಲೀಸರು ತೋರಿಸಿದ್ದಾರೆ. ಕೊಂದದ್ದಕ್ಕೆ ಸಾಕ್ಷಿ ನಾಶಪಡಿಸಲು ಮುಂದಾಗಿದ್ದಾರೆ. ಈರಣ್ಣ ಹಾಗೂ ಈರಮ್ಮಳ ಕೊಲೆಗಳ ಹಿಂದೆ ಇರುವವರು ಗುಲ್ಬರ್ಗಾದ ಪಾತಕ ಜಗತ್ತಿನ ಕುಖ್ಯಾತಿಯ ಶಕ್ತಿಗಳೇ,ಪಾಳೇಗಾರಿ ಭೂಮಾಲಿಕರ ಮಾಫಿಯಾಗಳೇ. ಈ ಇಡೀ ಪ್ರಕರಣ ರಾಜ್ಯದಲ್ಲಿ ಸುದ್ದಿಯಾದರೂ ತವರಿನವರೇ ಆದ ಗೃಹಸಚಿವರು ಮೌನವಾಗಿದ್ದಾರೆ. ಆರೋಪಿಗಳು ಏನು ಮಾಡಿದರೂ ನಡೆಯುತ್ತದೆ, ದಕ್ಕಿಸಿಕೊಳ್ಳಬಹುದು ಎಂಬ ಗತ್ತಿನಲ್ಲಿದ್ದಾರೆ. ಈ ಎರಡೂ ಪ್ರಕರಣಗಳ ಸಮಗ್ರ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಈಗ ಒತ್ತಡದ ಬಳಿಕ ಸಿಓಡಿ ತನಿಖೆ ಆದೇಶವಾಗಿದೆ. ಅದು ನಡೆಸಲಿ ಆದರೆ ಇದನ್ನು ನ್ಯಾಯಾಂಗ ತನಿಖೆಗೂ ಒಪ್ಪಿಸಬೇಕೆಂಬುದು ಗುಲ್ಬರ್ಗಾ ಜಿಲ್ಲಾ ಸಿಪಿಐ(ಎಂ) ಆಗ್ರಹ. ಅದಕ್ಕಾಗಿ ಸಮಾನ ಮನೋಭಾವದವರೊಂದಿಗೆ ಹೋರಾಟ.

ಇತ್ತ ರಾಜಧಾನಿ ಮಗ್ಗುಲಲ್ಲೇ ಇರುವ ತುಮಕೂರಿನಲ್ಲೂ ವಿಚಾರಣೆಗೆಂದು ಕರೆದುತಂದ ಆರೋಪಿಯಲ್ಲದ ವಸಂತಕುಮಾರನನ್ನು ಠಾಣೆಯಲ್ಲೇ ಹೊಡೆದು ಕೊಂದದ್ದರ ವಿಚಾರಣೆಗಾಗಿ ಪ್ರತಿಭಟನೆ ಆರಂಭಗೊಂಡಿದೆ.

ಸಾಧನೆಗಳ ಬಡಾಯಿ ಕೊಚ್ಚಿಕೊಳ್ಳುವ ಕೃಷ್ಣ-ಖರ್ಗೆಯವರ 'ಮೌನ' ಖಂಡನೀಯ. ಕೊಲೆಗಡುಕ ಕಾಂಗ್ರೆಸ್ ಸರ್ಕಾರಕ್ಕೆ ಜನರ ಧಿಕ್ಕಾರ.

ಕಳಪೆ ಬಿತ್ತನೆ ಬೀಜ - ಗೆಡ್ಡೆಯೇ ಇಲ್ಲದ ಆಲೂಗೆಡ್ಡೆ ಬೆಳೆ

ಉಲುಸಾಗಿ ಬೆಳೆದ ಗಿಡ, ದಾರಿ ಹೋಕರ ಕಣ್ಣಿನ ದೃಷ್ಟಿ ತಗುಲಿತೋ ಎನ್ನುವಷ್ಟು ಸೊಂಪಾದ ಬೆಳೆ. ಗಿಡಗಳನ್ನು ನೋಡಿಯೇ ರೈತರು ಕನಸನ್ನು ಕಟ್ಟತೊಡಗಿದರು. ಈ ಬಾರಿ ಉತ್ತಮ ಬೆಳೆ ಬರುವುದೆಂದು ತೆಂಗಿನ ನುಸಿ ಪೀಡೆಯಿಂದ, ರೇಷ್ಮೆ ಬೆಲೆ ಕುಸಿತದಿಂದ ನೊಂದು ಬಸವಳಿದ ರೈತರಿಗೆ ಆಲೂಗೆಡ್ಡೆಯ ಸೊಂಪಾದ ಗಿಡಗಳನ್ನು ನೋಡಿ ಸಮಾಧಾನ ತಂದಿತ್ತು. ಗಿಡ ಬೆಳೆದಂತೆ ರೈತರ ತವಕ ಹೆಚ್ಚಾಗತೊಡಗಿತು. ಉಲುಸಾಗಿ ಬೆಳೆದ ಗಿಡದ ಬುಡದ ಬಳಿಯ ಮಣ್ಣು ಕೆದಕಿ ಫಲ ಎಷ್ಟಿದೆ ಎಂಬುದನ್ನು ನೋಡಿ ತನ್ನ ಜಮೀನಿನ ಬೆಳೆಯ ಅಂದಾಜು ಮಾಡಲು ಹೊರಟ ರೈತರಿಗೆ ನಿರಾಶೆ ಕಾದಿತ್ತು. ತಾಯಿ ಬೇರಿಗೆ 6 ರಿಂದ 8 ಗೆಡ್ಡೆಗಳು ಬಿಡತ್ತವೆ. ಜಲಂದರ್ ಬೀಜವಾದ್ದರಿಂದ ಈ ಸಂಖ್ಯೆ ಇನ್ನೂ ಹೆಚ್ಚಿರುತ್ತವೆ. ಆದರೆ ಇಲ್ಲಿ ತಾಯಿ ಬೇರು (ಬಿತ್ತನೆ ಮಾಡಿದ ಗೆಡ್ಡೆ) ಬಿಟ್ಟರೆ ಬೇರೆ ಯಾವುದೇ ಗೆಡ್ಡೆ ಕಾಣಸಲಿಲ್ಲ. ಗಾಬರಿಗೊಂಡು ಮತ್ತಷ್ಟು ಗಿಡಗಳ ಬುಡದ ಬಳಿ ಮಣ್ಣು ಕೆದಕಿ ನೋಡಿದರು. ಹಲವು ಗಿಡಗಳನ್ನು ಕಿತ್ತು ನೋಡಿದರು ಯಾವುದೇ ಗಿಡದಲ್ಲೂ ಫಲ ಕಾಣದೆ ರೈತರು ಈಗ ಕಂಗಾಲಾಗಿದ್ದಾರೆ. ಗೆಡ್ಡೆ ಬಿಡುವುದಿರಲಿ ಗೆಡ್ಡೆ ಬಿಡುವ ಸೂಚನೆಯೂ ಕಾಣಲಿಲ್ಲ.

ತಮ್ಮ ಜಮೀನು ಮಾತ್ರವಲ್ಲ, ಈ ಬಿತ್ತನೆ ಬೀಜ ಬಿತ್ತಿದ ಹಲವು ರೈತರು ತನ್ನಂತೆ ಇದೇ ರೀತಿ ಮೋಸಕ್ಕೆ ಒಳಗಾಗಿರುವುದು ಕ್ರಮೇಣ ತಿಳಿದು ಮತ್ತಷ್ಟು ದಿಗ್ಭ್ರಾಂತರಾಗಿದ್ದಾರೆ. ಎಕರೆಗೆ 30 ರಿಂದ 35 ಸಾವಿರ ರೂ ಖರ್ಚು ಮಾಡಿ ಹಗಲು ರಾತ್ರಿ ಮಕ್ಕಳಂತೆ ಸಾಕಿ ಸಲುಹಿದ ರೈತರು ಗೊಡ್ಡು ಗಿಡ ನೋಡಿ ಪರಿತಪಿಸುವಂತಾಗಿದೆ.

ಬೆಂಗಳೂರಿನ ಹೊಸಪೇಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಕೋಲಾರದ ಚಿಕ್ಕಬಳ್ಳಾಪುರ, ಮಾಲೂರು, ಬಂಗಾರಪೇಟೆ, ಶ್ರೀನಿವಾರಪುರ ಹೀಗೆ ರಾಜ್ಯದ ಹತ್ತಾರು ಜಿಲ್ಲೆಗಳಲ್ಲಿ ಕಳಪೆ ಬೀಜ ಬಿತ್ತನೆಯಿಂದಾಗಿ ಆಲೂಗೆಡ್ಡೆ ಬೆಳೆದ ಸಾವಿರಾರು ರೈತರು ಅನುಭವಿಸುತ್ತಿರುವ ವೇದನೆ ಇದು.

ಕೇಂದ್ರ ಸರ್ಕಾರದ ವಿನಾಶಕಾರಿ ಆಮದು ನೀತಿಯಿಂದಾಗಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲವಾಗಿದೆ. ಸಬ್ಸಿಡಿಗಳ ಕಡಿತದಿಂದಾಗಿ ರಸಗೊಬ್ಬರ ಮತ್ತು ಕೃಷಿ ಉಪಕರಣಗಳ ಬೆಲೆ ಬಡ ರೈತರ ಕೈಗೆಟುಕದ ಸ್ಥಿತಿ ಒಂದೆಡೆಯಾದರೆ, ರಾಜ್ಯ ಸರ್ಕಾರ ವಿದ್ಯುತ್ ದರ ಏರಿಸಿ, ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸುವ ಮೂಲಕ ರೈತರನ್ನು ಮತ್ತಷ್ಟು ಹಿಂಡುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಂತಹ ಜನ ವಿರೋಧಿ ನೀತಿಗಳಿಂದಾಗಿ ತತ್ತರಿಸುತ್ತಿರುವ ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವಂತ ಗಂಬೀರ ಸ್ಥಿತಿಯಲ್ಲಿ ಬರಗಾಲ ರಾಜ್ಯದ ರೈತರನ್ನು ಬಿರುಗಾಳಿಯಂತೆ ಅಪ್ಪಳಿಸಿದೆ.

ಸರ್ಕಾರದ ನಿರ್ಲಕ್ಷ್ಯ

ರೈತರು ಬಿಜ ಮಾರಾಟಗಾರರ ಮೋಸಕ್ಕೆ ಬಲಿಯಾಗಿ ಲಕ್ಷಾಂತರ ರೂ ಕಳೆದುಕೊಂಡು ಪರಿತಪಿಸುತ್ತಿದ್ದರೂ ಸರ್ಕಾರ ಅವರ ನೆರವಿಗೆ ಬಂದಿಲ್ಲ. ಬೀಜ ಮಾರಾಟ ಮಾಡಿರುವ ವರ್ತಕರ ವಿರುದ್ಧ ಕ್ರಮ ಜರುಗಿಸಲು ಮುಂದಾಗಲೂ ಇಲ್ಲ. ಯಾವ ಜನಪ್ರತಿನಿಧಿಯಾಗಲಿ, ಅಧಿಕಾರಿಗಳಾಗಲಿ ಇತ್ತ ಸುಳಿದಾಡದಿರುವುದು ರೈತರನ್ನು ಮತ್ತಷ್ಟು ಕೆರಳಿಸಿದೆ. ಸಾವಿರಾರು ರೂ. ಖರ್ಚು ಮಾಡಿ ಬೆಳೆದ ಗಿಡಗಳನ್ನು ಕಿತ್ತು ಹಾಕಲು ಮುಂದಾಗಿದ್ದಾರೆ.

ಪರಿಹಾರಕ್ಕಾಗಿ ಆಗ್ರಹ

ಕಳಪೆ ಬಿತ್ತನೆ ಬೀಜ ಬಿತ್ತನೆಯಿಂದಾಗಿ ಮೋಸಕ್ಕೆ ಒಳಗಾಗಿ ನಷ್ಟ ಅನುಭವಿಸಿರುವ ರೈತರಿಗೆ ಸರ್ಕಾರ ತಕ್ಷಣ ಪರಿಹಾರ ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿ ಸರ್ಕಾರವನ್ನು ಆಗ್ರಹಿಸಿದೆ.

ರೈತರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿ, ಉದಾರೀಕರಣ ವಿನಾಶಕಾರಿ ಆಮದು ನೀತಿಯಿಂದಾಗಿ ನಾಡಿನ ರೈತರು ಆತ್ಮಹತ್ಯೆಗಳಿಗೆ ಗುರಿಯಾಗುತ್ತಿರುವ ಗಂಬೀರ ಸ್ಥಿತಿ ಎದುರಿಸುತ್ತಿದ್ದಾರೆ. ಬರಗಾಲದಿಂದಾಗಿ ರೈತರು ಮತ್ತು ಕೂಲಿಕಾರರ ಬದುಕು ತೀರ ಶೋಚನೀಯ ಸ್ಥಿತಿಯಲ್ಲಿದೆ. ಇಂತಹ ಸಂದರ್ಭದಲ್ಲೇ ಆಲೂಗೆಡ್ಡೆ ಬೆಳೆ ನಾಶವಾಗಿದ್ದರೂ ಸರ್ಕಾರ ರೈತರ ನೆರವಿಗೆ ಬರುತ್ತಿಲ್ಲ ಎಂದು ಆರೋಪಿಸಿರುವ ಪ್ರಾಂತ ರೈತ ಸಂಘದ ಮುಖಂಡರು ಆಲೂಗೆಡ್ಡೆ ಬೆಳೆಯಿಂದ ನಷ್ಟಕ್ಕೊಳಗಾದ ರೈತರಿಗೆ ಪ್ರತಿ ಎಕರೆಗೆ 30 ಸಾವಿರ ರೂ. ಪರಿಹಾರ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸಿದ್ದಾರೆ. ಕಳಪೆ ಬಿತ್ತನೆ ಬೀಜಗಳ ಮಾರಾಟಗಾರರ ಪರವಾನಿಗೆಗಳನ್ನು ರದ್ದು ಮಾಡಬೇಕೆಂದು ಒತ್ತಾಯಿಸಿರುವ ಸಂಘ ಇಂತಹ ವರ್ತಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದೆ. ಕಳಪೆ ಬಿತ್ತನೆ ಬೀಜಗಳ ಮಾರಾಟವನ್ನು ಸಂಪೂರ್ಣವಾಗಿ ನಿಲ್ಲಿಸಲು ವಿಫಲವಾಗಿರುವ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು ತಮ್ಮ ನಿರ್ಲಕ್ಷತೆಯನ್ನು ಬಿಟ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಂಘ ಆಗ್ರಹಿಸಿದೆ.

ಸಚಿವರ ಭರವಸೆ

ಆಲೂಗಡ್ಡೆ ಬೆಳೆ ಹಾನಿಯಿಂದಾಗಿ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುವುದಾಗಿ ತೋಟಗಾರಿಕೆ ಸಚಿವರಾದ ಶಿವಣ್ಣ ರೈತರಿಗೆ ಭರವಸೆ ನೀಡಿದ್ದಾರೆ. ಅಕ್ಟೋಬರ್ 19 ರಂದು ಬೆಂಗಳೂರಿನಲ್ಲಿ ಸಚಿವರನ್ನು ಭೇಟಿ ಮಾಡಿದ ಕರ್ನಾಟಕ ಪ್ರಾಂತ ರೈತ ಸಂಘದ (KPRS) ಮುಖಂಡರಿಗೆ ಸಚಿವರು ಈ ಭರವಸೆ ನೀಡಿದರು. ತಕ್ಷಣ ಅಧಿಕಾರಿಗಳ ಸಭೆ ಕರೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು.

ಇದಕ್ಕೂ ಮುನ್ನ ಹೊಸಕೋಟೆ, ಆನೇಕಲ್ ಮತ್ತಿತರೆ ತಾಲೂಕಿನ ರೈತರು KPRS ನೇತೃತ್ವದಲ್ಲಿ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ನಡೆಸಿ ಮುಖ್ಯಮಂತ್ರಿಗಳ ಮನೆ ಎದುರು ಸರ್ಕಾರದ ರೈತರ ಬಗೆಗಿನ ನಿರ್ಲಕ್ಷ್ಯವನ್ನು ಖಂಡಿಸಿ ಘೋಷಣೆ ಕೂಗುತ್ತಾ ಪ್ರತಿಭಟನಾ ಪ್ರದರ್ಶನ ನಡೆಸಿದರು.

KPRS ನ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಬೆಂಗಳೂರು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ವೆಂಕಟಾಚಲಯ್ಯ, ಕಾರ್ಯದರ್ಶಿ ಚಂದ್ರುತೇಜಸ್ವಿ, ಹೊಸಕೋಟೆ ತಾಲೂಕಿನ ರೈತ ಮುಖಂಡರಾದ ಮನೋಹರ್, ಸು.ರಂ. ರಾಮಯ್ಯ ಹಾಗೂ ಶಿವರಾಮರೆಡ್ಡಿ ಮುಂತಾದವರು ಈ ಪ್ರತಿಭಟನಾ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

- ಸಿದ್ದಯ್ಯ

ಕುಂದಾಪುರದಲ್ಲಿ ರೈತರಿಂದ 'ಮೆಸ್ಕಾಂ' ಮುತ್ತಿಗೆ

ರಾಜ್ಯ ಸರ್ಕಾರವು ಇತ್ತೀಚೆಗೆ ಎಲ್ಲಾ ಜನ ಸಾಮಾನ್ಯರು ಹಾಗೂ ರೈತರು ಉಪಯೋಗಿಸುವ ವಿದ್ಯುತ್ತಿಗೆ ಹೆಚ್ಚಿಸಿದ ದರವನ್ನು ಕೂಡಲೇ ಹಿಂತೆಗೆಯಬೇಕೆಂದು ಒತ್ತಾಯಿಸಿ, ಕುಂದಾಪುರಲ್ಲಿ ಅಕ್ಟೋಬರ್ 9 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಮಂಗಳೂರು ವಿದ್ಯುತ್ ವಿತರಣಾ ಕಂಪನಿಯ ಕುಂದಾಪುರ ವಿಭಾಗಯ ಕಛೇರಿಗೆ ಮುತ್ತಿಗೆ ಹಾಕಿದರು. ರೈತರ ಅನಧಿಕೃತ ಸಂಪರ್ಕವನ್ನು ದಂಡವಿಲ್ಲದೆ ಸಕ್ರಮಗೊಳಿಸಬೇಕು, ಪಂಪ್‌ಸೆಟ್ ಮೀಟರೀಕರಣವನ್ನು ಕೈಬಿಡಬೇಕು, ಸಂಕಷ್ಟದಲ್ಲಿರುವ ರೈತರ ಹಳೆ ಬಾಕಿಗಳನ್ನು ಮನ್ನಾ ಮಾಡಬೇಕು. ಕೃಷಿಗೆ ರಿಯಾಯಿತಿ ದರದಲ್ಲಿ ಸಮರ್ಪಕ ವೋಲ್ಟೇಜ್‌ನೊಂದಿಗೆ ವಿದ್ಯುತ್ ಒದಗಿಸಬೇಕು. ಹೆಚ್ಚಿಸಿದ ಗೃಹ ಬಳಕೆಯ ವಿದ್ಯುತ್ ದರವನ್ನು ಕಡಿಮೆ ಮಾಡಬೇಕು, ವಿದ್ಯುತ್ ಕ್ಷೇತ್ರ ಖಾಸಗೀಕರಣವನ್ನು ನಿಲ್ಲಿಸಬೇಕು ಎನ್ನುವ ಪ್ರಮುಖ ಬೇಡಿಕೆಗಳೊಂದಿಗೆ ಮೆರವಣಿಗೆಯಾಗಿ ಬಂದ ರೈತರು, ಪಂಪುಸೆಟ್ಟು ಬಳಕೆದಾರರು, ಗೃಹಬಳಕೆ ದಾರರು ಮೆಸ್ಕಾಂ ಕಛೇರಿಗೆ ಮುತ್ತಿಗೆ ಹಾಕಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಇದಕ್ಕೂ ಮೊದಲು ತಹಶೀಲ್ದಾರರ ಕಛೇರಿ ಎದುರು ಪ್ರದರ್ಶನ ನಡೆಸಿ, ತಹಶೀಲ್ದಾರರನ್ನು ಭೇಟಿಯಾಗಿ, ಅಕ್ರಮ ಸಕ್ರಮ ಅರ್ಜಿಗಳನ್ನು ಕೂಡಲೇ ಇತ್ಯರ್ಥಗೊಳಿಸಲು, ಕಬ್ಬು ಬೆಳೆಗಾರರಿಗೆ ಬ್ರಹ್ಮಾವರ ಸಕ್ಕರೆ ಕಾರ್ಖಾನೆಯಿಂದ ಬಾಕಿ ಹಣವನ್ನು ಕೂಡಲೇ ಪಾವತಿಸುವಂತೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮನವಿ ಅರ್ಪಿಸಲಾಯಿತು. ಹೋರಾಟದ ನೇತೃತ್ವವನ್ನು ತಾಲೂಕು ರೈತ ಸಂಘದ ಅಧ್ಯಕ್ಷರಾದ ಗೋವಿಂದ ಶೆಟ್ಟಿಗಾರ್, ಕಾರ್ಯದರ್ಶಿ ದಾಸು ಭಂಡಾರಿ ಹಾಗೂ ಇತರ ಮುಖಂಡರಾದ ಕೆ.ಶಂಕರ ಮಹಾಬಲ ವಡೇರ ಹೊಬಳಿ, ಕರಿಯ ದೇವಾಡಿಗ, ಗೋಪಾಲ ಶೆಟ್ಟಿಗಾರ್, ಗೋಪಾಲ ಕುಲಾಲ ಇವರು ವಹಿಸಿದ್ದರು.

ದ.ಕ. ಸಂಘಟನಾ ಸಮಾವೇಶ

ಜಾಗತೀರಣ ಮತ್ತು ಆರ್ಥಿಕ ಉದಾರೀಕರಣ ನೀತಿಗಳ ಹೆಸರಿನಲ್ಲಿ ನಡೆಯುತ್ತಿರುವ ಹಗಲು ದರೋಡೆಯಿಂದಾಗಿ ಹೆಚ್ಚಿನ ಕೈಗಾರಿಕೆಗಳು ತೀವ್ರ ಬಿಕ್ಕಟ್ಟಿನಲ್ಲಿವೆ. ಇಂತಹ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಹೊಸ ವಿಭಾಗಗಳಿಗೆ ನಮ್ಮ ಸಂಘಟನೆಯನ್ನು ವಿಸ್ತರಿಸುವುದರೊಂದಿಗೆ ಎದುರಾಗುವ ತೀವ್ರತರದ ಸವಾಲುಗಳು ಸಮರ್ಥವಾಗಿ ಎದುರಿಸಲು ಸಜ್ಜಾಗಬೇಕೆಂದು ಸಿಐಟಿಯು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಮಾಧವ ಕರೆ ನೀಡಿದರು. ಅವರು ಸೆಪ್ಟೆಂಬರ್ 10 ರಂದು ಮಂಗಳೂರಿನಲ್ಲಿ ನಡೆದ ಸಿಐಟಿಯು ದ.ಕ. ಜಿಲ್ಲಾ ಸಂಘಟನಾ ಸಮಾವೇಶದ ಸಂಘಟನಾ ವರದಿಯನ್ನು ಮಂಡಿಸುತ್ತಾ ಮಾತನಾಡುತ್ತಿದ್ದರು. ಸಂಘಟನಾ ವರದಿಯ ಮೇಲೆ ಗಂಭೀರ ಚರ್ಚೆಗಳಾದವು. ಚರ್ಚೆಯಲ್ಲಿ 13 ಮಂದಿ ಭಾಗವಹಿಸಿದ್ದರು. ಜಿಲ್ಲಾ ಸಮಿತಿಯ ಪರವಾಗಿ ಬಿ.ಮಾಧವ ಉತ್ತರ ನೀಡಿದರು. ಹೊಸ ಜಿಲ್ಲಾ ಸಮಿತಿಯನ್ನು, ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷರಾಗಿ ಬಿ.ಮಾಧವ, ಉಪಾಧ್ಯಕ್ಷರುಗಳಾಗಿ ಕೆ.ಆರ್. ಶ್ರೀಯಾನ್, ಸಂಜೀವ ಬಂಗೇರ ರಮಣಿ, ಪ್ರ.ಕಾರ್ಯದರ್ಶಿಯಾಗಿ ವಸಂತ ಆಚಾರಿ, ಕಾರ್ಯದರ್ಶಿಗಳಾಗಿ ಜೆ.ಬಾಲಕೃಷ್ಣ ಶೆಟ್ಟಿ, ಬಿ.ಎಂ.ಭಟ್, ಕೆ.ಮಂಜಪ್ಪ ಹಾಗೂ ಕೋಶಾಧಿಕಾರಿಯಾಗಿ ಕೆ.ಸುಕುಮಾರ್ ಆಯ್ಕೆಯಾದರು. 41 ಮಂದಿಯ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಮಾವೇಶದ ಅಧ್ಯಕ್ಷತೆಯನ್ನು ಕಾಂ. ಶ್ರೀಯಾನ್ ವಹಿಸಿದ್ದರು.

ತ್ರಿಪುರಾ : ಜನತೆಯ ಹೋರಾಟಕ್ಕೆ ಸೌಹಾರ್ದತೆ

ಮಂಗಳೂರು: ತ್ರಿಪುರಾ ರಾಜ್ಯದಲ್ಲಿ ಐಎನ್‌ಪಿಟಿ ಉಗ್ರಗಾಮಿ ಸಂಘಟನೆ ನಡೆಸುತ್ತಿರುವ ಕಗ್ಗೊಲೆಯನ್ನು ಖಂಡಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ದಿನಾಚರಣೆಯನ್ನು ನಡೆಸಲಾಯಿತು. ಜಿಲ್ಲಾಧಿಕಾರಿಗಳ ಕಛೇರಿಯೆದುರಿನಲ್ಲಿ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಶ್ರೀಯಾನ್ ಮಾತನಾಡುತ್ತಾ ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ಖಂಡಿಸಿದರು. ಈ ಕೂಡಲೇ ಕೇಂದ್ರ ಸರ್ಕಾರವು ತ್ರಿಪುರಾಕ್ಕೆ ಭದ್ರತಾಪಡೆಗಳನ್ನು ಕಳುಹಿಸುವ ಮೂಲಕ ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸಹಕರಿಸಬೇಕೆಂದು ಅವರು ಈ ಸಂದರ್ಭದಲ್ಲಿ ಆಗ್ರಹಿಸಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ (ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವ, ರಾಜ್ಯ ಸಮಿತಿ ಸದಸ್ಯರಾದ ರಾಮಚಂದ್ರಉಬ್ಬಿಲ್, ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಮುಖಂಡರಾದ ವಸಂತ ಆಚಾರಿ, ವಾಸುಗಟ್ಟಿ, ಯಾದವಶೆಟ್ಟಿ ಮುಂತಾದವರು ವಹಿಸಿದ್ದರು. ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿ ಯವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಬಾಲಕೃಷ್ಣ ಶೆಟ್ಟಿಯವರು ಸ್ವಾಗಸಿದರೆ ವಸಂತ ಆಚಾರಿಯವರು ವಂದಿಸಿದರು.

ಚಳ್ಳಕೆರೆ: ಪಂಜಿನ ಮೆರವಣಿಗೆ - ತ್ರಿಪುರಾ ಜನತೆಯ ಸೌಹಾರ್ದ ಬೆಂಬಲಕ್ಕಾಗಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ತ್ರಿಪುರಾ ದಿನಾಚರಣೆಯನ್ನು ಸೆಪ್ಟೆಂಬರ್ 30 ರಂದು ಆಚರಿಸಲಾಯಿತು. ತ್ರಿಪುರಾ ಜನತೆಗೆ ಅಲ್ಲಿನ ಎಡರಂಗ ಸರ್ಕಾರಕ್ಕೆ ಸೌಹಾರ್ದ ಬೆಂಬಲ ಸೂಚಿಸಬೇಕು, ಉಗ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕಲು ಮಿಲಿಟರಿ ನೆರವನ್ನು ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಸಿಪಿಐ(ಎಂ) ಶಾಖೆಯ ನೇತೃತ್ವದಲ್ಲಿ ಪಂಜಿನ ಮೆರವಣಿಗೆ ನಡೆಸಲಾಯಿತು. ಎಪಿಎಂಸಿ ಯಾರ್ಡ್‌ನಿಂದ ನೆಹರು ಸರ್ಕಲ್ ವರೆಗೆ ಮೆರವಣಿಗೆ ನಡೆಸಲಾಯಿತು. ಸುಮಾರು 100 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಈ ಕಾರ್ಯಕ್ರಮದ ನೇತೃತ್ವವನ್ನು ಶಾಖೆಯ ಕಾರ್ಯದರ್ಶಿ ಕಾಂ. ಟಿ.ನಿಂಗಣ್ಣ, ಕಾರ್ಯಕರ್ತರಾದ ನಾಗರಾಜ್, ಸುರೇಶ, ತಿಪ್ಪಮ್ಮ, ಬೊಮ್ಮಯ್ಯ, ಟಿ.ತಿಪ್ಪೇಸ್ವಾಮಿ ಮುಂತಾದವರು ವಹಿಸಿದ್ದರು.

ವಿಚಾರಮಂಥನಕ್ಕೆ ಆಹ್ವಾನ

- ಧರ್ಮನಿರಪೇಕ್ಷತೆ,
- ವಿದ್ಯುತ್ ಖಾಸಗೀಕರಣ

ಕುರಿತ

ರಾಷ್ಟ್ರೀಯ ವಿಚಾರಸಂಕಿರಣ,
ನವೆಂಬರ್ 9-10, 2002

ಸೆನೆಟ್ ಹಾಲ್
ಬೆಂಗಳೂರು

ಬನ್ನಿ ಪಾಲ್ಗೊಳ್ಳಿ

ಜಮ್ಮು ಕಾಶ್ಮೀರದ ಚುನಾವಣೆ


ಹೊಸ ಸರ್ಕಾರದ ಮುಂದಿರುವ ಸವಾಲುಗಳು


ಜಮ್ಮು-ಕಾಶ್ಮೀರದ ಚುನಾವಣೆಗಳ ಫಲಿತಾಂಶ ಅತ್ಯಂತ ಮಹತ್ವದ ಸಂದೇಶವನ್ನು ನೀಡಿವೆ. ಹಾಗೇ ಮುಂದೆ ರಚಿತವಾಗುವ ಸರ್ಕಾರದ ಮೇಲೆ ಗುರುತರ ಜವಾಬ್ದಾರಿ ಹೊರಿಸಿದೆ

ಕಾಶ್ಮೀರ ಕಣಿವೆಯಲ್ಲಿ ಚುನಾವಣಾ ಪ್ರಕ್ರಿಯೆ ಮುಗಿದಿದೆ. ಜಮ್ಮು ಕಾಶ್ಮೀರದಲ್ಲಿ ತನ್ನ ದುರುದ್ದೇಶಗಳಿಗೆ ಆಯಕಟ್ಟಿನ ಜಾಗವನ್ನಾಗಿ ಬಳಸಿಕೊಳ್ಳಲು ಹೊಂಚು ಹಾಕುತ್ತಿರುವ ಸಾಮ್ರಾಜ್ಯಶಾಹಿ ಅಮೆರಿಕಾವು ಸೇರಿದಂತೆ ಜಗತ್ತಿನ ರಾಷ್ಟ್ರಗಳೆಲ್ಲಾ ಬೆರಗಾಗುವಷ್ಟು ಸಲೀಸಾಗಿ ಚುನಾವಣೆಗಳು ನಡೆದಿದೆ.

ಮಾತ್ರವಲ್ಲ ಪ್ರತ್ಯೇಕತಾವಾದಿ ಭಯೋತ್ಪಾದಕರ ಹಿಂಸಾಚಾರದ ವಿರುದ್ಧ ಸೆಟೆದು ನಿಂತ ಕಾಶ್ಮೀರಿ ಮತದಾರರು ಜೀವದ ಹಂಗುತೊರೆದು ತಾವು ಜಾತ್ಯಾತೀತ ಭಾರತದ ಪ್ರಜಾತಂತ್ರದ ಪರ ಎಂಬುದನ್ನು ಜಗತ್ತಿಗೆ ಸಾರಿದರು. ಪಕ್ಕದ ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತದ ಅಡಿಯಲ್ಲಿ ನಡೆದ ನಾಟಕೀಯ ಚುನಾವಣೆಯಲ್ಲಿ ಮೂಲಭೂತವಾದಿಗಳ ಕೈ ಮೇಲಾಗಿದೆ. ಅಂತರ್ರಾಷ್ಟ್ರೀಯ ಸಾರ್ವಜನಿಕ ಅಭಿಪ್ರಾಯವು ಈ ಎರಡೂ ಚುನಾವಣೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದು, ಜಮ್ಮು ಕಾಶ್ಮೀರ ಚುನಾವಣೆಯು ಭಾರತದ ಜನತೆಯ ರಾಜಕೀಯ ಮುತ್ಸದ್ದಿತನವನ್ನು ಎತ್ತಿ ತೋರಿಸಿದೆ.

ಭಯೋತ್ಪಾದಕರ ಕಾರುಬಾರಿನ ನಡುವೆಯೂ ಒಟ್ಟಾರೆಯಾಗಿ ಶೇಕಡಾ 44 ರಷ್ಟು ಮತದಾನವಾಗಿದೆ. ಕೆಲವು ಪ್ರದೇಶಗಳಲ್ಲಿ ಶೇ 55 ರಿಂದ 60 ರ ವರೆಗೂ ಹೋಗಿದೆ. 1996 ರ ಚುನಾವಣೆಯಲ್ಲಿ ಹಲವಾರು ಭಯೋತ್ಪಾದಕ ಸಂಘಟನೆಗಳ ಒಕ್ಕೂಟವಾಗಿದ್ದ ಹುರಿಯತ್ ಕಾನ್ಫರೆನ್ಸ್ (APHC) ಚುನಾವಣೆಯನ್ನು ಬಹಿಷ್ಕರಿಸಿತ್ತು. ಈ ಬಾರಿ ಚುನಾವಣೆಯಿಂದ ದೂರ ಉಳಿದಿದ್ದರೂ ಬಹಿಷ್ಕಾರದ ಕರೆ ಕೊಡುವಷ್ಟು ಧೈರ್ಯ ಮಾಡಲಿಲ್ಲ. ಹುರಿಯತ್ ಕಾನ್ಫರೆನ್ಸ್‌ನ ಭಾಗವಾಗಿದ್ದ ಪೀಪಲ್ಸ್ ಕಾನ್ಫರೆನ್ಸ್‌ನ ಮುಖಂಡ ಅಬ್ದುಲ್ ಘನಿಲೋನ್ ಅವರನ್ನು ಕೆಲವು ತಿಂಗಳುಗಳ ಹಿಂದೆ ಕೊಲೆ ಮಾಡಲಾಗಿತ್ತು. ಜನರ ನಡುವೆ ಸಾಕಷ್ಟು ಪ್ರಭಾವ ಹೊಂದಿದ್ದ


ಸೋಲಿಗೆ ಟನ್‌ಗಟ್ಟಲೇ ವಿಚಾರಣೆ


ಪಾಠ ಕಲಿಯಬಹುದೇ?

'ಲೋನ್' ಪ್ರಜಾಪ್ರಭುತ್ವದ ಪರವಾಗಿದ್ದರು ಹಾಗೂ ಚುನಾವಣಾ ಬಹಿಷ್ಕಾರಕ್ಕೆ ವಿರುದ್ಧವಾಗಿದ್ದರು. ಆದ್ದರಿಂದಲೇ ಅವರನ್ನು ಕೊಲೆ ಮಾಡಲಾಗಿತ್ತು ಎಂದೂ ಸುದ್ದಿ ಇದೆ.

ಸಾಮ್ರಾಜ್ಯಶಾಹಿ ಅಮೆರಿಕಾಕ್ಕೆ ಹೊಡೆತ:

ಬಿನ್ ಲಾಡೆನ್ ಹಿಡಿಯುವ ನೆಪದಲ್ಲಿ ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ತಜಕಿಸ್ತಾನದಲ್ಲಿ ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿದ ಅಮೆರಿಕಾ ಕಾಶ್ಮೀರದಲ್ಲಿ ಹೇಗಾದರೂ ನೆಲೆ ಊರಬೇಕೆಂದು ಕನಸು ಕಂಡಿತ್ತು. ಅಂತೆಯೇ ಅಮೆರಿಕಾದ ವಿದೇಶಾಂಗ ಸಚಿವ ಕಾಲಿನ್ ಪಾವೆಲ್ ಭಾರತಕ್ಕೆ ಬಂದಾಗ ಕಾಶ್ಮೀರದಲ್ಲಿ 'ಮುಕ್ತ' ಚುನಾವಣೆ ನಡೆಯಬೇಕೆಂದು ಪ್ರತಿಪಾದಿಸಿದ್ದರು. ಅದಕ್ಕೆ ಪ್ರತಿಯಾಗಿ ಮುಖ್ಯ ಚುನಾವಣಾಧಿಕಾರಿ ಲಿಂಗ್ಡೋರವರು 'ಭಾರತದ ಆಂತರಿಕ ವಿಷಯದಲ್ಲಿ ವಿದೇಶಿಯರು ಮೂಗು ತೂರಬಾರದು. ವಿದೇಶಿಯರ ಆಡಳಿತವನ್ನು 1947 ರಲ್ಲೇ ಹೊರದಬ್ಬಿದ್ದೇವೆ' ಎಂದು ಹೇಳುವ ಧೈರ್ಯ ತೋರಿದ್ದರು. ತುಕ್ಕು ಹಿಡಿದ 'ಉಕ್ಕಿನ' ಮನುಷ್ಯ ಅಡ್ವಾಣಿಗಿಲ್ಲದ ಧೈರ್ಯ. ಲಿಂಗ್ಡೊ ಅವರಿಗೆ ಬಂದಿತ್ತು, ದೇಶಪ್ರೇಮ ಬೊಗಳೆ ಬಿಡುವುದರಿಂದ ಬರುವುದಿಲ್ಲ. ಕಾರ್ಯದಿಂದ ಮಾತ್ರ ಕಾಣಲು ಸಾಧ್ಯ.

ಸಂದರ್ಭ ಸಾಧಕತನಕ್ಕೆ ಕೊಡಲಿ:

ಎನ್‌ಡಿಎ ಹೆಸರಿನಲ್ಲಿ ಭಾರತೀಯ ಜನತಾ ಪಕ್ಷ ಮತ್ತು ನ್ಯಾಶನಲ್ ಕಾನ್ಫರೆನ್ಸ್ ಮೈತ್ರಿ ಒಂದು ಅಪವಿತ್ರತೆಯ ಸಂಕೇತ. ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ ಸಂವಿಧಾನದ 370 ನೇ ಕಲಂನ್ನು ರದ್ದು ಗೊಳಿಸಬೇಕೆಂದು ಹೇಳುವ ಬಿಜೆಪಿ ಒಂದೆಡೆಯಾದರೆ, ಜಮ್ಮು ಕಾಶ್ಮೀರಕ್ಕೆ ಗರಿಷ್ಟ ಅಧಿಕಾರ ನೀಡಬೇಕೆನ್ನುವ ನ್ಯಾಶನಲ್ ಕಾನ್ಫರೆನ್ಸ್ ಇನ್ನೊಂದುಧ್ರುವ. ಒಂದು ಬಹು ಸಂಸ್ಕೃತಿಯನ್ನು ನಾಶ ಮಾಡಿ ಏಕ ಸಂಸ್ಕೃತಿಯನ್ನು ಹೇರುವ ಹಿಂದೂರಾಷ್ಟ್ರದ ಕನಸು ಕಂಡರೆ, ಇನ್ನೊಂದು ಜಾತ್ಯಾತೀತ, ಪ್ರಜಾಸತ್ತಾತ್ಮಕ ಭಾರತದಲ್ಲಿ ಗರಿಗೆದರಿ ಕುಣಿಯಬಹುದು ಎಂದು ಭಾವಿಸಿ, ಹಿಂದೂ ಮಹಾರಾಜನ ವಿರುದ್ಧ ಹೋರಾಡಿದ ಪಕ್ಷ. ಒಂದಕ್ಕೊಂದು ಎಲ್ಲಿಯ ಸಂಬಂಧ? ಅಧಿಕಾರದ ಲಾಲಸೆಗಾಗಿ ಇವೆರಡೂ ಒಂದೇ ತಕ್ಕಡಿಯಲ್ಲಿವೆ. ಆದರೆ ಕಾಶ್ಮೀರದ ಅಸೆಂಬ್ಲಿ ಚುನಾವಣೆ ಬಂದಾಗ ಜನರ ಕಣ್ಣಿಗೆ ಮಣ್ಣೆರೆಚುವುದಕ್ಕಾಗಿ ಇವೆರಡೂ ಬೇರೆ ಬೇರೆ! ಜನ ಸುಮ್ಮನೆ ಬಿಡುತ್ತಾರೆಯೇ? ಇವೆರಡೂ ಪಕ್ಷಗಳನ್ನು ಹೀನಾಯವಾಗಿ ಸೋಲಿಸಿದರು. ಹಿಂದಿನ ಅಸೆಂಬ್ಲಿಯಲ್ಲಿ 58 ಸ್ಥಾನಗಳಿಸಿದ್ದ ನ್ಯಾಶನಲ್ ಕಾನ್ಫರೆನ್ಸ್ 28 ಕ್ಕೆ ಇಳಿಯಿತು. 8 ಸ್ಥಾನಗಳನ್ನು ಗಳಿಸಿದ್ದ ಬಿಜೆಪಿ ತನ್ನೆಲ್ಲಾ ಸ್ಥಾನಗಳನ್ನು ಕಳೆದುಕೊಂಡು ಕೇವಲ 67 ಮತಗಳ ಅಂತರದಿಂದ ಹೊಸ ಸ್ಥಾನವೊಂದನ್ನು ಪಡೆಯಿತು.

ಹಿಂದೂ, ಬೌದ್ಧ ಮತ್ತು ಮುಸ್ಲಿಂ ಧರ್ಮಗಳ ಆಧಾರದಲ್ಲಿ ಕಾಶ್ಮೀರವನ್ನು 3 ಭಾಗಗಳಾಗಿ ವಿಂಗಡಿಸಬೇಕೆಂದು ದೇಶದ್ರೋಹಿ ನಿಲುಮೆಯನ್ನು ಪ್ರತಿಪಾದಿಸಿದ ಆರ್.ಎಸ್.ಎಸ್. ನೊಂದಿಗೆ ಬಿಜೆಪಿ ಮೈತ್ರಿ ಮಾಡಿಕೊಂಡಿತ್ತು. ಇವರ ಮೋಸವನ್ನು ಅರಿತ ಪ್ರಜ್ಞಾವಂತ ಮತದಾರರು ತಕ್ಕ ಪಾಠ ಕಲಿಸಿದರು.

ಅದರಜತೆಯಲ್ಲಿ ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿ ಹಾಗೂ ಫಾರೂಕ್ ಅಬ್ದುಲ್ಲಾ ಸರ್ಕಾರದ ನಿಷ್ಕ್ರಿಯ ಆಡಳಿದ ವಿರುದ್ಧ ಜನ ಮತ ನೀಡಿದರು. 1996 ರ ಚುನಾವಣೆಯ ಸಂದರ್ಭದಲ್ಲಿ ನೀಡಿದ ಆಶ್ವಾಸನೆಯನ್ನು ಈಡೇರಿಸಲು ಫಾರೂಕ್ ಅಬ್ದುಲ್ಲಾರಿಗೆ ಸಾಧ್ಯವಾಗಲಿಲ್ಲ. ಭಯೋತ್ಪಾದನೆಗೆ ಒಳಗಾದ ಕಾಶ್ಮೀರದ ಜನತೆಗೆ ಪರಿಹಾರ ನೀಡದ ಅಲ್ಲಿನ ಸರ್ಕಾರ, ಯಾವುದೇ ಅಭಿವೃದ್ಧಿ ಕಾರ್ಯಗಳಿಗೂ ಗಮನ ನೀಡಲಿಲ್ಲ. ಮಾತ್ರವಲ್ಲ, ಅಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಮಂತ್ರಿ ಮಾಗದಿರು ಕುತ್ತಿಗೆ ಮಟ್ಟದವರೆಗೂ ಭ್ರಷ್ಟಾಚಾರದಲ್ಲಿ ಮುಳುಗಿದ್ದರು. ಅಂತೆಯೇ ಒಬ್ಬರನ್ನು ಬಿಟ್ಟು ಉಳಿದೆಲ್ಲಾ ಮಂತ್ರಿಗಳು ಹೀನಾಯವಾಗಿ ಸೋತರು. ಅಬ್ದುಲ್ಲಾ ಕುಟುಂಬದ ಒಬ್ಬ ಸದಸ್ಯನೂ ಗೆಲ್ಲಲಿಲ್ಲ.

ಬಿಜೆಪಿ ನಾಮಾವಶೇಷ :

ರಾಷ್ಟ್ರೀಯ ಪಕ್ಷ ಎಂದು ಬೀಗುತ್ತಿದ್ದ ಬಿಜೆಪಿ ಸ್ಥಳೀಯ ಪಕ್ಷಕ್ಕಿಂತಲೂ ಕೆಳಗಿಳಿದಿದೆ. ಒಟ್ಟು 58 ಸ್ಥಾನಗಳಿಗೆ ಸ್ಪರ್ಧಿಸಿದ್ದ ಬಿಜೆಪಿಗೆ ಶೇ 2.5 ರಷ್ಟು ಮಾತ್ರ ಮತ ಗಳಿಸಲು ಸಾಧ್ಯವಾಗಿದೆ. ಅದು ಗೆದ್ದಿರುವ ಸ್ಥಾನದ ಮತವನ್ನು ತೆಗೆದರೆ, ಉಳಿದ ಸ್ಥಾನಗಳಲ್ಲಿ ಸರಾಸರಿ ಶೇ 0.43 ಮಾತ್ರ ಮತ ಬಂದಿದೆ.

ಸಿಪಿಐ(ಎಂ) ಸ್ಥಾನ ಹೆಚ್ಚಳ:

1996 ರ ಚುನಾವಣೆಯಲ್ಲಿ ನ್ಯಾಶನಲ್ ಕಾನ್ಫರೆನ್ಸ್‌ನೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡಿದ್ದ ಸಿಪಿಐ(ಎಂ) ಒಂದು ಸ್ಥಾನ ಗಳಿಸಿತ್ತು. ಈ ಬಾರಿ ಎರಡು ಸ್ಥಾನ ಗಳಿಸಿದೆ. ಪಕ್ಷದ ಜಮ್ಮು-ಕಾಶ್ಮೀರದ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಯೂಸುಫ್ ತರಿಗಾಮಿ ಕುಲ್‌ಗಾಮ್ ಕ್ಷೇತ್ರದಿಂದ ಪುನರಾಯ್ಕೆಗೊಂಡಿದ್ದಾರೆ. ಹತ್ತಿರದ ವಾಚಿ ಕ್ಷೇತ್ರದಿಂದ ಅಜಿತ್ ನಾಯ್ಕ ಆಯ್ಕೆಯಾಗಿದ್ದಾರೆ.


ಮಹಮ್ಮದ್ ಯೂಸುಫ್ ತರಿಗಾಮಿ

ಸರ್ಕಾರ ಯಾರದ್ದು?

ಚುನಾವಣೆ ಪ್ರಕ್ರಿಯೆ ಮುಗಿದರೂ ಸರ್ಕಾರದ ರಚನೆ ಆಗಿಲ್ಲ. ಚುನಾವಣಾ ಪೂರ್ವದಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದ ಕಾಂಗ್ರೆಸ್ ಮತ್ತು ಪಿಡಿಪಿ ಮುಖ್ಯಮಂತ್ರಿ ಯಾರಾಗಬೇಕು ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಹೊಂದಿವೆ. ಆ ಎರಡೂ ಪಕ್ಷಗಳೂ ಒಂದುಗೂಡಿದರೂ ಇತರರಿಂದ ಬೆಂಬಲ ಬೇಕಾಗುತ್ತದೆ. ಯಾವುದೇ ಗುಂಪು ಅಧಿಕಾರಕ್ಕೆ ಬಂದರೂ ಇತರ ಪಕ್ಷಗಳ ಬೆಂಬಲ ಬೇಕಾಗುತ್ತದೆ.

ಅಕ್ಟೋಬರ್ 17 ಕ್ಕೆ ವಿಧಾನಸಭೆಯ ಅವಧಿ ಮುಗಿದಿತ್ತು. ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದು ರಾಜ್ಯಪಾಲರು ಫಾರೂಕ್ ಅಬ್ದುಲ್ಲಾರಿಗೆ ಹೇಳಿದ್ದರು. ಸೋಲಿನ ನಿರಾಶೆಯಿಂದ ಪಾರಾಗಲು ಸಾಧ್ಯವಾಗದ ಫಾರೂಕ್ ಅಬ್ದುಲ್ಲಾ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದಿದೆ. ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರವೇನಾದರೂ ಇದೆಯೇ ಎಂದು ಕಾದು ನೋಡಬೇಕಾಗಿದೆ.

ಸರ್ಕಾರದ ಮುಂದಿರುವ ಸವಾಲುಗಳು:

ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಬೆಟ್ಟದಷ್ಟು ಕೆಲಸವಿದೆ. ಸಾದಾರಣ 15 ವರ್ಷಗಳಿಂದ ಭಯೋತ್ಪಾದಕರಿಂದ ಕಂಗೆಟ್ಟಿದ್ದ ಕಾಶ್ಮೀರವನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸಬೇಕಾಗಿದೆ. ಕಾಂಗ್ರೆಸ್ ಪಕ್ಷದ ಹಿಂದಿನ ಇತಿಹಾಸ ಇದಕ್ಕೆ ಪೂರಕವಾಗಿಲ್ಲ. ಅತ್ಯಧಿಕ ಸ್ವಾಯತ್ತತೆ ನೀಡುವುದರ ಮೂಲಕ ಮಾತ್ರವೇ ಸಮಸ್ಯೆಗೆ ಪರಿಹಾರ ಕಾಣಲು ಸಾಧ್ಯವಿದೆ. ಸಾಕಷ್ಟು ಉದ್ಯೋಗ ಅವಕಾಶ ಒದಗಿಸಿದರೆ ಮಾತ್ರ ಇಂದಿನ ಯುವಜನತೆಯನ್ನು ಸರಿದಾರಿಗೆ ತರಲು ಸಾಧ್ಯ.


ಇನ್ನೊಂದು ಸ್ಥಳೀಯ ಪಕ್ಷ, ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿ(ಪಿಡಿಪಿ) ಉಗ್ರಗಾಮಿಗಳೊಂದಿಗೆ ಯಾವುದೇ ಶರತ್ತಿಲ್ಲದೆ ಮಾತುಕತೆಗೆ ತಯಾರಿದೆ. ಯಾವುದೇ ಮಾತುಕತೆ ಸ್ವಾಗತವಾದರೂ ಭಾರತದ ಐಕ್ಯತೆಯನ್ನು ಕಾಪಾಡುವ ಸಂವಿಧಾನದ ಚೌಕಟ್ಟಿನಲ್ಲಿ ಮಾತ್ರವೇ ಸಾಧ್ಯ.

ಆದ್ದರಿಂದ ಚುನಾವಣೆಯಿಂದ ಎಲ್ಲವೂ ಮುಗಿಯಲಿಲ್ಲ. ಇದು ಒಂದು ಹಂತ ಮಾತ್ರ. ಚುನಾವಣೆ ಮೂಲಕ ಅಧಿಕಾರ ಪಡೆದಿದ್ದೇವೆ ಎಂದು ಜನಪರ ಕೆಲಸಗಳಿಗೆ ಗಮನ ಕೊಡದಿದ್ದಲ್ಲಿ, ಫಾರೂಕ್ ಅಬ್ದುಲ್ಲಾ ಸರ್ಕಾರಕ್ಕೆ ಬಂದ ಗತಿಯೇ ಮುಂದಿನ ಸರ್ಕಾರಕ್ಕೂ ಕಾದಿಟ್ಟ ಬುತ್ತಿ.

- ಬಾಲಕೃಷ್ಣ ಶೆಟ್ಟಿ

(ಕಾಂ. ಸುರ್ಜಿತ್ ಲೇಖನದ ಆಧಾರ)

ಬಾಳಾಠಾಕ್ರೆ ಕಾನೂನಿಗಿಂತ ದೊಡ್ಡವ ಅಲ್ಲ



ಶಿವಸೇನಾ ನಾಯಕ ಬಾಳಠಾಕ್ರೆ ಬಾಯಿ ತೆರೆದರೆಂದರೆ ಕೋಮುದ್ವೇಷದ ಕಿಚ್ಚು ಹೊತ್ತಿಕೊಳ್ಳುತ್ತದೆ. ಅಂತಹದೇ ಇನ್ನೊಂದು ಭಾಷಣವನ್ನು ಇತ್ತೀಚಿಗಿನ ರ್‍ಯಾಲಿಯೊಂದರಲ್ಲಿ ಆಡಿದ್ದಾನೆ. ಹಿಂದುಗಳು 'ಆತ್ಮಹತ್ಯೆ' ದಳ ರಚಿಸಬೇಕೆಂತೆ. ಹೀಗೆ ಮಾತ್ರವೇ ಭಯೋತ್ಪಾದನೆ ನಿಗ್ರಹ ಮಾಡಲು ಸಾಧ್ಯವಂತೆ! ಹೇಗಿದೆ ಮತಾಂಧ ಉಗ್ರರ ಲೆಕ್ಕಾಚಾರ. ಭಯೋತ್ಪಾದನೆ ಎದುರಿಸಲು ಭಯೋತ್ಪಾದನೆ.

ಮಹಾರಾಷ್ಟ್ರ ಸರ್ಕಾರ ಈ ಕೂಡಲೇ ಕ್ರಮ ಕೈಗೊಳ್ಳಬೇಕು. ದೇಶದ ಕಾನೂನಿಗಿಂತ ದೊಡ್ಡವರಲ್ಲ ಎಂಬುದನ್ನು ತೋರಿಸಬೇಕು. ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಕೋಮುದ್ವೇಷ ಹೆಚ್ಚಿಸುವುದರ ವಿರುದ್ಧ ಮೊಕದ್ದಮೆ ಹೂಡಲಾಗಿದೆ.ಯಾವುದೇ ಒತ್ತಡಕ್ಕೆ ಮಹಾರಾಷ್ಟ್ರ ಸರ್ಕಾರ ಬಗ್ಗಬಾರದು. ಹಾಗೆಯೇ ವಾಜಪೇಯಿ ಸರ್ಕಾರ ಈಗ ಮೂಕಪ್ರೇಕ್ಷಕನಾಗಿ ಕೂಡಲು ಸಾಧ್ಯವಿಲ್ಲ. ತಮ್ಮ ಸರ್ಕಾರದ ಭಾಗಿದಾರನೆಂದು ಸುಮ್ಮನಿರಲಾರದು. ತನ್ನ ಅಸಮ್ಮತಿಯನ್ನು ಕೃತಿ ಮೂಲಕ ತೋರ್ಪಡಿಸಬೇಕು.

ಗಡಿ ಮಸೀದಿ: ಮತೀಯವಾದಿ

ಕರ್ನಾಟಕದ ತುಂಬಾ ಕೋಮುಗಲಭೆಗಳನ್ನೆಬ್ಬಿಸುವ ವ್ಯವಸ್ಥಿತ ಯೋಜನೆ ರೂಪಿಸಿರುವ ಸಂಘಪರಿವಾರದ ಖಾವೀ ಪಡೆ ಈಗ ಆಳಂದದ ಗಡಿ ಮಸೀದಿಯತ್ತ ಧಾಳಿ ಇಟ್ಟಿದೆ. ಈ ಮಸೀದಿ ಕೋಮುವಾದಿ ಶಕ್ತಿಗಳಿಗೆ, ಸಂದರ್ಭಸಾಧಕ ರಾಜಕಾರಣಕ್ಕೆ ಆಹಾರವಾಗುತ್ತಿದೆ. ಈ ವಿವಾವದವಾದರೂ ಏನು? ಅದರ ಸುತ್ತಲಿನ ವಿದ್ಯಮಾನಗಳತ್ತ ನಿಯೋಗ ಕಂಡ ಅಂಶಗಳ ವರದಿ ಇಲ್ಲಿವೆ.

ಎಸ್.ವೈ.ಗುರುಶಾಂತ್

ಖಾದಿ ಬಟ್ಟೆಗೆ ಮತ್ತು ಸಿಹಿಯಾದ ಸಕ್ಕರೆಗೆ ಪ್ರಸಿದ್ಧಿಯಾಗಿರುವ ಆಳಂದ ಹಂತಹಂತವಾಗಿ ಪ್ರಕ್ಷುಬ್ಧತೆಯತ್ತ ಹೆಜ್ಜೆ ಹಾಕುತ್ತಿದೆ. ಪ್ರಕ್ಷುಬ್ಧತೆಗೆ ಕಾರಣವೆನ್ನಲಾಗುತ್ತಿರುವುದು ಒಂದು ಮಸೀದಿಯ ಜಾಗದ ವಿವಾದ. ಅದು ವಕ್ಫ್ ಬೋರ್ಡಿನ ಆಸ್ತಿಯೇ ಅಥವಾ ಮುನ್ಸಿಪಾಲಿಟಿಯದೋ. ಅಲ್ಲಿದ್ದುದು ಮಸೀದಿಯೇ ಅಥವಾ ಪುರಾತನ ರಾಜನ ವಿಶ್ರಾಂತಿ ಧಾಮವೋ ಅಥವಾ ರಾಣಿಯ ಸ್ನಾನಗೃಹವೋ?

ಗಡಿ ಮಸೀದಿಯೆಂದೇ ಗುರುತಿಸಲಾಗಿರುವ ಈ ಮಸೀದಿ ಜಾಗದೊಂದಿಗೆ ಇರುವ ವಿವಾದವೂ ಹಳೆಯದು. ಅದು ಸರ್ಕಾರದ ಆಡಳಿತ ಕಛೇರಿಗಳಿಂದ, ಜಿಲ್ಲಾ, ಹೈಕೋರ್ಟ್ ಕಂಡು ಇತ್ಯರ್ಥಗೊಂಡ ಪ್ರಕರಣ. ಈ ವ್ಯಾಜ್ಯ ಎದ್ದದ್ದೋ 1950 ರ ದಶಕದಲ್ಲಿ. ಅದೂ ನಾನಾಚಂದ್ರ ಶಹಾ ಎಂಬಾತ ಅದು ಜೈನ ಮಂದಿರವೆಂದು ಹೂಡಿದ ಮೊಕದ್ದಮೆಯಲ್ಲಿ. (ಭಗ್ನಗೊಂಡಿದ್ದ ಪುರಾತನ 'ಮಸೀದಿ'ಯ ಒಳಗೆ ಜೈನ ಮೂರ್ತಿ ಇಟ್ಟು ನಂತರ ವಾಪಾಸು ಎತ್ತಿಕೊಂಡದ್ದಿದೆ. ಈ ಮೊಕದ್ದಮೆ ಈಚೆಗೆ ಇತ್ಯರ್ಥಗೊಂಡ ಬಳಿಕ ಈ ಜಾಗದಲ್ಲಿ ವ್ಯಾಪಾರೀ ಮಳಿಗೆಗಳು ತಲೆ ಎತ್ತಿರುವುದು ಒಂದು ವಿಶೇಷ ಬೆಳವಣಿಗೆ)

ತಕರಾರು ತೀರ್ಪು

ಬಳಿಕ ತನಿಖೆ, ಆಯೋಗಗಳ ವಸ್ತು ಸ್ಥಿತಿ ವರದಿ, ವಾದ-ಪ್ರತಿವಾದಗಳು ವಾದಗಳ ಬಳಿಕ ವಿವಾದವನ್ನು ಇತ್ಯರ್ಥಗೊಳಿಸಿ 'ಮಸೀದಿ'ಯ ಗಡಿ ಗುರುತಿಸಿ ಹೈಕೋರ್ಟ್ ತೀರ್ಪು ನೀಡಿದ್ದು 29.6.2001 ರಲ್ಲಿ (ನ್ಯಾಯಮೂರ್ತಿ ಕೆ.ಶ್ರೀಧರರಾವ್‌ರವರ ಪೀಠ). ಅಲ್ಲಿಗೆ ತಕರಾರು ಮುಗಿದಿತ್ತು. ಬಳಿಕ ವಕ್ಫ್ ಮಂಡಳಿಯು ಹಳೇ ಮಸೀದಿ ಜಾಗದಲ್ಲೇ ಹೊಸ ಕಟ್ಟಡವನ್ನು ಕಟ್ಟಲು ಪರವಾನಗಿಬೇಕೆಂದು 19.10.2001 ರಂದು ಮುನ್ಸಿಪಾಲಿಟಿಗೆ ಅನುಮತಿಕೋರಿ ಮನವಿ ಸಲ್ಲಿಸಿತು. 29.5.2002 ರಂದು ಆಳಂದ ಪುರಸಭೆ ಕಟ್ಟಡ ಕಟ್ಟಲು ಅನುಮತಿಯನ್ನು ನೀಡಿತು. ಅದರಂತೆ ಕಾಮಗಾರಿ ಕೆಲಸ ಆರಂಭಗೊಂಡವು. ಈ ನಡುವೆ ತೀರ್ಪು ಹೊರಬಂದ ಸುಮಾರು 9 ತಿಂಗಳ ನಂತರ ಮಾರ್ಚ್ 2002 ರಲ್ಲಿ ಗಡಿ ಮಸೀದಿ ಪ್ರದೇಶದಲ್ಲಿ ಕಾಮಗಾರಿ ಕೆಲಸ ನಡೆಯುತ್ತಿದೆಯೆಂದು ಅದನ್ನು ನಿಲ್ಲಿಸಲು ಆಳಂದ ಡೆಪ್ಯುಟಿ ಸೂಪರಿಟೆಂಡೆಂಟ್ ಆಫ್ ಪೋಲೀಸ್ ಅವರನ್ನು 'ವ್ಯಾಪಾರಿಗಳ ಸಂಘ'ವು ಕಂಡು ನಿಲ್ಲಿಸಿತ್ತಂತೆ. ಇದಾದ ನಂತರ ಕಾನೂನಾತ್ಮಕ ವಿಚಾರಣೆ ಬಳಿಕ ಪುರಸಭೆ 'ಪರವಾನಗಿ' ನೀಡಿತ್ತು.

ಮುನ್ಸಿಪಾಲಿಟಿ ಪರವಾನಗಿ ನಂತರ ಮಸೀದಿ ಕಾಮಗಾರಿಯನ್ನು ತಡೆಯಲು ಕೋರಿ ಗುಲ್ಬರ್ಗಾದ ಸಿವಿಲ್ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ಕೆಲವರು ಸಲ್ಲಿಸಿದ್ದರು(ನಂ. 218/02) ಇವುಗಳನ್ನು ಪರಿಶೀಲಿಸಿದ ನ್ಯಾಯಾಲಯವು 16.9.02 ರಂದು ನೀಡಿದ ತೀರ್ಪಿನಲ್ಲಿ (ಶ್ರೀ ಎನ್.ಶರಣಪ್ಪನವರು) ಅರ್ಜಿದಾರರಿಗೆ Stay Order ಕೊಡಲಿಲ್ಲ. ಬಳಿಕ ಜಿಲ್ಲಾಧಿಕಾರಿಗಳ ಬಳಿಗೆ ಹೋದ ಅರ್ಜಿದಾರರು ಅವರಿಂದ ಸದ್ಯಕ್ಕೆ ಮಸೀದಿ ನಿರ್ಮಾಣಕ್ಕೆ ತಾತ್ಕಾಲಿಕ ತಡೆ ತಂದಿದ್ದಾರೆ ವಾದ ಪ್ರತಿವಾದ ನಡೆದಿದೆ.

ಈ ವ್ಯಾಪಾರಿಗಳ ಸಂಘವೆಂಬುದು ಶ್ರೀರಾಮ ಮಾರ್ಕೆಟ್ ವ್ಯಾಪಾರಿಗಳ ಸಂಘವಾಗಿದೆ. ಒಂದಾನೊಂದು ಕಾಲದಲ್ಲಿ ಆಳಂದದ ಗಡಿ ಭಾಗವಾಗಿದ್ದ ಪ್ರದೇಶ ಈಗ ಪಟ್ಟಣದ ನಡುವಿದ್ದು ವ್ಯಾಪಾರ-ವಹಿವಾಟಿನ ಕೇಂದ್ರವಾಗಿದೆ. ಈ ವ್ಯಾಪಾರಿಗಳ ಸಂಘವು ಬಹಿರಂಗ ಪತ್ರವನ್ನು ಪ್ರಕಟಿಸಿದ್ದು ಪಟ್ಟಣದ ಮುಸ್ಲಿಂ ನಾಯಕರು ಗಡಿ ಮಸೀದಿ ವಿವಾದ ಹುಟ್ಟಿಹಾಕಿ 'ಕೋಮುಗಲಭೆಗೆ ಪ್ರಚೋದಿಸುತ್ತಿದ್ದಾರೆಂದು' ಹೇಳುತ್ತಿದೆ. ಅತ್ತ ಈ ಸಮಸ್ಯೆಗೆ ರಾಜಕೀಯ ಮತ್ತು ಧಾರ್ಮಿಕ ಬಣ್ಣ ಕೊಟ್ಟು ಶಾಂತಿ ಭಂಗ ಪಡಿಸಲಾಗುತ್ತಿದೆಯೆಂದೂ, ಮಸೀದಿ ನಿರ್ಮಾಣ ಮತ್ತು ನಮಾಜನ್ನು ತಡೆಯುವ ಉದ್ದೇಶದಿಂದ ಪ್ರಯತ್ನಗಳು ನಡೆದಿದ್ದು, ವ್ಯಾಪಾರಿ ಸಂಘದ ಪ್ರಕಟಣೆ ಸುಳ್ಳು ಎಂದು ಗಡಿ ಮಸೀದಿ ಸಮಿತಿ ತಾನೊಂದು ಬಹಿರಂಗ ಪತ್ರ ಪ್ರಕಟಿಸಿದೆ.

ಬೆದರಿಕೆಗಳು - ಎಡೆ ಎತ್ತುತ್ತಿರುವ ದ್ವೇಷ

ಹೇಳಿಕೆ-ಪ್ರತಿ ಹೇಳಿಕೆಗಳ ಮಟ್ಟದಲ್ಲೇ ಇದು ನಿಲ್ಲಲಿಲ್ಲ. ಜುಲೈ 12 ರಂದು ಮಾರ್ಕೆಟ್ ಕಮಿಟಿಯವರು 'ಆಳಂದ ಬಂದ್' ಗೆ ಕರೆ ನೀಡಿ 'ಕಾನೂನು -ಸಮಸ್ಯೆ' ಪ್ರಶ್ನೆ ಇದೆಯೆಂದು ತೋರಿದರು. ಜಿಲ್ಲಾಧಿಕಾರಿಗಳು ತಮ್ಮ ಬೇಡಿಕೆ ಒಪ್ಪಲೇಬೇಕೆಂದು ಸೆಪ್ಟೆಂಬರ್ 24 ರಂದು ಆಳಂದ ಬಂದ್ ನಡೆಸಿದರು. ಅಂದು ಒಂದು ಬಸ್‌ಗೆ ಬೆಂಕಿ ಹಚ್ಚಲಾಯಿತಲ್ಲದೇ, ಇನ್ನೊಂದು ಬಸ್ 'ಚಳುವಳಿಗಾರರ' ಕಲ್ಲೇಟಿನಿಂದ 'ಜಖಂ'ಗೊಂಡಿತು. ಮರುದಿನ 25 ರಂದು ಮೆರವಣಿಗೆ ನಡೆಸಿ, ತಹಶೀಲ್ದಾರ್ ಆಫೀಸಿನ ಎದುರು ಪ್ರತಿಭಟನಾ ಧರಣಿ ಮತ್ತು ಬಹಿರಂಗ ಸಭೆ ನಡೆಸಿದರು. ಈ ಬಂದ್ ಪ್ರತಿಭಟನೆ ಮತ್ತು ಬಹಿರಂಗ ಸಭೆಗಳನ್ನು ವ್ಯಾಪಾರಿಗಳ ಸಮಿತಿಯ ಜೊತೆಗೆ ವಿಶ್ವಹಿಂದು ಪರಿಷತ್, ಬಜರಂಗದಳಗಳು 'ಪ್ರತ್ಯಕ್ಷ'ಗೊಂಡಿದ್ದವು. ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ದೊರಕಿಸಿ, ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕೆಂದು ವ್ಯಾಪಾರಿ ಸಂಘದ ಮುಖಂಡರು 'ಮನವಿ' ಮಾಡುತ್ತಿದ್ದರೆ, ಬಜರಂಗ ದಳದ ಸಂಚಾಲಕ ಪ್ರಮೋದ್ ಮುತಾಲಿಕ್, ಈಶ್ವರ ಸಿಂಗ್ ರಾಠೋಡ್, ಮಲ್ಲಿಕಾರ್ಜುನ ಅದ್ವಾನಿಗಳಾದಿಯಾಗಿ 'ಜೆಹಾದಿ'ಗಳಿಗೆ ಪಾಠ ಕಲಿಸುವುದಾಗಿ ಮತ್ತು ಇನ್ನೊಂದು 'ಗುಜರಾತ್'ನ್ನು ಸೃಷ್ಟಿಸುವುದಾಗಿ ತಮ್ಮ ಬರ್ಬರ 'ಪ್ರೋಗ್ರಾಂ' ಜಾರಿಯ ಬೆದರಿಕೆ ಒಡ್ಡಿ ಹಿಂಸಾತ್ಮಕ ಹಾದಿಯನ್ನು ತೋರಿಸಿದ್ದು ವರದಿಯಾಗಿದೆ. ಇದಕ್ಕೆ ಸ್ಥಳೀಯ ವೀರಶೈವ ಹಿರೇಮಠದ ಸ್ವಾಮಿ ಚಿಡ್ಡಿಗಳಿಗಿಂತ ತಾವೇನೂ 'ಧರ್ಮ ರಕ್ಷಣೆ'ಯಲ್ಲಿ ಕಮ್ಮಿ ಇಲ್ಲ ಎಂದು ತೋರಿಸಿದ್ದಾರೆ. ಮಸೀದಿಯ ನಿವೇಶನವನ್ನು ಜಿಲ್ಲಾಧಿಕಾರಿಗಳು ಜೇಹಾದಿಗಳಿಂದ ಬಿಡಿಸಬೇಕು, ನಮಾಜನ್ನು ನಿಲ್ಲಿಸಬೇಕೆಂದು ಆಗ್ರಹಿಸಿ ಚಳುವಳಿಯನ್ನು 'ಯಾವ ಹಂತಕ್ಕೂ' ಕೊಂಡೊಯ್ಯಲು ಬಜರಂಗದಳ, ವಿಶ್ವಹಿಂದೂ ಪರಿಷತ್ ಪ್ರಕಟಿಸಿವೆ.

ಮುಸ್ಲಿಂ ಅಂಗಡಿಯಲ್ಲಿ ಯಾರೂ ವ್ಯಾಪಾರ ಮಾಡಬಾರದೆಂದು, ಮಾಡಿದರೆ 500 ರೂ ದಂಡ ವಿಧಿಸುವುದಾಗಿ ಹಿಂದೂ ಜಾಗೃತ ಸಮಿತಿ ಎಚ್ಚರಿಕೆಯ ಕರಪತ್ರ ತಂದಿದೆ

ಅಕ್ಟೋಬರ್ 26 ರಂದು ಉಗ್ರಪ್ರತಿಭಟನೆ ನಡೆಸುವುದಾಗಿ, ಗುಲ್ಬರ್ಗಾದ ಎಲ್ಲಾ ತಾಲೂಕು-ರಾಜ್ಯದ ವಿವಿಧ ಕಡೆಗಳಿಂದಲೂ ಕಾರ್ಯಕರ್ತರನ್ನು ಜಮಾಯಿಸಿ 'ನ್ಯಾಯಕ್ಕಾಗಿ' ರಕ್ತ ಹರಿಸಲು ಹಿಂಜರಿಯುವುದಿಲ್ಲವೆಂದು ಸಂಘಪರಿವಾರ ಘೋಷಿಸಿತ್ತು. ಈಗ 28 ರಂದು ತಾಲೂಕು ಆಫೀಸಿನ ಮುಂದೆ ಧರಣಿ ಮತ್ತು 29 ರಂದು ಆಳಂದ ಬಂದ್ ನಡೆಸುವುದಾಗಿ ಪ್ರಕಟಿಸಿದ್ದಾರೆ. ಹೀಗೆ ಹಂತಹಂತವಾಗಿ ಆಳಂದವನ್ನು ಪ್ರಕ್ಷುಬ್ಧತೆಯತ್ತ ದೂಡಲಾಗುತ್ತಿದೆ. ಕೋಮುದ್ವೇಷದ ವಿಷವು ನಾಗರೀಕರ ಮನಸ್ಸಿನೊಳ ಪ್ರವೇಶಿಸುತ್ತಿದೆ.

ಇತಿಹಾಸದಿಂದ ಕಲಿಸುತ್ತಿರುವುದೇನು?

ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶ ರಕ್ಕಸ ರಜಾಕಾರರ ಹಾವಳಿ ಹಾಗೂ ಅದರ ವಿರುದ್ಧ ವಿಶೇಷವಾಗಿ 1948-51 ರ ಅವಧಿಯಲ್ಲಿ ಭೀಕರ ಕೋಮು ದಂಗೆ-ನರಹತ್ಯೆಗಳು ನಡೆದ ದುರಂತದ ಹಿನ್ನೆಲೆಯಿದೆ. ಪೋಲೀಸ್ ಕಾರ್ಯಾಚರಣೆ (ಭಾರತ ಸರ್ಕಾರದ) ಸಂದರ್ಭದಲ್ಲಿನ ದಂಗೆಗಳಲ್ಲಿ ಹತ್ಯೆಗೀಡಾದವರು ಬಹುತೇಕ ಮುಸ್ಲಿಂ ಅಲ್ಪಸಂಖ್ಯಾತರ ಮಾರಣಹೋಮ ನಡೆದಿದೆ. ಆ ಸನ್ನಿವೇಶದಲ್ಲಿ ಹಿಂಸೆ-ನೋವು ಅನುಭವಿಸಿದವರು ಹಿಂದೂ-ಮುಸ್ಲಿಂ ಸಮುದಾಯಗಳಲ್ಲಿ ಇನ್ನೂ ಇದ್ದಾರೆ. ಆ ಘಟನೆಗಳು ಆಗಾಗ ಜನರಿಗೆ ಈಗಲೂ ಹೇಳಲ್ಪಡುತ್ತಿರುತ್ತವೆ. ಇಂತಹದ್ದನ್ನು ತಿಳಿಸಿಗೊಳಿಸಿ, ಆ ಘಟನೆಗಳ ವರ್ಗ ಸ್ವರೂಪವನ್ನು ಅರ್ಥೈಸಿ ಜನರಲ್ಲಿ ಸೌಹಾರ್ದತೆ, ಸಾಮರಸ್ಯ ನೆಲೆಗೊಳಿಸುವ, ಜನತೆಯನ್ನು, ದುಡಿವ ಜನ ಸಮೂಹವನ್ನು ಪ್ರಜಾಸತ್ತಾತ್ಮಕ ಚಳುವಳಿಯತ್ತ ಸೆಳೆಯುವುದು ಅತ್ಯಗತ್ಯ. ಆದರೆ ಇದು ಬೆಳೆಯದಂತೆ ಅಲ್ಲಿನ ಪಾಳೇಗಾರಿ ಶಕ್ತಿಗಳು, ಸತತವಾಗಿ ಯತ್ನಿಸುತ್ತಲೇ ಬಂದಿವೆ. ಹೈದ್ರಾಬಾದ್ - ಕರ್ನಾಟಕ ವಿಮೋಚನಾ ದಿನವೆಂದು ಆಚರಿಸುತ್ತಾ ಕೋಮುವಿಭಜನೆಯ ಸಿದ್ಧಾಂತವನ್ನು ಎಳೆಯರಿಂದ ಹಿರಿಯರೆಲ್ಲರೂ ಆಚರಿಸಲಾಗುತ್ತಿದೆ. ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆಗಿಂತಲೂ ಅದ್ದೂರಿಯಾಗಿ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನವನ್ನು ಆಚರಿಸಲು ಕರ್ನಾಟಕ ಸರ್ಕಾರವೇ ನೆರವು ನೀಡುತ್ತಿದೆ. ಆಳಂದ ಮಹಾರಾಷ್ಟ್ರ ಗಡಿಯಲ್ಲಿದೆ. ಅಲ್ಲಿ ಶಿವಸೇನೆಯ ಚಟುವಟಿಕೆಗಳ ಪ್ರಭಾವವಿದೆ. ಪಾಳೇಗಾರಿ ಶಕ್ತಿಗಳ ಸುಫಾರಿ ಕೊಲೆಗಳಿಗೂ ಖ್ಯಾತಿ. ಅಭಿವೃದ್ಧಿ ಕಾಣದ, ಕೈಗಾರಿಕೆ-ಕೃಷಿ ಬಿಕ್ಕಟ್ಟಿನ ಸಮಸ್ಯೆಗಳು ಸುಳಿಯಿಂದ ಬಳಲುವ ಜನಸಮೂಹ ಎಲ್ಲೆಡೆ ಕಾಣಬರುತ್ತದೆ. ಬಾಬ್ರಿ ಮಸೀದಿ ಧ್ವಂಸದ ಹಿಂದೆ ಡಿಸೆಂಬರ್ 6 ರಂದು 'ಕರಾಳ ದಿನ'ವೆಂದು ಅಲ್ಪಸಂಖ್ಯಾತರು ಕರೆ ನೀಡಿದ್ದಾಗ ಎರಡು ಬಾರಿಯೂ ಗಲಭೆಗಳಾಗಿವೆ.

ಈಗ 'ಲಂತೆ' ಆರ್‌ಎಸ್‌ಎಸ್-ಬಿಜೆಪಿ ಈ ಪ್ರದೇಶದಲ್ಲಿ ಹೆಚ್ಚಿನ ಗಮನ ಕೇಂದ್ರಿಕರಿಸಿವೆ. ಈ ಎಲ್ಲಾ ಹಿನ್ನೆಲೆಗಳೂ ಎಚ್ಚರ ತಪ್ಪಿದರೆ ಆಳಂದದಲ್ಲಿ ಎಂತಹ ಸ್ಥಿತಿ ನಿರ್ಮಾಣ ಮಾಡಬಹುದು ಎಂದು ಊಹಿಸಬಹುದು.

ನಿಯೋಗದ ಭೇಟಿ

ಇಂತಹ ಸನ್ನಿವೇಶಗಳಲ್ಲಿ ಪ್ರತಿ ಬೆಳವಣಿಗೆಗಳಲ್ಲಿ ಮಧ್ಯ ಪ್ರವೇಶಿಸುತ್ತಾ ಬಂದಿರುವ ಸಿಪಿಐ(ಎಂ)ನ ನಿಯೋಗವೊಂದು ಅಕ್ಟೋಬರ್ 13 ರಂದು ವಿಶೇಷವಾಗಿ ಆಳಂದಕ್ಕೆ ಭೇಟಿ ನೀಡಿತು. (ನಿಯೋಗದಲ್ಲಿ ಮಾರುತಿ ಮಾನ್ಪಡೆ, ಎಸ್.ವೈ.ಗುರುಶಾಂತ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಮೇಘರಾಜ ಕಠಾರೆ, ಜಿಲ್ಲಾ ಸಮಿತಿ ಸದಸ್ಯರಾದ ವಕೀಲ ಬಸವರಾಜ ಮರಡಿ ಇದ್ದರು). ವ್ಯಾಪಾರಿಗಳ ಸಂಘ, ಗಡಿ ಮಸೀದಿ ಕಮಿಟಿ ಮುಖಂಡರನ್ನು ಇತರೆ ಗಣ್ಯ ನಾಗರೀಕರನ್ನು, ಜನಸಾಮಾನ್ಯರನ್ನು ಕಂಡು ಚರ್ಚಿಸಿತು. ವಿವಾದಿತ ಪ್ರದೇಶಕ್ಕೆ ಭೇಟಿ ನೀಡಿತು.


ವಾದ-ಪ್ರತಿವಾದ

ಶ್ರೀರಾಮ ಮಾರ್ಕೆಟ್ ವ್ಯಾಪಾರಿಗಳ ಸಂಘದ ಮುಖಂಡರಾದ ಶಶಿಕಾಂತ ಕೊರಳ್ಳಿ (ವ್ಯಾಪಾರಿಗಳು), ಡಾ. ಮಾಣಿಕ್ ಶೆಟ್ಟಿ ಮುಂತಾದವರು ಅಭಿಪ್ರಾಯ ಹಂಚಿಕೊಂಡರು. 'ಅಲ್ಲಿ ಗಡಿ ಮಸೀದಿ ಎಂಬುದೇ ಅಸ್ತಿತ್ವದಲ್ಲಿ ಇರಲಿಲ್ಲ. ಇಲ್ಲದ್ದನ್ನು ಈಗ ಸೃಷ್ಟಿಸಲಾಗುತ್ತಿದೆ. ಇದು ವಕ್ಫ್ ಗೆಜೆಟ್ ಪ್ರಕಟಣೆಯಲ್ಲಿ ಇಲ್ಲ. ಹಳೆಯ ಕಟ್ಟಡ ರಾಜ ಚಂದ್ರಸೇನ ಜಾಧವನ ಮಹಲು ಬಹುಶಃ ಇರಬೇಕು. ಅದು ಹಾಳು ಬಿದ್ದದ್ದನ್ನು ನೋಡಿದ್ದೇವೆ. ಅಂತಹದ್ದನ್ನು ಮಸೀದಿ ಎಂದು ಸಾಧಿಸಹೊರಟು, ಕೋಮುಗಲಭೆಗೆ ಮುಸ್ಲಿಂ ನಾಯಕರು ಪ್ರಚೋದಿಸುತ್ತಿದ್ದಾರೆ. ಮುನ್ಸಿಪಾಲಿಟಿ ಆಸ್ತಿಯನ್ನು ಹೊಡೆಯುತ್ತಿದ್ದಾರೆ. ಇದು ಕಾನೂನು




ವಿವಾದಕ್ಕೊಳಗಾಗಿರುವ ಗಡಿ ಮಸೀದಿ ಅವಶೇಷ

ಅಟ್ಟಹಾಸ



ಬಾಹಿರವಾದುದು' ಎಂದು ಮುಖಂಡರು ಹೇಳುತ್ತಾರೆ. ಇದು ಸರ್ಕಾರದ ಆಸ್ತಿ.ಅದನ್ನು ವಶಕ್ಕೆ ತೆಗೆದುಕೊಳ್ಳಬೇಕು. ಶಾಂತಿಯುತ ಹಿಂದುಗಳ ಭಾವನೆಯನ್ನು ಕೆರಳಿಸುತ್ತಿದ್ದಾರೆ. ಅಲ್ಲಿ ನಮಾಜ ಮಾಡಲು ಅವಕಾಶ ನೀಡಬಾರದೆಂದು ಆಗ್ರಹಿಸುತ್ತಾರೆ. ಗಡಿ ಮಸೀದಿ ವ್ಯವಸ್ಥಾಪಕ ಸಮಿತಿಯ ಮುಖಂಡರಾದ ಅಧ್ಯಕ್ಷ ಮರುಮ್‌ಕರ್, ಸೆಕ್ರೆಟರಿ ಇಲಿಯಾಸ್ ಅಹ್ಮದ್ ಚುಲ್‌ಬುಲ್ ಬಷೀರ್ ಅಹ್ಮದ್ ಮುಂತಾದವರು ಮೇಲಿನ ಆರೋಪಗಳನ್ನು ನಿರಾಕರಿಸುತ್ತಾರೆ. "ಮಸೀದಿ ಇರುವ ಬಗ್ಗೆ ಹಳೆಯ ದಾಖಲೆಗಳು ಲಭ್ಯವಿದೆ. 1919 ಅದರ ಸುತ್ತ ಕಾಂಪೌಂಡ್ ಗೋಡೆ ನಿರ್ಮಿಸಲು ಅಂದಿನ ಸರ್ಕಾರ ನೀಡಿದ ಆದೇಶವಿದೆ. 1923 ರ ನಕ್ಷೆ ಇದೆ. 1948 ರ ಸುಮಾರಿನಲ್ಲಿ ನಡೆದ ದಂಗೆಗಳಲ್ಲಿ ಸಮಾಜಘಾತುಕ ಶಕ್ತಿಗಳು ಮಸೀದಿಯನ್ನು ನಾಶ ಪಡಿಸಿದ್ದಾರೆ. ಅಂದಿನ ಗಂಭೀರ ಸ್ಥಿತಿಯಿಂದಾಗಿ ಮುಸ್ಲಿಮರು ಊರು ಬಿಟ್ಟು ಓಡಿಹೋಗಿದ್ದರು. 1958 ರಲ್ಲಿ ಮಸೀದಿ ಜಾಗಕ್ಕೆ ಹೊಂದಿಕೊಂಡಿರುವ ನಾನಾಚಂದ ಶಹಾ ಮೊಕದ್ದಮೆ ಹೂಡಿದ ನಂತರ ವಿವಾದವೆಂದಾಯಿತು. ಎಲ್ಲಾ ಹಂತಗಳಲ್ಲಿಯೂ ಕೋರ್ಟ್ ದಾಖಲೆಗಳ ಆಧಾರದಲ್ಲಿ ಮಸೀದಿಯೆಂದು ತೀರ್ಪು ನೀಡಿದೆ. 150 X 150 ನಿವೇಶನವೇ ಮಸೀದಿಯಾಗಿದ್ದು, ಅದರ ಹೊಸ ನಿರ್ಮಾಣಕ್ಕೆ ಅವಕಾಶ ಕೊಡಲೇಬೇಕು. ಯಾರನ್ನು ನೋಯಿಸುವ, ಇತರರ ಆಸ್ತಿ ಕಬಳಿಸುವ ಪ್ರಶ್ನೆ ನಮ್ಮಲ್ಲಿ ಇಲ್ಲ. ಶಾಂತಿ - ಸೌಹಾರ್ದತೆಗೆ ನಾವು ಬದ್ಧರು" ಎನ್ನುತ್ತಾರೆ. ಮಸೀದಿ ಇರುವ ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿ ಮಧ್ಯಾಹ್ನದ ನಮಾಜು ನಡೆಯುತ್ತಿತ್ತು. ಪೋಲೀಸ್ ಪಹರೆ ಹಾಕಲಾಗಿತ್ತು. ಜಾಗದ ಸುತ್ತ ಪಕ್ಕ-ಮುಂದುಗಡೆ ಅಂಗಡಿ ಮಳಿಗೆಗಳು, ಮನೆಗಳು ಬೆಳೆದಿವೆ. ಪಕ್ಕದಲ್ಲಿ ಸಂತೆಗಾಗಿ ವಿಶಾಲವಾದ ಬಯಲಿದೆ. ಸುತ್ತಲೂ ಅಂಗಡಿಗಳಿವೆ. ಮತ್ತು ಇದು ಪುರಸಭೆಯ ಅಡಿಯಲ್ಲಿದೆ. ಈ ಜಾಗ ಪರಿಶೀಲಿಸುವಾಗ ದೊರೆತ ಆಸಕ್ತಿದಾಯಕ ಸಂಗತಿಯೆಂದರೆ ಮಸೀದಿ ಜಾಗದ ಎದುರಿನ ಈ ಸಂತೆ ಬಯಲಿನಲ್ಲಿ ಶ್ರೀರಾಮನ ಮಂದಿರ-ಅನತಿ ದೂರದಲ್ಲಿ ಮೈದಾನದ ನಡುವೆ ಆಂಜನೇಯನ ದೇವಸ್ಥಾನಗಳು ತಲೆ ಎತ್ತಿವೆ. ಶ್ರೀರಾಮದೇವಾಲಯವನ್ನು 'ವ್ಯಾಪಾರಿಗಳು' ನಿರ್ಮಿಸಿದ್ದಾರೆ. ಆಂಜನೇಯನ ದೇವಸ್ಥಾನ ಶಾಸಕ ಸುಭಾಷ್ ಗುತ್ತೇದಾರರ ಬೆಂಬಲಿಗರು ಕಟ್ಟಿದ್ದಾರಂತೆ. ಇವೂ ಸಹ ಅನಧಿಕೃತವಲ್ಲವೇ? ಪುರಸಭೆಯ ಜಾಗವನ್ನು ಇವು ಆವರಿಸಿದೆಯಲ್ಲಾ ಈ ಬಗ್ಗೆ ಏನು ಎಂದರೆ ವ್ಯಾಪಾರಿ ಸಂಘದ ನಾಯಕರು "ನೋಡಿ ಹಿಂದುಗಳು ಎಲ್ಲಿಯಾದರೂ ದೇವಸ್ಥಾನ ನಿರ್ಮಿಸಬಹುದು ಅದೇನು ತಪ್ಪು" ಎಂದು ಮರುಪ್ರಶ್ನೆ ಹಾಕುತ್ತಾರೆ! ಮುಸ್ಲಿಮರು ಭಾರತದ ನಾಗರೀಕರಲ್ಲ. ಅವರು ಏನಿದ್ದರೂ ಹಿಂದುಗಳ ಕೃಪೆಯಲ್ಲಿ ಮಾತ್ರ ಬದುಕಬಹುದು ಎಂಬ ಆರ್‌ಎಸ್‌ಎಸ್ ನ ಸಿದ್ಧಾಂತಕ್ಕಿಂತ ಹೇಗೆ ಬೇರೆ ಎಂದು ಅವರೇ ಹೇಳಬೇಕಾಗುತ್ತದೆ.



ಗಡಿ ಮಸೀದಿ ಮತ್ತು ಸುತ್ತಲ ಆವರಣದ ನಕ್ಷೆ

ಕೋಮುವಾದಿಗಳ ಮೈತ್ರಿ ಫಲ

ಯಾಕೆಂದರೆ, ವ್ಯಾಪಾರೀ ಸಂಘದ ಅನೇಕರು ಸಮಾಜವಾದಿಗಳು, ಜೆ.ಪಿ.ಯವರ ಆದರ್ಶದಲ್ಲಿ ನಂಬಿಕೆ ಇಟ್ಟು ನಡೆಯುವವರು! ಅಲ್ಲದೇ ಲೋಹಿಯಾವಾದಿಗಳೂ, ಸಮಾಜವಾದಿಗಳೂ ಆಗಿರುವ ಮಾಜಿ ವಿಧಾನ ಪರಿಷತ್ ಸದಸ್ಯರಾಗಿದ್ದ ಈಗ ಜೆಡಿ(ಎಸ್) ಮುಖಂಡ ಬಿ.ಆರ್.ಪಾಟೀಲರ ಆತ್ಮೀಯ ಬಣದವರಂತೆ!


ಶಾಹ ನಂತರ ಮಸೀದಿ ವಿವಾದದಲ್ಲಿ ಇವರೇಕೆ ಪ್ರವೇಶಿಸಿದರು ಎಂಬ ಸಹಜ ಪ್ರಶ್ನೆ. ಇಲ್ಲಿನ ರಾಜಕೀಯಕ್ಕೂ ಇದಕ್ಕೂ ಸಂಬಂಧವಿದೆಯೆಂದು ಕಂಡು ಬಂತು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಂಯುಕ್ತ ಜನತಾದಳದ ಅಭ್ಯರ್ಥಿಯಾಗಿ ಬಿಜೆಪಿ ಬೆಂಬಲದಿಂದ ಬಿ.ಆರ್.ಪಾಟೀಲರು ಸ್ಪರ್ಧಿಸಿ ಸುಮಾರು 1,800 ಮತಗಳಿಂದ ಸೋಲನ್ನಪ್ಪಿದ್ದರು. ಸುಭಾಶ್ ಗುತ್ತೇದಾರ್ ಕಾಂಗ್ರೆಸ್ ಪಕ್ಷದಿಂದ (ಸದ್ಯದ ಪಕ್ಷ) ಗೆದ್ದಿದ್ದರು. ಅಲ್ಪಸಂಖ್ಯಾತರು ಮತ ನೀಡದೇ ಸೋತರು ಎಂಬ ಭಾವನೆ ಪಾಟೀಲ್ ಹಾಗೂ ಅವರ ಬೆಂಬಲಿಗರಲ್ಲಿ ಇದೆಯಂತೆ. ಬಹುಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ಸಹ ಪಾಟೀಲರ ಬೆಂಬಲಿಗರಾಗಿದ್ದು ಕೊನೆಗಳಿಗೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿದ್ದಾರೆ ಎಂಬ ಅನುಮಾನ ಬೆಂಬಲಿಗರಿಗಿದೆ. ಅವರಲ್ಲಿ ಅದಕ್ಕಾಗಿಯೇ ಓಟುಗಳ ಕ್ರೋಢೀಕರಣದ 'ಮತರಾಜಕೀಯ' ಈಗಿನ ವರಸೆಗೆ ಕಾರಣವೆಂದು ಹಲವಾರು ಜನ ನುಡಿಯುತ್ತಾರೆ. ಈ ಸಂದರ್ಭ ಸಾಧಕ ಮತ ರಾಜಕೀಯದ ತರುವ ವಿನಾಶಕಾರಿ ಬೆಳವಣಿಗೆಗಳನ್ನು ಗಮನಿಸಬೇಕು. ಅಂತಿಮವಾಗಿ ಕೋಮುದ್ವೇಷದ ಮನೋಭಾವವನ್ನು ಭಜರಂಗ ದಳ, ಬಿಜೆಪಿಗಳು ಬಳಸಿ ಬೆಳೆಯಲು ಫಲವತ್ತಾದ ಭೂಮಿ ನಿರ್ಮಿಸುತ್ತದೆ ಎಂಬುದು ಕಾಣುವುದಿಲ್ಲ. ಕೋಮುವಾದಿಗಳ ಜೊತೆಗಿನ ರಾಜಕೀಯ ಮೈತ್ರಿ ಹಂತಹಂತವಾಗಿ ಕೋಮುವಾದಿ ಅಜೆಂಡಾ ಜಾರಿಗೊಳಿಸುವ ಕರಸೇವಕರನ್ನಾಗಿ ಪರಿವರ್ತಿಸುತ್ತಿರುವ ಅಪಾಯಕ್ಕೆ ಇದೊಂದು ಉದಾಹರಣೆಯಾದೀತು. ಇಂತಹ ವಿವಾದದಿಂದಾಗಿ ಪಾಟೀಲರ ರಾಜಕೀಯ ಭವಿಷ್ಯಕ್ಕೆ ಅಡ್ಡಿ ಕಲ್ಲಾಗುತ್ತದೆ ಎಂಬುದನ್ನು ಅವರ ಬೆಂಬಲಿಗರು ಯೋಚಿಸಿದ್ದಾರೆಯೇ? ಈ ಪ್ರಶ್ನೆಗಳ ಬಗ್ಗೆ ಅವರು ಸ್ಪಷ್ಟನೆ ನೀಡಿ ಅನುಮಾನ ದೂರಗೊಳಿಸಬೇಕು.

ವ್ಯಾಪಾರದ ಪೈಪೋಟಿ!

ಈ ರಾಜಕೀಯ ಕಾರಣಗಳಲ್ಲದೇ 'ವ್ಯಾಪಾರ'ದ ಕ್ಷೇತ್ರದ ಪೈಪೋಟಿಯೂ ಇದೆ. ಮುಸ್ಲಿಂ ಸಮುದಾಯದ ಅನೇಕರು ಲಾರಿ, ಬಟ್ಟೆ ವ್ಯಾಪಾರ, ಆಟೋಮೊಬೈಲ್ ಇತ್ಯಾದಿಗಳಲ್ಲಿ ಮುಂದಿದ್ದಾರೆ.

ಆರ್‌ಎಸ್‌ಎಸ್ ಹಲವಾರು ದಶಕಗಳಿಂದ ಇಲ್ಲಿ ಕಾರ್ಯವೆಸಗುತ್ತಿದ್ದರೂ ಬಿಜೆಪಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿಲ್ಲ. ಹಿಂದಿನ ಶಾಸಕರಾಗಿದ್ದ ಎ.ವಿ.ಪಾಟೀಲರು ದೊಡ್ಡ ಜಮೀನ್ದಾರರು. 50 ವರ್ಷಗಳು ದರ್ಬಾರು ನಡೆಸಿದವರಂತೆ (ಕಾಂಗ್ರೆಸ್ ಪಕ್ಷದವರು). ಇವರು ಈ ಭಾಗದಲ್ಲಿ ಆರ್‌ಎಸ್‌ಎಸ್, ಬಿಜೆಪಿ ಬೆಳೆಸಲು ತಮ್ಮ ಕಾಣಿಕೆ ಮನದುಂಬಿ ನೀಡಿದ್ದನ್ನು ವಿವರಿಸುತ್ತಾರೆ ನಾಗರೀಕರು. ಹೀಗೆ ನಿಜಾಮನ ದೌರ್ಜನ್ಯ ಬಳಸಿ, ಭೂಮಾಲೀಕರ ಆಶ್ರಯ ಹಿಡಿದೂ ಬೆಳೆಯಲಾಗದ ಬಿಜೆಪಿಗೆ ಈ ವಿವಾದ ಬಳಸಿಕೊಳ್ಳುವ ಆಶಯ. ಕೇಂದ್ರದ ಅಧಿಕಾರ,


ನಮಾಜು ಮಾಡುತ್ತಿರುವ ಮುಸ್ಲಿಮರು

ಕೋಮುದ್ವೇಷದ ಸನ್ನಿವೇಶವು ಹೊಸ ಪೀಳಿಗೆಯವರನ್ನು ತಟ್ಟುತ್ತಿದೆ. ನಾವು ಭೇಟಿ ನೀಡಿದಾಗ ಯುವಕನೊಬ್ಬ ಹೇಳಿದ (ಆತ ಲಿಂಗಾಯತ) "ಸಾರ್, ಈ ಗುತ್ತೇದಾರ್- ಪಾಟೀಲ್ ಇಬ್ಬರೂ ನಮಗ ಒಜ್ಜೆ(ಭಾರ) ಆಗ್ಯಾರಾ. ಮೂರನೇಯವರು ಬೇಕ್ರಿ. ಹಿಂದುಗಳ ಸಂಖ್ಯೆ ದೊಡ್ಡದಿದ್ರು, ಅವರು (ಮುಸ್ಲಿಂ) ನಮ್ಮನ್ನು ಹೆದರ್‌ಸ್ತಾರ್ರಿ"

ಸರ್ಕಾರದ ಮಧ್ಯ ಪ್ರವೇಶ : ಜನರ ಕ್ರಿಯಾಶೀಲತೆ ಅಗತ್ಯ

ಈ ಒಟ್ಟು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಲು ಕ್ರಮವಹಿಸಬೇಕು. ಆದರೆ ಅರ್ಧಡಜನ್ ಮಂತ್ರಿಗಳಿದ್ದರೂ ಗೃಹಸಚಿವರ ಸ್ವಂತ ಜಿಲ್ಲೆಯಾದರು ಸೂಕ್ತ ಮಧ್ಯ ಪ್ರವೇಶ ಇಲ್ಲವಾಗಿದೆ. ಭಜರಂಗದಳದಂತಹ ಕೋಮುಶಕ್ತಿಗಳು ಪ್ರಚೋದನಾತ್ಮಕವಾಗಿ ವರ್ತಿಸಿದರೂ ನಿಷ್ಠುರ ಕ್ರಮ ಇಲ್ಲವಾಗಿದೆ. ಕೋಮುಸಾಮರಸ್ಯ ಕದಡುವ ಇಂತಹ ಶಕ್ತಿಗಳನ್ನು ಸರ್ಕಾರ ಮಟ್ಟಹಾಕಬೇಕು. ವಿವಾದ ಏನಿದ್ದರೂ ನ್ಯಾಯಾಲಯ ಕೊಡುವ ತೀರ್ಪಿಗೆ ಎಲ್ಲರೂ ಬದ್ಧರಾಗಲೇಬೇಕು.

ಅಳಂದ ಹಾಗೂ ರಾಜ್ಯದ ಜನತೆ, ಈ ಅದು ಅಲ್ಪಸಂಖ್ಯಾತ ಅಥವಾ ಬಹುಸಂಖ್ಯಾತ ಮತೀಯವಾದಿಗಳ ಎಲ್ಲಾ ಶಕ್ತಿಗಳ ಹುನ್ನಾರಗಳನ್ನು ಅರಿಯಬೇಕಿದೆ. ಕೋಮುವಾದಿಗಳ ಸಂದರ್ಭಸಾಧಕರ ತಂತ್ರಗಳಿಗೆ ಬಲಿಯಾಗದೇ ಆ ಶಕ್ತಿಗಳನ್ನು ತಿರಸ್ಕರಿಸಿ, ಶಾಂತಿ-ಸೌಹಾರ್ದತೆ ಕಾಪಾಡಲು ಮುಂದಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ ಮುತುವರ್ಜಿಯಿಂದಾಗಿ ಅಕ್ಟೋಬರ್ 23 ರಂದು ಕೋಮುಸೌಹಾರ್ದತಾ ಸಮಾವೇಶ ಸಂಘಟಿಸಲಾಗುತ್ತಿದೆ. ಈ ದಿಶೆಯಲ್ಲಿ ಸಿಪಿಐ, ರಾಜ್ಯ ರೈತ ಸಂಘ ಮುಂತಾದ ಪ್ರಗತಿಪರರು ಒಂದಾಗುತ್ತಿದ್ದಾರೆ. ಶಾಂತಿ ಕಾಪಾಡುವ, ಸರ್ಕಾರ ಮಧ್ಯೆ ಪ್ರವೇಶಿಸುವ ನ್ಯಾಯಾಲಯದ ತೀರ್ಪು ಗೌರವಿಸುವ ಒಂದು ಜಂಟಿ ಮನವಿ ಹೊರಡಿಸುವ ಅಗತ್ಯವನ್ನು ಸಿಪಿಐ ಗೆಳೆಯರು,ಬಿ.ಆರ್.ಪಾಟೀಲ್,ಮಾನ್ಪಡಿ ಮುಂತಾದವರು ಚರ್ಚಿಸಿದ್ದಾರೆ. ಇದು ಉತ್ತಮ ಬೆಳವಣಿಗೆ.

ನಮ್ಮ ನಿಯೋಗ ಹಿಂತಿರುಗುವಾಗ ಒಬ್ಬ ಯುವಕ ಹೇಳಿದ "ಸಾರ್, ಸತ್ಯವನ್ನು ಸಾಬೀತು ಮಾಡಲು, ಅದನ್ನು ದೃಢವಾಗಿ ನಿಲ್ಲಿಸಲು ಮತ್ತೆ ಮತ್ತೆ ಪ್ರಯತ್ನ ಮಾಡಬೇಕಾಗುತ್ತದೆ. ಆದರೆ ಸುಳ್ಳಿಗೆ ಆದರ ಅಗತ್ಯವಿಲ್ಲ. ಈ ಪರಿಸ್ಥಿತಿ ಸ್ಫೋಟವಾಗಬಾರದು, ಶಾಂತಿ-ಸಹಬಾಳ್ವೆ ಬೇಕು" ಇದು ಜನಸಾಮಾನ್ಯರ ಹೃದಯಾಂತರಾಳದ ಬಯಕೆ, ನಮ್ಮೆಲ್ಲರದು. ○

ಬೇಳೆ ಬೇಯಿಸಿಕೊಳ್ಳುವವರು

ಹಾಗೆಯೇ ಕಾಂಗ್ರೆಸ್ ಪಕ್ಷ, ಗುತ್ತೇದಾರ್‌ರೂ ಓಟಿನಬ್ಯಾಂಕ್ ರಾಜಕಾರಣದಲ್ಲಿ ತೊಡಗಿದ್ದಾರೆ. ಹಲವು ದಾಳ ಬಳಸುತ್ತಿದ್ದಾರೆ. ಸಮಸ್ಯೆ ಇತ್ಯರ್ಥದ ಬದಲು ಉಲ್ಬಣವಾದರೆ ಲಾಭ ತಮಗೆ ಎಂಬ ಲೆಕ್ಕಾಚಾರ ಕಾಂಗ್ರೆಸ್‌ಗೆ. ಪುರಸಭೆಯಲ್ಲಿ ಅಧ್ಯಕ್ಷ ಸ್ಥಾನ ನೀಡುವದು, ಹೆಚ್ಚಿನ ಅಭ್ಯರ್ಥಿಗಳಿಗೆ ಟಿಕೇಟ್ ನೀಡುವುದು ಇತ್ಯಾದಿ. ಇಷ್ಟರಲ್ಲೇ ತೃಪ್ತಿ ಕಾಣುವ, ಕಾಣಿಸುವ ರಾಜಕೀಯ ಆಟದಲ್ಲಿ ಜನಸಾಮಾನ್ಯರು ಬಲಿಪಶುಗಳು.

ಹಿರೇಮಠದಸ್ವಾಮಿ ವಿಶ್ವಹಿಂದು ಪರಿಷತ್‌ನ ಉಗ್ರಗಾಮಿಯಂತೆ ಮಾತನಾಡುವ ಕಾರಣವೊಂದು ತಿಳಿಯಿತು. ಈ ಸ್ವಾಮಿಯವರು ಪುರಸಭೆ ಗಟಾರದ ಮೇಲೆ ಮಠಕ್ಕೆ ಆದಾಯ ಬರಲೆಂದು 4 ಅಂಗಡಿ ಕಟ್ಟಿಸುವಾ ಎಂದಿದ್ದರಂತೆ. ಆದರೆ ಅದಕ್ಕೆ ಅವಕಾಶ ಸಿಗಲಿಲ್ಲವಂತೆ. ಇದನ್ನು ಅಲ್ಪಸಂಖ್ಯಾತರೇ ತಪ್ಪಿಸಿದ್ದು ಎಂಬ ರೋಷವಿದೆಯಂತೆ. ಸಂದಿಯಲ್ಲೇ ಸಮಾರಾಧನೆಯೆಂದರೆ ಇದೇ ಇರಬೇಕು!



ದುಡಿವ ಮಹಿಳೆಯರ ಹೋರಾಟದಲ್ಲಿ ಮೈಲಿಗಲ್ಲು

ಅಂಗನವಾಡಿ ನೌಕರರ ಅಖಿಲಭಾರತ 4ನೇ ಸಮ್ಮೇಳನ

ಒರಿಸ್ಸಾದ ಪುರಿಯಲ್ಲಿ ಜರುಗಿದ ಅಂಗನವಾಡಿ ಕಾರ್ಯಕರ್ತೆಯರ ರಾಷ್ಟ್ರೀಯ ಸಮ್ಮೇಳನವು ದುಡಿವ ಮಹಿಳೆಯರ ಹೋರಾಟದಲ್ಲಿ ಒಂದು ಮಹತ್ವದ ಮೈಲುಗಲ್ಲಾಯಿತು. ಸಾಧನೆ-ಸವಾಲುಗಳನ್ನು ಅವಲೋಕಿಸಿದ ವರದಿಯಿಲ್ಲಿದೆ.

ಯಮುನಾ ಗಾಂವ್ಕರ್

ನಮ್ಮ ಸ್ವಂತ ಮಕ್ಕಳ ಮಲ-ಮೂತ್ರ ತೆಗೆಯಲು ಸಮಯ ಇಲ್ಲ. ಆದ್ರೆ ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳ ಸಲುವಾಗಿ ದಿನವಿಡೀ ದುಡಿದರೂ, ಕೊಡುವ ಸಂಬಳ ಮಾತ್ರ 260ರಿಂದ 500 ರೂ. 5 ನಿಮಿಷ ತಡವಾದ್ರೂ ಮೆಮೋ ರೆಡಿ. ಈ ಎಮ್.ಎಲ್.ಎ, ಎಮ್.ಪಿ ಗಳು 5 ವರ್ಷ 'ಜನಸೇವೆ' ನಾಟಕವಾಡಿದರೂ ಪಿಂಚಣಿ ಸಿಗ್ತದೆ. ಆದ್ರೆ ನಾವು 25 ವರ್ಷಗಳಿಂದ ಸಾರ್ವಜನಿಕರ ಸೇವೆ ಮಾಡಿದ್ರೂ ಪಿಂಚಣಿ ಯಾಕಿಲ್ಲ?" ಎಂದು ಮಹಾರಾಷ್ಟ್ರದ ಗುಡ್ಡಗಾಡು ಜಿಲ್ಲೆಯ ಸುಶೀಲಾ ಭಗತ್‌ಳ ಪ್ರಶ್ನೆ.

'ನಾವು ಐ.ಸಿ.ಡಿ.ಎಸ್ ಕೆಲಸದೊಟ್ಟಿಗೆ ಸರ್ಕಾರದ ಹೆಚ್ಚುವರಿ ಕೆಲಸಗಳನ್ನು ಮಾಡ್ತಿದ್ದೇವೆ. ಆದರೆ ಈ ಕೆಲಸ ಮಾಡುವಾಗ ನಮ್ಮ ಸಂಗಾತಿಯರ ಮೇಲೆ ದುಷ್ಕರ್ಮಿಗಳು ಕೊಲೆ ಪ್ರಯತ್ನ ನಡೆಸಿದ್ದಾರೆ, ಇನ್ನೊಂದೆಡೆ ವಸ್ತ್ರಾಪಹರಣದಂತ ನೀಚ ಕೃತ್ಯ, ಮತ್ತೊಂದೆಡೆ ಬಿ.ಜೆ.ಪಿ ಕಾರ್ಯಕರ್ತರಿಂದ ದೈಹಿಕ ದಾಳಿ, ನಮ್ಮ ಮೇಲಿನ ದೌರ್ಜನ್ಯಗಳು ಒಂದೇ? ಎರಡೇ? ' ಇದು ಕರ್ನಾಟಕದ ಪ್ರತಿನಿಧಿ ಸವಿತಾಳ ನೋವಿನ ಮಾತು.

'ನಾವು ಸರ್ಕಾರಿ ನೌಕರರಲ್ಲವಂತೆ. ಆದ್ರೆ ಈ ಅಧಿಕಾರಿಗಳು ನಮ್ಮ ಮೇಲೇಕೆ ಹರಿಹಾಯ್ತಾರೆ, ನಿಯಂತ್ರಿಸುತ್ತಾರೆ? ಮೆಮೊ ಕೊಡ್ತಾರೆ?' ಪಂಜಾಬಿನ ಪ್ರತಿನಿಧಿಗಳ ಆಕ್ರೋಶ.

'ಇವರು ನಿರುಪಮಾ ಚಟರ್ಜಿ ಸ್ವಾತಂತ್ರ್ಯ ಹೋರಾಟಗಾರ್ತಿ ಮಾತ್ರವಲ್ಲ 25 ವರ್ಷಗಳಿಂದಲೂ ಎಮ್.ಎಲ್.ಎ ಆಗಿ ಆಯ್ಕೆಯಾಗಿದ್ದಾರೆ. ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಅಧ್ಯಕ್ಷರು. ಇವರು ಪುರುಲಿಯಾದ ಇಸ್ಲಾಂ ಪುರ ಬ್ಲಾಕ್‌ದಿಂದ ಆಯ್ಕೆಯಾದ ಎಮ್.ಎಲ್.ಎ ಉಮಾ ಭಾವಡಿ. ಇನ್ನೋರ್ವರು ಮಾಲಿನಿ ಹೇಮರಂ. ಇವರು ಜಿಲ್ಲಾ ಸಭಾಪತಿ. ಇದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ನಮ್ಮನ್ನು ರಾಜಕೀಯವಾಗಿ - ಸಾಮಾಜಿಕವಾಗಿ ಗೌರವಿಸಿದ ರೀತಿ ಇದು" ಪಶ್ಚಿಮ ಬಂಗಾಳದವರ ಹೆಮ್ಮೆಯ ಮಾತು.

"ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾರ್ಗರೇಟ್ ಆಳ್ವಾ ಎಮ್.ಪಿ ಹೇಳ್ತಾರೆ ಅಂಗನವಾಡಿ ನೌಕರರನ್ನು ಖಾಯಂ ಮಾಡಬಾರದಂತೆ. ಸೇವಾ ಮನೋಭಾವ ಹೊರಟೋಗ್ತದಂತೆ. ಗ್ರಾಮೀಣ ಪ್ರದೇಶದಲ್ಲಿರಬೇಕಾದವರು ಪಟ್ಟಣದಲ್ಲೇ ವಾಸ ಮಾಡಿ ಅಂಗನವಾಡಿಯನ್ನು ಮರೆಯುತ್ತಾರಂತೆ. 25 ವರ್ಷ ಪರರ ಮಕ್ಕಳ ಉಚ್ಚೆ ಕಕ್ಕಸು ತೆಗೆದ ನಮಗೆ ಸೇವಾ ಭಾವನೆಯ ಪಾಠ ಬೇಕೆ? ಎಂಬುದು ಕರ್ನಾಟಕದ ಪ್ರೇಮಾಳ ಪ್ರಶ್ನೆ.

ಈ ಮನಮಿಡಿಯುವ ಮಾತುಗಳು ಕೇಳಿಬಂದದ್ದು ಅಖಿಲಭಾರತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್ (ಎ.ಐ.ಎಫ್.ಎ.ಡಬ್ಲ್ಯು.ಹೆಚ್) ನ ಅಖಿಲಭಾರತ ಸಮ್ಮೇಳನವು ಒರಿಸ್ಸಾ ರಾಜ್ಯದ ಪುರಿಯಲ್ಲಿ ಕಾಂ.ವಿಮಲಾ ರಣದಿವೆ ನಗರದಲ್ಲಿ 29-9-02ರಿಂದ 1-2-2002ರವರೆಗೆ ಮೂರು ದಿನಗಳ ಕಾಲ ನಡೆದ ಸಂದರ್ಭದಲ್ಲಿ. ವಿವಿಧ ಭಾಷೆ, ಧರ್ಮ, ಸಂಸ್ಕೃತಿ, ಬುಡಕಟ್ಟುಗಳಿಗೆ ಸೇರಿದ ಅಂಗನವಾಡಿ ಮಹಿಳೆಯರು ಈ ಎಲ್ಲದರ ಸೀಮೆ ದಾಟಿ ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ತಮ್ಮದೇ ದಾಟಿಯಲ್ಲಿ ವಿವರಿಸಿದ್ದದು ಈ ಮೇಲಿನಂತೆ.

ಸಾಮ್ರಾಜ್ಯಶಾಹಿಯ ಲಾಭಕೋರ ನೀತಿಯಿಂದ ವಿಶ್ವದಲ್ಲಿಂದು ತೀವ್ರ ಆರ್ಥಿಕ ಹಿಂಜರಿತವುಂಟಾಗುತ್ತಿದೆ. ಎಲ್ಲೆಲ್ಲೂ ನಿರುದ್ಯೋಗ, ಸಂಕಷ್ಟ, ಹಸಿವು, ಬಡತನದ ಹಾಹಾಕಾರ ಹೆಚ್ಚುತ್ತಿದ್ದು, ಜಾಗತೀಕರಣ - ಉದಾರೀಕರಣಗಳು ಜನಜೀವನವನ್ನು ಅಧೋಗತಿಗೆ ತಳ್ಳುತ್ತಿವೆ. ಅಮೇರಿಕಾ ಪ್ರಣೀತ ಈ ಅಮಾನವೀಯ ನೀತಿಗಳನ್ನು ಭಾರತದ ಬಿ.ಜೆ.ಪಿ ನೇತೃತ್ವದ-ಎನ್.ಡಿ.ಎ ಸರ್ಕಾರವು ಹತ್ತಿಕ್ಕುವುದನ್ನು ಬಿಟ್ಟು ಇನ್ನಷ್ಟು ಬೇಗ ದುಡಿವ ವರ್ಗದ ಚರ್ಮ ಸುಲಿದು ಅಟ್ಟಹಾಸ ಗೈಯ್ಯುತ್ತಿರುವ ಸಂದರ್ಭದಲ್ಲಿ, ಸಮರಧೀರ ಸಂಘಟನೆ ಸಿ.ಐ.ಟಿ.ಯು ಗೆ ಸೇರ್ಪಡೆಯಾದ ಅಂಗನವಾಡಿ ನೌಕರರ ಅಖಿಲಭಾರತ ಸಮ್ಮೇಳನ 3 ದಿನಗಳ ಕಾಲ ನಡೆಯಿತು. ಅಷ್ಟೇ ಅಲ್ಲ ಅಂಗನವಾಡಿ ಮಹಿಳೆಯರ ಮೇಲೆ ಜಾಗತೀಕ ಪರಿಸ್ಥಿತಿ ಯಾವ ಪರಿಣಾಮ ಬೀರಿದೆ, ದೇಶದ, ರಾಜ್ಯದ ರಾಜಕೀಯ ಪರಿಸ್ಥಿತಿ ಅವು ಅನುಸರಿಸುತ್ತಿರುವ ನೀತಿಗಳ ಬಗ್ಗೆ ತೀವ್ರವಾಗಿ ಚರ್ಚೆಗಳನ್ನು ನಡೆಸಲಾಯಿತು.


ಸುಧಾರಣೆಗಳ ನೆಪದಲ್ಲಿಂದು ಅಭಿವೃದ್ಧಿ ಯೋಜನೆಗಳಿಗೆ ಹಣ ಕಡಿತ ಮಾಡಲಾಗುತ್ತಿದೆ. ಸರ್ಕಾರದ ಹುದ್ದೆಗಳಲ್ಲಿ ಕಡಿತ, ಖಾಸಗೀಕರಣವೇ ಮೊದಲಾದ ದೇಶ ದಿವಾಳಿ ನೀತಿಗಳನ್ನು ಮಂಡಿಸಲಾಗುತ್ತಿದೆ. ಕಲ್ಯಾಣ ಕಾರ್ಯಕ್ರಮವಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್)ನ ಮೇಲೂ ಜಾಗತೀಕರಣವು ಪರಿಣಾಮ ಬೀರಿದೆ. 9ನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಈ ಐ.ಸಿ.ಡಿ.ಎಸ್ ಕಾರ್ಯಕ್ರಮ ಪೂರ್ತಿಗೊಳಿಸಬೇಕೆಂದಿತ್ತು. 5614 ಐ.ಸಿ.ಡಿ.ಎಸ್ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಬೇಕಿತ್ತು. ಆದರೆ 4587 ಯೋಜನೆಗಳು ಮಾತ್ರ ಚಾಲ್ತಿಯಲ್ಲಿವೆ. ಕೆಲವು ಕಾರ್ಯಗತಗೊಳಿಸಲಾಗಲಿಲ್ಲ. ವಿತ್ತ ಸಚಿವಾಲಯವು ಹೊಸ ಯೋಜನೆ ಆರಂಭಿಸಲು ಅನುಮತಿ ನೀಡಿಲ್ಲ. ಪಂಜಾಬಿನಲ್ಲಿ ಸುಮಾರು 2600 ಅಂಗನವಾಡಿ ನೌಕರರನ್ನು ಕೆಲಸದಿಂದ ತೆಗೆಯುತ್ತಿದ್ದಾರೆ. 32 ಯೋಜನೆಗಳಿಗೆ ಮಂಜೂರಾತಿ ತಡೆಹಿಡಿದಾಗ, ನಮ್ಮ ಸಂಘದ ಹೋರಾಟದ ಫಲವಾಗಿ ಮಂಜೂರಾತಿ ಮತ್ತೆ ಪಡೆಯಲಾಗಿದೆ.

ರಾಜ್ಯ ಸರ್ಕಾರವು ಪೌಷ್ಟಿಕಾಂಶದ ಆಹಾರವನ್ನು ಒದಗಿಸುವುದು ಅದರ ಜವಾಬ್ದಾರಿ. ಆದರೂ ತಿಂಗಳಾನುಗಟ್ಟಲೆ ಸರಬರಾಜು ಮಾಡದೇ ಇರುವುದರಿಂದ ಮಕ್ಕಳ ಹಾಜರಾತಿ ಕಡಿಮೆ ಆಗುತ್ತದೆ. ಪರಿಣಾಮವಾಗಿ ಕೇಂದ್ರ ಮುಚ್ಚಲು ಹೇಳಲಾಗುತ್ತಿದೆ. ಗೌರವಧನ ತಡೆಹಿಡಿಯಲಾಗುತ್ತದೆ. ಮತ್ತೊಂದೆಡೆ ಸಮೂಹದ ಪಾಲ್ಗೊಳ್ಳುವಿಕೆಯ ನೆಪದಲ್ಲಿ ಕೇಂದ್ರಗಳಿಗೆ ತಗಲುವ ಹಣಕಾಸು ವೆಚ್ಚವನ್ನು ದಾನಿಗಳಿಂದ ವಸೂಲು ಮಾಡಲು ಹೇಳಿದೆ, ವಸೂಲಿಗೆ ತಪ್ಪಿದ್ದಲ್ಲಿ ಪಂಚಾಯತಿಗಳಿಗೆ ಅಂಗನವಾಡಿ ಕೇಂದ್ರ ಒಪ್ಪಿಸಲಾಗಿದೆ. ಒಂದಲ್ಲಾ ಒಂದು ಕುಂಟು ನೆಪ ಮುಂದೆ ಮಾಡಿ ಐ.ಸಿ.ಡಿ.ಎಸ್ ಯೋಜನೆಯನ್ನು ಹತ್ತಿಕ್ಕಲು ಸರ್ವ ಪ್ರಯತ್ನ ನಡೆಯುತ್ತಿದೆ. ಅನೇಕ ಯೋಜನೆಗಳಲ್ಲಿ ನೌಕರರಿಗೆ ಕನಿಷ್ಟ ಉದ್ಯೋಗ ಭದ್ರತೆಯೂ ಇಲ್ಲ, ಅಧಿಕಾರಿಗಳಿಂದ ಪಂಚಾಯತಿ ಸದಸ್ಯರಿಂದ ಕಿರುಕುಳ ಲೈಂಗಿಕ ಹಿಂಸೆ ನಡೆದೇ ಇದೆ. ಉದ್ಯೋಗ ಕಡಿತ ನೇಮಕಾತಿಯ ಮೇಲಿನ ನಿರ್ಬಂಧ ಹೇರಿದ್ದರಿಂದ ನೂರಾರು ಮೇಲ್ವಿಚಾರಕಿಯರ ಹುದ್ದೆ ಖಾಲಿ ಇದ್ದು ಕೆಲವೇ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗುತ್ತದೆ. ಇದರಿಂದ ಕೆಲಸದ ಹೊರೆ ಹಲವು ಪಟ್ಟು ಹೆಚ್ಚಿದೆ. ರಾಜ್ಯ ಸರ್ಕಾರವು ಬಲವಂತವಾಗಿ ತನ್ನ ಯೋಜನೆ ಜಾರಿ ಮಾಡಲು ಬಳಸಿಕೊಳ್ಳುತ್ತಿದೆ.

ಮುಖ್ಯವಾಗಿ ಅಂಗನವಾಡಿ ಕೇಂದ್ರಗಳನ್ನು ಗ್ರಾಮಪಂಚಾಯತಿಗಳಿಗೆ ವಹಿಸಿಕೊಡುತ್ತಿರುವುದು ವಿವಿಧ ರಾಜ್ಯಗಳಲ್ಲಿ ಪ್ರಸ್ತಾಪವಾಗಿದೆ. ಇದರ ಉದ್ದೇಶ ಅಂಗನವಾಡಿ ನೌಕರರನ್ನು ಖಾಯಂಗೊಳಿಸಬೇಕಾದ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಮತ್ತು ಹಂತಹಂತವಾಗಿ ಯೋಜನೆಯನ್ನು ನಿಷ್ಕ್ರಿಯಗೊಳಿಸುವುದು. ಏಕೆಂದರೆ ಪಂಚಾಯತ್‌ಗಳಿಗೆ ಈಗ ಕೊಡುತ್ತಿರುವ ಅನುದಾನವೇ ಸಾಲುತ್ತಿಲ್ಲ. ಇನ್ನು ಐ.ಸಿ.ಡಿ.ಎಸ್ ನ ಕೆಲಸ ವಹಿಸಿದರೆ ಗತಿ ಏನಾದೀತು?

ಹೋರಾಟಗಳು

ಈ ಎಲ್ಲ ಸಮಸ್ಯೆಗಳ ವಿರುದ್ಧ ಪ್ರಚಾರ ಪ್ರಕ್ಷೋಭೆ ರಾಜ್ಯ-ರಾಷ್ಟ್ರ ಮಟ್ಟದ ಹೋರಾಟ ಜಂಟಿ ಹೋರಾಟಗಳು ನಡೆಯುತ್ತಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಅಂಗನವಾಡಿ ನೌಕರರನ್ನು ಖಾಯಂಗೊಳಿಸಬೇಕೆಂದು ಹೂಡಲಾಗುವ ಮೊಕದ್ದಮೆಯಲ್ಲಿ ಪಾಲ್ಗೊಳ್ಳಲು ಒಕ್ಕೂಟ ನಿರ್ಧರಿಸಿದೆ. ಈಗಾಗಲೇ ಮುಖ್ಯ ಬೇಡಿಕೆಗಳಾದ ಖಾಯಮಾತಿ, ಹೆಚ್ಚಿಸಿದ ಗೌರವಧನ ಶೀಘ್ರ ಬಿಡುಗಡೆಗೆ ಒತ್ತಾಯಿಸಿ, ಖಾಸಗೀಕರಣ ವಿರುದ್ಧ, ಪಂಚಾಯತ್‌ಗೆ ವಹಿಸಿಕೊಡುವ ಪ್ರಸ್ತಾಪಗಳ ವಿರುದ್ಧ ಮಾನವ ಸಂಪನ್ಮೂಲ ಮಂತ್ರಿಗಳಿಗೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸುಮಿತ್ರ ಮಹಾಜನ್ ಹಾಗೂ ಆಯಾ ರಾಜ್ಯ ಸರ್ಕಾರಗಳಿಗೆ ಟೆಲಿಗ್ರಾಂ, ಪತ್ರ ಚಳುವಳಿ, ಧರಣಿ, ರ‍್ಯಾಲಿ ಮುಂತಾದ ರೀತಿಯ ಪ್ರತಿಭಟನಾ ಕಾರ್ಯಕ್ರಮಗಳು ನಡೆದೇ ಇವೆ. ಹೋರಾಟದ ಮೂಲಕ ಕೆಲವನ್ನು ಸಾಧಿಸಲಾಗಿದೆ.



ಐ.ಸಿ.ಡಿ.ಎಸ್ ನ್ನು ಪಂಚಾಯತಿಗೆ ವಹಿಸಿಕೊಡುವ ಪ್ರಸ್ತಾಪಕ್ಕೆ ತುರ್ತು ಹಿನ್ನಡೆಯಾಗಿದೆ. ಸ್ವಲ್ಪ ಮಟ್ಟಿನ ಗೌರವಧನದಲ್ಲಿ ಹೆಚ್ಚಳವನ್ನು, ಕೆಲವು ಸವಲತ್ತನ್ನು ಪಡೆಯಲು ಸಾಧ್ಯವಾಗಿದೆ. ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕೆಂದು ನಿರ್ದೇಶನ ಬಂದಿದೆ. ಕಲ್ಯಾಣ

ನಿಧಿ ಗುಂಪು ವಿಮಾ ಯೋಜನೆ ಇತ್ಯಾದಿ ರಚಿಸಲು ಹೇಳಿದೆ. ಪ್ರಾಥಮಿಕ ಶಾಲಾ ಶಿಕ್ಷಕಿಯರಾಗಿ, ಎ.ಎನ್.ಎಂ.ಗಳ ನೇಮಕಾತಿಯಲ್ಲಿ ಮೀಸಲಾತಿ ನೀಡಬೇಕೆಂದು ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ. 135 ದಿನಗಳ ಹೆರಿಗೆ ರಜೆ ಪಡೆಯಲಾಗಿದೆ. ಕುಂದುಕೊರತೆ ನಿವಾರಣಾ ಸಮಿತಿ ರಚನೆಯಲ್ಲಿ ಅಂಗನವಾಡಿ ನೌಕರರಿಗೆ ಪ್ರಾಶಸ್ತ್ಯ ನೀಡಿದೆ.

ಸಾಂದರ್ಭಿಕ ವೆಚ್ಚಗಳಿಗೆ ಕೊಡಲಾಗುವ ಹಣ ವೈದ್ಯಕೀಯ ಕಿಟ್, ಶಿಕ್ಷಣದ ಕಿಟ್‌ಗಳಿಗೆ ಹಣ ಹೆಚ್ಚಿಸಲಾಗಿದೆ. ಪಶ್ಚಿಮಬಂಗಾಳದಲ್ಲಿ ಹೆಚ್ಚುವರಿಯಾಗಿ 200 ರೂ ಹಾಗೂ ದುರ್ಗಾಪೂಜಾ ಕೊಡುಗೆ 1000-800 ರೂ ನೀಡಲಾಗುತ್ತಿದೆ. ಕರ್ನಾಟಕದಲ್ಲಿ ಕೂಡ 5 ಸಾವಿರದಿಂದ 10 ಸಾವಿರದವರೆಗೆ ಅನಾರೋಗ್ಯದ ಖರ್ಚು, 7 ದಿನಗಳ ಬೇಸಿಗೆ ರಜೆ, ಮರಣ ಪರಿಹಾರ ನಿಧಿ, ಮೇಲ್ವಿಚಾರಕಿ ಹುದ್ದೆಯಲ್ಲಿ ಶೇ.40 ಮೀಸಲಾತಿ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಪಾಂಡಿಚೇರಿಗಳಲ್ಲಿ ಕೆಲವು ಸವಲತ್ತು ಪಡೆದುಕೊಳ್ಳಲಾಗಿದೆ. ಸ್ಥಳೀಯವಾಗಿ ಹಲವಾರು ಸವಲತ್ತುಗಳನ್ನು ನಿರಂತರ ಹೋರಾಟಗಳಿಂದ ದೇಶದಲ್ಲಿ ಪಡೆಕೊಳ್ಳಲಾಗಿದೆ.

ಬೆಳೆಯುತ್ತಿರುವ ಸಂಘಟನೆ

ಕಳೆದ ಸಮ್ಮೇಳನಕ್ಕಿಂತ ಈ ಸಮ್ಮೇಳನದಲ್ಲಿ ರಾಜ್ಯಗಳ ಪಾಲ್ಗೊಳ್ಳುವಿಕೆ, ಹೋರಾಟ ಕಾರ್ಯಕ್ರಮ, ಸದಸ್ಯತ್ವ ವಿಸ್ತರಣೆಯಲ್ಲಿ ಸುಧಾರಣೆ ಕಂಡು ಬಂದಿದೆ. 1999ರಲ್ಲಿ 1,01,313, 2000 ನೇ ಇಸ್ವಿಯಲ್ಲಿ 1,12,137, 2001ರಲ್ಲಿ 1,36,577 ಸದಸ್ಯತ್ವ ನೋಂದಣಿ ಆಗಿದೆ.

ಅಂಗನವಾಡಿ ನೌಕರರನ್ನು ಖಾಯಂಗೊಳಿಸುವುದು, ಖಾಯಂ ಆಗುವವರೆಗೆ ಕಾರ್ಯಕರ್ತೆ ಮತ್ತು ಸಹಾಯಕಿಗೆ 2000ರೂ ಮತ್ತು 1500 ರೂ. ತಿಂಗಳಿಗೆ ನೀಡಬೇಕು, ಇನ್ಕ್ರಿಮೆಂಟ್ ಸಿಗಬೇಕು, ಏಕಪ್ರಕಾರದ ಸೇವಾ ನಿಯಮಾವಳಿ, ನೇಮಕಾತಿಗೆ ಮಾರ್ಗಸೂಚಿ, ಬಾಡಿಗೆ ಕಟ್ಟಡದ ಬಾಡಿಗೆ ಹಣ ನೀಡಬೇಕು. ಇತ್ಯಾದಿ ಬೇಡಿಕೆಗಳ ಬಗ್ಗೆ ಮುಂದಿನ ಹೋರಾಟ ರೂಪಿಸುವ ನಿಟ್ಟಿನಲ್ಲಿ ಸಂಘಟನೆ ಬಲಗೊಳಿಸಲು 4ನೇ ಅಖಿಲ ಭಾರತ ಸಮ್ಮೇಳನಕ್ಕೆ ಮುಂದಡಿ ಇಡಲಾಯಿತು.

ಪ್ರಾರಂಭದ ದಿನ ಪುರಿಯಲ್ಲಿ ಸಮ್ಮೇಳನದ ಪ್ರಯುಕ್ತ ಬೃಹತ್ ರ್‍ಯಾಲಿ ಹಾಗೂ ಬಹಿರಂಗಸಭೆ ನಡೆಯಿತು. ಇದನ್ನು ಉದ್ದೇಶಿಸಿ ಪಶ್ಚಿಮ ಬಂಗಾಳದ ಗ್ರಾಮೀಣಾಭಿವೃದ್ಧಿ ಮಂತ್ರಿ ಸೂರ್ಯಕಾಂತ ಮಿಶ್ರ ಮಾತನಾಡಿದರು.ದೇಶ ಗಂಭೀರ ಸಮಸ್ಯೆ ಎದುರಿಸುತ್ತಿದ್ದು ಇದರಿಂದ ಪಾರಾಗಲು ವಿದ್ಯಾರ್ಥಿ - ಯುವಜನ - ಮಹಿಳೆಯರು, ಕಾರ್ಮಿಕರು ದೇಶವುಳಿಸುವ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬಡವರು ಬದುಕಲಾರದ ಸ್ಥಿತಿಯ ಈ ವ್ಯವಸ್ಥೆ ವಿರುದ್ಧ ಕಾಂಗ್ರೆಸ್ ಹಾಗೂ ಬಿಜೆಪಿಯ ಎಮ್.ಎನ್.ಸಿ ಗಳಿಗೆ ಮಣೆ ಹಾಕುವ ನೀತಿಗಳ ವಿರುದ್ಧ ಚಳುವಳಿ ಇನ್ನಷ್ಟು ತೀವ್ರಗೊಳಿಸಬೇಕಿದೆ. ಯಾರ ಹತ್ತಿರ ಹಣವಿಲ್ಲವೋ ಅವರಿಗೂ ಎಲ್ಲ ಬಜಾರ್ ಮುಕ್ತವಾಗಿ ತೆಗೆದಿಡುವಂತ ಪರಿಸ್ಥಿತಿ ನಿರ್ಮಾಣಕ್ಕೆ ಹಾಗೂ ಸಂಪತ್ತನ್ನು ಲೂಟಿ ಮಾಡುವವರ ವಿರುದ್ಧ ರಾಜಕೀಯ ಹೋರಾಟ ನಡೆಸಬೇಕಾಗಿದೆ ಎಂದರು. ಯುವಜನ ಮತ್ತು ಕ್ರೀಡಾ ಮಂತ್ರಿ ಸುಭಾಷ್ ಚಕ್ರವರ್ತಿ ಮಾತನಾಡುತ್ತ ಮಹಿಳೆಯರಿಗೆ ಎಲ್ಲಿಯವರೆಗೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲವೋ ಅಲ್ಲಿಯವರೆಗೆ ದೇಶದ ಅಭಿವೃದ್ಧಿ ಸಾಧ್ಯವಾಗದು. ಆ ಸ್ವಾತಂತ್ರ್ಯವನ್ನು ಯಾರೂ ದಾನ ಮಾಡುವುದಿಲ್ಲ. ಹೋರಾಡಿ ಕಸಿದು ಕೊಳ್ಳಬೇಕು. ಸಂಘಟಿತರಾಗುತ್ತಿರುವ ಅಂಗನವಾಡಿ ಮಹಿಳೆಯರು ಇತರೇ ಕತ್ತಲೆಯಲ್ಲಿರುವ ಸದಾ ಸಂಕೋಲೆ ಯಲ್ಲಿರುವ ಮಹಿಳೆಯರನ್ನು ಬಂಧಮುಕ್ತರನ್ನಾಗಿಸಲು ಮುಂದಾಗ ಬೇಕೆಂದರು. ವೇದಿಕೆಯಲ್ಲಿ ಓರಿಸ್ಸಾದ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಲಂಬೋದರ ನಾಯಕ, ಅಂಗನವಾಡಿ ಕಾರ್ಯಾಧ್ಯಕ್ಷ ಭವತೋಷ ರೈ, ಕೆ. ಹೇಮಲತಾ ಇದ್ದರು. ಸಿ.ಐ.ಟಿ.ಯು ನ ಕಾರ್ಯದರ್ಶಿ ಕನಯ್ ಬ್ಯಾನರ್ಜಿಯವರು ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿದರು. ಈಗಿನ ಅರ್ಥ ವ್ಯವಸ್ಥೆಯಲ್ಲಿ ದುಡಿಯುವ ಮಹಿಳೆಯರ ಸ್ಥಿತಿ, ಹೊಸ ಶೋಷಣಾ ವ್ಯವಸ್ಥೆಯ ಹರಿಕಾರರಾದ ಅಮೇರಿಕಾ, ಇಂಗ್ಲೆಂಡ್ ಪ್ರಚೋದಿತ ನೀತಿಗಳು ಹಸಿವು, ಬಡತನ ಹೆಚ್ಚಿಸುತ್ತಿರುವ ಬಗ್ಗೆ ಕೂಲಂಕಷವಾಗಿ ಚಿತ್ರಣ ನೀಡಿದರು. ಕಳೆದ ಒಂದು ದಶಕದಿಂದ ಸಿ.ಐ.ಟಿ.ಯು ಸಮರಧೀರ ಹೋರಾಟ ನಡೆಸದಿದ್ದರೆ ಇಂದು ಕಾರ್ಮಿಕ ವರ್ಗ ಇರುತ್ತಿರಲಿಲ್ಲ, ದುಡಿವ ಜನರ ಮೇಲೆ ಜಗತ್ತಿನಾದ್ಯಂತ ಬಂಡವಾಳಶಾಹಿ ದಾಳಿ ಶುರು ಮಾಡಿದ್ದು ಭಾರತದ ಅಟಲ್ - ಅದ್ವಾನಿ ಸರ್ಕಾರ ಕ್ರೂರ ದಾಳಿಯ ಜಾರಿಗೆ ಮಿಂಚಿನವೇಗದಲ್ಲಿ ಮುಂದಾಗಿದೆ. ನಾವು ನಮ್ಮ ಸೇವಾ ಭದ್ರತೆಗೋಸ್ಕರ ಹೋರಾಟ ತೀವ್ರಗೊಳಿಸಬೇಕೆಂದರು. ಅಖಿಲ ಭಾರತ ಅಧ್ಯಕ್ಷೆ ನೀಲಿಮಾ ಮೈತ್ರ ಎ.ಐ.ಎಫ್.ಎ.ಡಬ್ಲ್ಯೂ.ಹೆಚ್ ದ ಧ್ವಜಾರೋಹಣ ಮಾಡಿ ಅಧ್ಯಕ್ಷತೆ ವಹಿಸಿದ್ದರು. ಸಿ.ಐ.ಟಿ.ಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ.ಪಂಧೆಯವರು ಸಮಾರೋಪ ಸಮಾರಂಭದಲ್ಲಿ ಮಾತಾಡಿದರು.

ಪ್ರಧಾನ ಕಾರ್ಯದರ್ಶಿ ಕೆ. ಹೇಮಲತಾರವರು ಮಂಡಿಸಿದ ಕರಡು ವರದಿಯ ಮೇಲೆ 19 ರಾಜ್ಯಗಳಿಂದ 52 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಅಖಿಲ ಭಾರತ ಫೆಡರೇಶನ್‌ಗೆ ಕಾಂ.ನೀಲಿಮಾ ಮೈತ್ರ ಅಧ್ಯಕ್ಷರಾಗಿ, ಕಾಂ.ಭವತೋಷ ರೈ ಕಾರ್ಯಾಧ್ಯಕ್ಷರಾಗಿ, ಕಾಂ.ಹೇಮಲತಾ ಪ್ರಧಾನ ಕಾರ್ಯದರ್ಶಿ, ಕಾಂ.ಎ.ಆರ್. ಸಿಂಧು ಖಜಾಂಚಿಯಾಗಿ ಆಯ್ಕೆಯಾದರು. ಕರ್ನಾಟಕದ ಎಸ್.ವರಲಕ್ಷ್ಮಿ ಕಾರ್ಯದರ್ಶಿ ಗಳಲ್ಲೋರ್ವರಾಗಿಯೂ, ಶಾಂತಾಘಂಟಿ ಸಮಿತಿ ಸದಸ್ಯರಾಗಿಯೂ ಆಯ್ಕೆಯಾದರು. ಸಮ್ಮೇಳನದಲ್ಲಿ ಒಟ್ಟು 384 ಜನ ಪ್ರತಿನಿಧಿಗಳಲ್ಲಿ 3 ಜನ ಎಮ್.ಎಲ್.ಎಗಳು, 10 ಜನ ಕಾರ್ಪೋರೇಟರ್ ಮತ್ತು ಕೌನ್ಸಿಲರ್‌ಗಳು, 2 ಜನ ಜಿಲ್ಲಾ ಪಂಚಾಯತ್ ಸದಸ್ಯರು, 11 ಜನ ಗ್ರಾಮ ಪಂಚಾಯತ್ ಸದಸ್ಯರು ಪಾಲ್ಗೊಂಡಿದ್ದರು. ○

ಚರ್ಚೆಯಲ್ಲಿ ಹೊರಹೊಮ್ಮಿದಂತೆ..

ಪಂಜಾಬ್‌ನ ಸಾಮಾಜಿಕ ಸುರಕ್ಷಾ ಮಂತ್ರಿ ಗೋವಿಂದ ಎನ್ನುವವರು ಐ.ಸಿ.ಡಿ.ಎಸ್ ಯೋಜನೆ ಮುಗಿಸಲು ಅತ್ಯಂತ ಆಘಾತಕಾರಿ ನಿರ್ಣಯ ಕೈಗೊಂಡಿದ್ದರು. ಆಗ ಪಂಜಾಬ್ ಅಂಗನ ವಾಡಿ ನೌಕರರು ವಿವಿಧ ಹಂತದಲ್ಲಿ ಹೋರಾಟ ನಡೆಸಿದರು. ರಾಜಧಾನಿಯಲ್ಲಿ ಪ್ರತಿಭಟನೆ ಕೈಗೊಂಡರು. ಹೋರಾಟ ನಿರತ ಮಹಿಳೆಯರ ಮೇಲೆ ಮಂತ್ರಿಯು ಪೋಲೀಸರನ್ನು ಛೂ ಬಿಟ್ಟು ಅಶ್ರುವಾಯು ಸಿಡಿಸಿ, ಲಾಠಿ ಚಾರ್ಜ್ ನಡೆಸಿದ. ಮಂತ್ರಿಯ ನೀಚ ಕೃತ್ಯದ ವಿರುದ್ಧ ಅಂಗನವಾಡಿ ನೌಕರರು ಮತ್ತೆ ಸಿಡಿದೆದ್ದರು. ಅನಿವಾರ್ಯವಾಗಿ ಹೋರಾಟಕ್ಕೆ ಮಣಿದ ಮುಖ್ಯಮಂತ್ರಿ ಪ್ರಕಾಶಸಿಂಗ್ ಬಾದಲ ಸಾಮಾಜಿಕ ಸುರಕ್ಷಾ ಮಂತ್ರಿಯನ್ನು ಸಚಿವ ಸಂಪುಟದಿಂದ ಕೈಬಿಟ್ಟಿದ್ದಷ್ಟೇ ಅಲ್ಲ ಆತನನ್ನು ಪಕ್ಷದಿಂದಲೂ ಹೊರಹಾಕಲಾಯಿತು. ತಾವು ಪ್ರತೀಕಾರ ತೀರಿಸಿದೆವು ಎಂದರು, ಪಂಜಾಬ್‌ನ ಸಂಗಾತಿ ಉಷಾರಾಣಿ.

* * * *

ಕಮಲಾ ಸಹಾ ಓರ್ವ ಸಹಾಯಕಿ ಪಶ್ಚಿಮ ಬಂಗಾಳದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಧೀರೆ. ಪೌಷ್ಠಿಕ ಆಹಾರ ಮನೆಗೇ ಕೊಡುವ ಪದ್ಧತಿ ತಂದ್ರೆ ಅಂಗನವಾಡಿಗೆ ಮಕ್ಕಳು ಬರಲ್ಲ. ಹಾಗಾಗಿ ಸಹಾಯಕಿಯರು ಕೆಲಸ ಕಳಕೊಳ್ಳುವ ಸಂಭವಗಳೇ ಜಾಸ್ತಿ ಎಂದರು.

ನಾವು ಆಸ್ಸಾಂದಿಂದ ಬಂದಿದ್ದೇವೆ. ದಿನಂಪ್ರತಿ ಉಗ್ರವಾದಿಗಳ ದಾಳಿಯನ್ನು ಎದುರಿಸಿಯೇ ಅಂಗನವಾಡಿ ನಡೆಸುತ್ತಿದ್ದೇವೆ, ಭಯೋತ್ಪಾದಕರ ಗುಂಡಿನ ದಾಳಿಯಿಂದ ನಮ್ಮ ಮಕ್ಕಳನ್ನು ರಕ್ಷಿಸುತ್ತಿದ್ದೇವೆ. 14-15 ಕಿ.ಮೀ ದೂರ ಸೈಕಲ್ ತುಳಿದು ನಮ್ಮ ಕೇಂದ್ರಗಳಿಗೆ ಹೋಗ್ತೇವೆ. ನಾನೊಬ್ಬ ಬುಡಕಟ್ಟು ಜನಾಂಗದ ಮಹಿಳೆ. ಬೋಡೋ ಆಟಾನಾಮಸ್ ಕೌನ್ಸಿಲ್ (ಬಿ.ಎ.ಸಿ.)ನ ಸದಸ್ಯೆ. ಆದರೆ ಬಿ.ಎ.ಸಿಯ ಆಡಳಿತ ಮಂಡಳಿಯ ತಪ್ಪು ನಿರ್ಧಾರದಿಂದಾಗಿ ಬುಡಕಟ್ಟು ಮತ್ತು ಬುಡ ಕಟ್ಟೇತರರ ಮಧ್ಯೆ ಶೀತಲ ಸಮರ ನಡೆಯುವಂತಾಗಿ ಅದು ಅಂಗನವಾಡಿ ಕೇಂದ್ರಗಳ ಮೇಲೂ ಪರಿಣಾಮ ಬೀರುತ್ತಿದೆ. ದಿನೇ ದಿನೇ ಭಯೋತ್ಪಾದಕರ ಪ್ರತ್ಯೇಕತಾವಾದಿಗಳ ಉಪಟಳ ಹೆಚ್ಚುತ್ತಿವೆ. ಇಂಥ ಭಯಾನಕ ಸ್ಥಿತಿಯಲ್ಲಿ ಸಿ.ಡಿ.ಪಿ.ಒ ಪೋಲೀಸ್ ಸ್ಟೇಷನ್‌ನಲ್ಲಿಯೇ ಗೌರವಧನ ವಿತರಿಸುತ್ತಿದ್ದಾರೆ. ಒಂದೆಡೆ ನಾವು ನಮ್ಮ ಬಹುದಿನಗಳ ಬೇಡಿಕೆ ಖಾಯಮಾತಿ, ಪಿಂಚಣಿ, ಪ್ರಮೋಶನ್‌ಗೆ ಒತ್ತಾಯಿಸುತ್ತಲೇ ಇನ್ನೊಂದೆಡೆ ಈ ಪ್ರತ್ಯೇಕತಾವಾದಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಎದುರಿಸುತ್ತಿದ್ದೇವೆ ಎನ್ನುತ್ತಾರೆ ಆಸ್ಸಾಂನ ಬೀನಾ ಬಸು ಬಸುರಾಯವರು.

* * * *

ಪಶ್ಚಿಮಬಂಗಾಳದ ರುಕ್ಸಾನಾ ಇಬ್ರಸಿ ದೇಶದ ಬಗ್ಗೆ ಅತ್ಯಂತ ಕಳಕಳಿ ವ್ಯಕ್ತಪಡಿಸುತ್ತಾ ನಮ್ಮ ಸಂಘಟನೆಗೆ ಜಾತಿ, ಧರ್ಮ, ಬೇಧ ಭಾವವಿಲ್ಲ. ಹಿಂದೂ, ಸಿಖ್, ಇಸಾಯಿ ಎಲ್ಲರೂ ಒಂದೇ ಬ್ಯಾನರ್ ಅಡಿಯಲ್ಲಿ ಬಂದಿದ್ದೇವೆ. ಸ್ವಾತಂತ್ರ್ಯ ಬಂದು 55 ವರ್ಷಗಳಲ್ಲಿ ಬಹುತೇಕ ವರ್ಷ ದೇಶವನ್ನು ಕಾಂಗ್ರೆಸ್ ಆಳಿತು. ಸ್ವಾತಂತ್ರ್ಯದ ಕನಸು ನನಸಾಗಿಸಲು ಸಾಧ್ಯವಾಗಲಿಲ್ಲ. ಬಡವರು ಕೆಲಸ ಕಳಕೊಳ್ತಿದ್ದಾರೆ. ಈಗ ಬಿ.ಜೆ.ಪಿ ಕೂಡ ಇನ್ನೂ ಭ್ರಷ್ಟ ಧರ್ಮಾಂಧ ಕೆಲಸಗಳ ಮೂಲಕ ದೇಶ ಒಡೀತಿದೆ. ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ್ದು ಚಳುವಳಿ ಮಾಡಿದ್ದು ದೇಶ ಉಳಿಸಲು; ಸಮಗ್ರತೆ ಕಾಪಾಡಲು ಹೊರತು ವಿಚ್ಛಿದ್ರಕಾರಿಗಳಿಗೆ ಸಾಮ್ರಾಜ್ಯಶಾಹಿಗಳಿಗೆ ಮಾರಲು ಅಲ್ಲ ಎಂದು ಆಕ್ರೋಶ ಭರಿತರಾಗುತ್ತಾರೆ.

ದೇಶದಲ್ಲಿ 12 ಲಕ್ಷಕ್ಕೂ ಹೆಚ್ಚು ಅಂಗನವಾಡಿ ನೌಕರರು ಐ.ಸಿ.ಡಿ.ಎಸ್‌ನಲ್ಲಿ ತಾಯಿ- ಮಕ್ಕಳ ರಕ್ಷಣೆಯನ್ನು ಮಾಡಲು ಯೋಜನೆ ಜಾರಿಗೆ ನಾವು ಶ್ರಮಿಸಿದ್ದೇವೆ. ನಮ್ಮ ದೇಶದಲ್ಲಿ ಸ್ತ್ರೀ 'ಮಾತೆ' ಅಲ್ಲವೆ? ಆದ್ರೆ ಅದೇ ಮಾತೆಯರ ಸ್ಥಿತಿ ಗುಜರಾತಿನಲ್ಲಿ ಏನಾಗಿದೆ? ಗರ್ಭಿಣಿ ತಾಯಿಯ ಹೊಟ್ಟೆಯನ್ನು ಹಿಂದುತ್ವದ ತ್ರಿಶೂಲ ಬಗೆದಿದೆ, ಭ್ರೂಣ ಹೊರತೆಗೆದು ವಿಲಿವಿಲಿ ಒದ್ದಾಡುವ ತಾಯಿಯೆದುರು ಚೆಂಡಾಡಿದ್ದಾರೆ. ಹಾಗಾದರೆ ಭಾರತದಲ್ಲಿ ಇದು 'ತಾಯಂದಿರ' ಸ್ಥಾನಕ್ಕೆ ಸಿಗುವ ಮರ್ಯಾದೆಯೆ?

* * * *

ಬಿಹಾರದ ಸುನಿತಾ ಹೇಳ್ತಾರೆ, ನಮ್ಮ ರಾಜ್ಯದಲ್ಲಿ ಮಹಿಳೆಯೇ ಮುಖ್ಯಮಂತ್ರಿ. ಆದ್ರೆ ಇವರೂ ಮಹಿಳಾವಿರೋಧಿ ಹೊಸ ಆರ್ಥಿಕ ನೀತಿಯ ಕಾರ್ಯಕ್ರಮ ಜಾರಿಗೆ ಮುಂದಾಗಿದ್ದಾರೆ. ಬಿ.ಜೆ.ಪಿಯಂತೂ ಅಮೇರಿಕಾದ ಹಿಂಬಾಲಕನಾಗಿ ದೇಶವನ್ನು ಯುಎಸ್ ಎಗೆ ಅರ್ಪಿಸಲು ಹೊರಟಂತಿದೆ. ಅಂಗನವಾಡಿ ಕೇಂದ್ರಗಳ ಖಾಸಗೀಕರಣದಿಂದ, ಗ್ರಾಮ ಪಂಚಾಯತಿಗೆ ವಹಿಸಿಕೊಡುವುದರಿಂದ ನಾವು ಜೀತದಾಳಿನಂತೆ ದುಡಿಯ ಬೇಕಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು. ವಿಶ್ವಬ್ಯಾಂಕ್‌ನ ಬಹುದೊಡ್ಡ 'ಸಾಲಗಾರ' ಚಂದ್ರಬಾಬು ನಾಯ್ಡು ಆಂಧ್ರದಲ್ಲಿ ಜನಗಳ ಜೀವ ಹಿಂಡುವ, ಹೋರಾಟ ಧಮನ ಮಾಡುವ ಕೆಲಸದಲ್ಲಿ ನಿರತನಾಗಿದ್ದಾನೆ. take home ration (THR) ಮನೆಗಳಿಗೆ ಆಹಾರ ಒಯ್ಯುವ ಯೋಜನೆಯನ್ನು ಐ.ಸಿ.ಡಿ.ಎಸ್ ನಲ್ಲಿ ಪರಿಚಯಿಸಿದ್ದರಿಂದ ದೊಡ್ಡ ಆತಂಕವಿದೆ. 1 ಮತ್ತು 2ನೇ ಗ್ರೇಡ್‌ನ ಮಕ್ಕಳು 3ನೇ ಗ್ರೇಡ್‌ಗೆ ಇಳಿವ ಸಂಭವ ಜಾಸ್ತಿ. ಏಕೆಂದರೆ ಆಹಾರಗಳು ಸರಿಯಾಗಿ ಫಲಾನುಭವಿಗಳಿಗೆ ತಲುಪುವುದಿಲ್ಲ' ಎಂದು ಆಂಧ್ರದ ಬೇಬಿರಾಣಿ ಹೇಳಿದರು.

* * * *

ಪಶ್ಚಿಮ ಬಂಗಾಳದ ಸುಲೇಖಾ ಚರ್ಚೆಯಲ್ಲಿ ಪಾಲ್ಗೊಂಡು ವಾಜಪೇಯಿಯವರು ಶ್ರಮಿಕರ ಮೇಲೆ ಯುದ್ಧಸಾರಿ ಶ್ರಮಿಕರ ಹಕ್ಕುಗಳನ್ನು ಕಸಿದುಕೊಂಡಿದ್ದಾರೆ. ನಮ್ಮ ಎಡರಂಗ ಸರ್ಕಾರವು ಕೇಂದ್ರ ಸರ್ಕಾರದ ನೀತಿಗಳನ್ನು ಒಪ್ಪಿಕೊಂಡಿಲ್ಲ. ಈ ಸಮಾಜ ಪರಿವರ್ತನೆಗೆ ರಾಜಕೀಯ ಹೋರಾಟವನ್ನು ಬೆಳೆಸಲು ಪಶ್ಚಿಮ ಬಂಗಾಳದಲ್ಲಿ ನಿರಂತರ ಪ್ರಯತ್ನ ನಡೆದಿದೆ ಎಂದು ಪಶ್ಚಿಮ ಬಂಗಾಳದಲ್ಲಿ ಮಹಿಳೆಯರಿಗೆ ಅದರಲ್ಲೂ ಅಂಗನವಾಡಿ ನೌಕರರಿಗೆ ಚುನಾವಣೆಯಲ್ಲಿ ಪ್ರಾಶಸ್ತ್ಯ ಕೊಟ್ಟಿದ್ದನ್ನು ಸ್ಮರಿಸಿದರು.

* * * *

''ನಮ್ಮ ರಾಜ್ಯದಲ್ಲಿ ಜಯಲಲಿತಾರ ಎ.ಐ.ಎ.ಡಿ.ಎಮ್.ಕೆ ಆಡಳಿತಕ್ಕೆ ಬರುವಾಗ ತಾನು ಸರ್ಕಾರ ನಡೆಸಿದ್ರೆ ಅಂಗನವಾಡಿ ನೌಕರರಿಗೆ ಟೀಚರ್ ಟ್ರೇನಿಂಗ್ ಕೊಡಿಸುವುದಾಗಿ, ನೌಕರರೆಂದು ಪರಿಗಣಿಸುವುದಾಗಿ ಹೇಳಿ ಓಟು ಪಡೆಯಿತು. ಆದ್ರೆ ಭರವಸೆ ಸುಳ್ಳಾಗಿ ಅದೊಂದು ರಾಜಕೀಯ ನಾಟಕವಾಗುತ್ತಿದೆ. ತಮಿಳುನಾಡು ಸರ್ಕಾರವು ಪೌಷ್ಠಿಕ ಆಹಾರ ಯೋಜನೆ ರಾಜ್ಯದಲ್ಲಿ ಜಾರಿಮಾಡಿತು. 30 ಸಾವಿರ ನೌಕರರನ್ನು ಹೆಚ್ಚುವರಿ ಕೆಲಸಗಾರರೆಂದು ಪರಿಗಣಿಸಿ ಕೆಲಸದಿಂದ ತೆಗೆಯುತ್ತಿದೆ. ನಾವು ರಾಜ್ಯಾದ್ಯಂತ 'ನಮಗೆ ಕೆಲಸ ಕೊಡಿ ಇಲ್ಲವೇ ವಿಷ ಕೊಡಿ' ಎಂದು ಸರ್ಕಾರಕ್ಕೆ ಎಚ್ಚರಿಸಿದೆವು. ಸಾಮೂಹಿಕವಾಗಿ ಅಳುತ್ತ ಪ್ರತಿಭಟನಾ ಮೆರವಣಿಗೆ ಮಾಡಿದ ನಂತರ ಈಗ ರಿಟ್ರೆಂಚ್‌ಮೆಂಟ್ ಮಾಡಲ್ಲ ಎಂದು ಸರ್ಕಾರ ಆಶ್ವಾಸನೆ ನೀಡಿದೆ ಎಂದರು ತಮಿಳು ನಾಡಿನ ಪ್ರತಿನಿಧಿ.

* * * *

"ಮನೆಗಳಿಗೆ ಪಡಿತರ ಕೊಂಡೊಯ್ಯಿರಿ"

ಈ ಯೋಜನೆಯು ಹಲವು ರಾಜ್ಯಗಳ ಅನೇಕ ಯೋಜನೆಗಳಲ್ಲಿ ಜಾರಿ ಆಗುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಈ ಬಗ್ಗೆ ಹೊರಡಿಸಿರುವ ಮಾರ್ಗಸೂಚಿಯು ಟಿ.ಹೆಚ್. ಆರ್ ಯೋಜನೆಯನ್ನು ಸಾರ್ವತ್ರಿಕಗೊಳಿಸ ಬೇಕೆಂದು ಶಿಫಾರಸ್ಸು ಮಾಡಿದೆ. ಇದರ ಪ್ರಕಾರ 15 ದಿನ ಅಥವಾ 1 ತಿಂಗಳಿಗಾಗುವಷ್ಟು ಪೂರಕ ಪೌಷ್ಠಿಕ ಆಹಾರ ಫಲಾನುಭವಿಗಳಿಗೆ ಮನೆಗೆ ಕೊಂಡೊಯ್ಯಲು ನೀಡಲಾಗುವುದು. ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಹೋಗಿ ಇದರ ಸದ್ಬಳಕೆ ಬಗ್ಗೆ ಖಾತರಿಪಡಿಸಿಕೊಳ್ಳುವುದು. ಇದರಿಂದ ಕೆಲಸದ ಹೊರೆ ಹೆಚ್ಚುತ್ತದೆ.ಈ ಯೋಜನೆಯನ್ನೇ ತೊಡೆದು ಹಾಕುವುದಕ್ಕೆ ನಾಂದಿ ಹಾಡಿತು. ○

ಭ್ರಷ್ಟಾಚಾರ ನಿರ್ಮೂಲನೆಗೆಂದು ಇಂದು ಎಷ್ಟೆಲ್ಲಾ ಸಂಸ್ಥೆಗಳಿವೆ. ಕಾನೂನುಗಳಿವೆ. ಆದರೆ ಭ್ರಷ್ಟಾಚಾರ ಕಡಿಮೆಯಾಗುವುದಿರಲಿ, ನಿಯಂತ್ರಣಕ್ಕೆ ಬಾರದೇ ಹೆಚ್ಚುತ್ತಲೇ ಇದೆ. ಇದಕ್ಕೆ ಸಂಸ್ಥೆಯನ್ನಾಗಲೀ, ಆದರ ವ್ಯಕ್ತಿಗಳನ್ನಾಗಲೀ ಕೇವಲ ದೂರಿದರೆ ಸಾಲದು. ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಮೂಲಭೂತ ಅಂಶದತ್ತ ಗಮನ ಸೆಳೆವ ಕಥೆಯಿದು. ವ್ಯವಸ್ಥೆಯ ಸಮಗ್ರ ಬದಲಾವಣೆಯತ್ತ ಒತ್ತು ನೀಡಿದ್ದಾರೆ ಲೇಖಕರು

ಕಥೆ



ಸದಾಚಾರದ ತಾಯಿತ

ಹರಿಶಂಕರ ಪರಸಾಯಿ
ಅನು: ಡಾ. ಜಿ.ಭಾಸ್ಕರ ಮಯ್ಯ

ಒಂದು ರಾಜ್ಯದಲ್ಲಿ ಭ್ರಷ್ಟಾಚಾರ ತುಂಬಿ ಹೋಗಿದೆಯೆಂಬ ಗಲಭೆಯೆದ್ದಿತು.

ಒಂದು ದಿನ ರಾಜನು ತನ್ನ ಆಸ್ಥಾನದಲ್ಲಿ ಹೀಗೆಂದ - "ಸಭಾಸದರೆ, ಎಲ್ಲ ಕಡೆಯೂ ಭ್ರಷ್ಟಾಚಾರ ಹೆಚ್ಚಿದೆಯೆಂದು ಪ್ರಜೆಗಳಲ್ಲಿ ಗಲಭೆಯೆದ್ದಿದೆ. ನಮಗಂತೂ ಇವತ್ತಿನವರೆಗೂ ಅದೆಲ್ಲೂ ಕಾಣಲು ಸಿಗಲಿಲ್ಲ. ನಿಮಗೆಲ್ಲಾದರೂ ಕಾಣಲು ಸಿಕ್ಕಿದ್ದರೆ ಹೇಳಿರಿ".

ಆಸ್ಥಾನದಲ್ಲಿ ಮಂಡಿಸಿದವರೆಂದರು - "ನಿಮಗೇ ಕಾಣಲು ಸಿಗದಿದ್ದರೆ ನಮಗೆ ಹೇಗೆ ಕಾಣಲು ಸಿಗುತ್ತದೆ. ಸ್ವಾಮಿ?" ರಾಜನೆಂದ "ಅಲ್ಲ, ಹಾಗಲ್ಲ. ಕೆಲವೊಮ್ಮೆ ನನಗೆ ಕಾಣಲು ಸಿಗದೆ ಇರುವುದು ನಿಮಗೆ ಕಾಣಬಹುದು. ನನಗೆ ಕೆಟ್ಟ ಸ್ವಪ್ನಗಳು ಬೀಳುವುದೇ ಇಲ್ಲ. ನಿಮಗೆ ಬೀಳಬಹುದು". ಆಸ್ಥಾನಿಕರೆಂದರು - "ಹೌದು ಸ್ವಾಮಿ, ಆದರೆ ಅದು ಸ್ವಪ್ನದ ವಿಚಾರ".

ರಾಜನೆಂದ - "ಇರಲಿ, ಆದಾಗ್ಯೂ ಎಲ್ಲಾದರೂ ಭ್ರಷ್ಟಾಚಾರ ಕಂಡುಬರುತ್ತದೆಯೋ ಎಂದು ನೀವು ಇಡೀ ರಾಜ್ಯದಲ್ಲಿ ಹುಡುಕಿ ನೋಡಿ. ಎಲ್ಲಿಯಾದರೂ ಕಾಣಲು ಸಿಕ್ಕಿದರೆ ಸ್ಯಾಂಪಲ್ ತೆಗೆದುಕೊಂಡು ಬನ್ನಿ, ಅದು ಹೇಗಿದೆಯೆಂದು ನಾವೂ ನೋಡುತ್ತೇವೆ".

ಆಗ ಒಬ್ಬ ಸಭಾಸದನೆಂದ - "ಮಹಾಸ್ವಾಮಿ, ಅದು ನಮಗೆ ತೋರುವುದಿಲ್ಲ. ಅದು ಬಹಳ ಸೂಕ್ಷ್ಮವಿರುತ್ತದೆಂದು ಕೇಳಿದ್ದೇವೆ. ನಮಗೆ ನಿಮ್ಮ ವಿರಾಟ್ ಸ್ವರೂಪವನ್ನು ಕಾಣುವ ಅಭ್ಯಾಸ ಎಷ್ಟಾಗಿದೆಯೆಂದರೆ ನಮಗೆ ಸೂಕ್ಷ್ಮಗಳು ತೋರುವುದೇ ಇಲ್ಲ. ನಮಗೆಲ್ಲಾದರೂ ಭ್ರಷ್ಟಾಚಾರ ಕಂಡು ಬಂದುದೇ ಹೌದಾದಲ್ಲಿ ಅದರಲ್ಲಿ ನಮಗೆ ನಿಮ್ಮದೇ ಸೌಂದರ್ಯ ಕಂಡುಬರುತ್ತದೆ. ಏಕೆಂದರೆ ನಮ್ಮ ಕಣ್ಣುಗಳಲ್ಲಿ ನಿಮ್ಮ ರೂಪವೇ ತುಂಬಿ ಹೋಗಿದೆ. ಆದರೆ, ನಮ್ಮ ರಾಜ್ಯದಲ್ಲಿ 'ವಿಶೇಷಜ್ಞ'ರೆಂಬ ಜಾತಿಯ ಜನರಿದ್ದಾರೆ. ಆ ಜಾತಿಯವರಲ್ಲಿ ಒಂದು ವಿಶೇಷ ಅಂಜನವಿದೆ. ಅದನ್ನವರು ಕಣ್ಣಿಗೆ ಹಚ್ಚಿಕೊಂಡು ಭಾರೀ ಸೂಕ್ಷ್ಮ ವಸ್ತುವನ್ನೂ ನೋಡಿಬಿಡುತ್ತಾರೆ. ನನ್ನ ವಿನಂತಿಯೆಂದರೆ 'ಮಹಾಸ್ವಾಮಿಯವರು ಭ್ರಷ್ಟಾಚಾರವನ್ನು ಹುಡುಕುವ ಕೆಲಸವನ್ನು ಆ ವಿಶೇಷಜ್ಞರಿಗೆ ವಹಿಸಿಕೊಡಿ".

ರಾಜನು 'ವಿಶೇಷಜ್ಞ' ಜಾತಿಯ ಐದು ಜನರನ್ನು ಕರೆಸಿದ ಮತ್ತು ಅವರಿಗೆ ತಿಳಿಸಿದ - "ಇಡೀ ರಾಜ್ಯದಲ್ಲಿ ಭ್ರಷ್ಟಾಚಾರ ಹಬ್ಬಿದೆ ಎಂದು ಕೇಳಿದ್ದೇನೆ. ಆದರೆ, ಅದು ಎಲ್ಲಿದೆಯೆಂದರು ತಿಳಿಯುತ್ತಿಲ್ಲ. ನೀವು ಅದನ್ನು ಪತ್ತೆ ಮಾಡಿರಿ. ಅದೆಲ್ಲಾದರೂ ಸಿಕ್ಕಿದರೆ ಹಿಡಿದು ನನ್ನ ಬಳಿ ತನ್ನಿರಿ. ಅತಿ ಹೆಚ್ಚಿದ್ದರೆ ಸ್ವಲ್ಪ ಸ್ಯಾಂಪಲ್ ತನ್ನಿರಿ".

ವಿಶೇಷಜ್ಞರು ಅದೇ ದಿನ ಹುಡುಕಲು ತೊಡಗಿದರು. ಎರಡು ತಿಂಗಳ ಮೇಲೆ ಅವರು ಮತ್ತೆ ದರ್ಬಾರಿನಲ್ಲಿ ಹಾಜರಾದರು. ರಾಜನೆಂದ - "ವಿಶೇಷಜ್ಞರೆ, ನಿಮ್ಮ ಶೋಧನೆ ಪೂರ್ತಿಯಾಯಿತೆ?"

"ಹೌದು ಸ್ವಾಮಿ"

"ಭ್ರಷ್ಟಾಚಾರ ಸಿಕ್ಕಿತೆ?"

"ಹೌದು ಸ್ವಾಮಿ, ಬಹಳಷ್ಟು ಸಿಕ್ಕಿತು"

ರಾಜನು ಕೈ ಮುಂದೆ ಮಾಡಿದ - "ಕೊಡಿ ಹೇಗಿರುತ್ತದೆ ನೋಡೋಣ". ವಿಶೇಷಜ್ಞರೆಂದರು "ಹ್ಞಾ, ಮಹಾರಾಜ, ನಾವು ಆ ಕುರಿತು ಒಂದು ಯೋಜನೆಯೊಂದನ್ನು ತಯಾರಿಸಿದ್ದೇವೆ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಸಾಧ್ಯ. ಆದರೆ ಇರುವ ವ್ಯವಸ್ಥೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಮಹಾರಾಜರೆ, ಒಂದೆಂದರೆ, ಭ್ರಷ್ಟಾಚಾರಕ್ಕೆ ಮೂಲವಾದ ಸಂದರ್ಭಗಳನ್ನು ನಾಶಪಡಿಸಬೇಕು. ಉದಾಹರಣೆಗೆ - ಗುತ್ತಿಗೆಯಿದೆಯೆಂದರೆ ಗುತ್ತಿಗೆದಾರರೂ (ಕಂಟ್ರಾಕ್ಟರ್ಸ್) ಇರುತ್ತಾರೆ. ಗುತ್ತಿಗೆದಾರರೆಂದರೆ ಅಧಿಕಾರಿಗಳಿಗೆ ಲಂಚವೂ ಇದೆ. ಗುತ್ತಿಗೆ ಇಲ್ಲವಾದರೆ ಅಧಿಕಾರಿಗಳಿ ಲಂಚವೂ ಇಲ್ಲ. ಇಂತಹುದೇ ಹಲವಾರು ವಿಷಯಗಳಿವೆ. ಯಾಕಾಗಿ ಮನುಷ್ಯ ಲಂಚ ತೆಗೆದುಕೊಳ್ಳುತ್ತಾನೆ ಎಂಬುದೂ ವಿಚಾರ ಮಾಡಬೇಕಾದ ವಿಚಾರವೆ"

ರಾಜನೆಂದ "ಸರಿ, ನೀವು ನಿಮ್ಮ ಇಡೀ ಯೋಜನೆಯನ್ನು ಕೊಟ್ಟು ಹೋಗಿರಿ. ನಾವು ಮತ್ತು ಆಸ್ಥಾನಿಕರು ಈ ಬಗ್ಗೆ ವಿಚಾರ ಮಾಡುತ್ತೇವೆ". ವಿಶೇಷಜ್ಞರು ಹೊರಟು ಹೋದರು.

ರಾಜ ಮತ್ತು ಆಸ್ಥಾನದಲ್ಲಿದ್ದ ಪಂಡಿತರು ಭ್ರಷ್ಟಾಚಾರ ನಿರ್ಮೂಲನ ಯೋಜನೆಯನ್ನು ಓದಿದರು. ಅದರ ಬಗೆಗೆ ವಿಮರ್ಶೆ ನಡೆಸಿದರು.

ವಿಚಾರ ಮಾಡತ್ತಲೇ ದಿನಗಳು ಕಳೆದವು. ರಾಜನ ಆರೋಗ್ಯ ಹದಗೆಟ್ಟಿತು.

ಒಂದು ದಿನ ಒಬ್ಬ ಆಸ್ಥಾನಿಕನೆಂದ - "ಮಹಾರಾಜರೆ, ಚಿಂತೆಯಿಂದಾಗಿ ನಿಮ್ಮ ಆರೋಗ್ಯವು ಕೆಡುತ್ತಿದೆ. ಆ ವಿಶೇಷಜ್ಞರು ನಿಮ್ಮನ್ನು ಸಂಕಟಕ್ಕೆ ಗುರಿ ಮಾಡಿದರು".

ಆಗ ಇನ್ನೊಬ್ಬನೆಂದ - 'ಮಹಾರಾಜರ ನಿದ್ರೆಗೆ ಭಂಗ ತಂದ ಇಂತಹ ರಿಪೋರ್ಟನ್ನು ಬೆಂಕಿಗೆ ಹಾಕಬೇಕು".

ರಾಜನೆಂದ - "ಆದರೇನು ಮಾಡಲಿ. ನೀವೂ ಭ್ರಷ್ಟಾಚಾರ ನಿರ್ಮೂಲ ಯೋಜನೆಯನ್ನು ಅಧ್ಯಯನ ಮಾಡಿದ್ದೀರಿ. ನಿಮ್ಮ ಅಭಿಪ್ರಾಯವೇನು? ಅದನ್ನು ಜಾರಿಗೆ ತರೋಣವೇ? ಆಸ್ಥಾನಿಕರೆಂದರು - 'ಮಹಾರಾಜರೇ, ಅದೆಂಥ ಯೋಜನೆ? ಅದೊಂದು ಗಂಡಾಂತರ. ಅದಕ್ಕೆ ಎಷ್ಟೆಲ್ಲಾ ಬದಲಾವಣೆ ಮಾಡಬೇಕಾಗುತ್ತದೆ. ಅಷ್ಟೊಂದು ಸಮಸ್ಯೆಯಿಂದ ಇಡೀ ವ್ಯವಸ್ಥೆಯೇ ತಲೆ ಕೆಳಗಾಗುತ್ತದೆ. ಯಾವುದು ಹೇಗೆ ನಡೆದುಕೊಂಡು ಬಂದಿದೆಯೋ ಅದನ್ನು ಬದಲು ಮಾಡುವುದರಿಂದ ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಯಾವುದೇ ಬದಲಾವಣೆ ಇಲ್ಲದೆ ಭ್ರಷ್ಟಾಚಾರ ನಿರ್ಮೂಲನವಾಗುವ ಒಂದು ಉಪಾಯ ನಮಗೆಬೇಕಾಗಿದೆ".

ರಾಜನೆಂದ - "ನಾನು ಬಯಸುವುದೂ ಅದನ್ನೇ. ಆದರೆ ಅದು ಆಗುವುದು ಹೇಗೆ? ನಮ್ಮ ಪ್ರಪಿತಾಮಹನಿಗಾದರೋ ಜಾದೂವಿದ್ಯೆ ಗೊತ್ತಿತ್ತು. ನಮಗೆ ಅದೂ ಗೊತ್ತಿಲ್ಲ. ನೀವೇ ಒಂದು ಉಪಾಯ ಹುಡುಕಿ ಹೇಳಿ".

ಒಂದು ದಿನ ಆಸ್ಥಾನಿಕರು ರಾಜನೆದುರುಗಡೆ ಒಬ್ಬ ಸಾಧುವನ್ನು ಕರೆತಂದು, ಹಿಗೆಂದರು - "ಮಹಾಸ್ವಾಮಿ, ಇವರು ಒಂದು ಕಣಿವೆಯಲ್ಲಿ ತಪ್ಪಸ್ಸು ಮಾಡುತ್ತಿದ್ದರು. ಈ ಮಹಾಸಾಧಕರನ್ನು ನಾವು ಅಲ್ಲಿಂದ ಕರೆತಂದಿದ್ದೇವೆ. ಇವರು ಸದಾಚಾರದ ತಾಯಿತ ಮಾಡಿದ್ದಾರೆ. ಮಂತ್ರಗಳಿಂದ ಸಿದ್ದವಾದುದು ಮತ್ತು ಇದನ್ನು ಧರಿಸಿದರೆ ಮನುಷ್ಯ ಸಂಪೂರ್ಣ ಸದಾಚಾರಿಯಾಗುತ್ತಾನೆ.

ಸಾಧುವು ತನ್ನ ಜೋಳಿಗೆಯಿಂದ ಒಂದು ತಾಯಿತವನ್ನು ತೆಗೆದು ರಾಜನಿಗೆ ಕೊಟ್ಟ. ರಾಜನು ಅದನ್ನು ನೋಡಿದ ಮತ್ತೆ ಹೇಳಿದ - "ಎಲೈ ಸಾಧುವೇ,ಈ ತಾಯಿತದ ವಿಚಾರ ನನಗೆ ಸವಿಸ್ತಾರವಾಗಿ ತಿಳಿಸು. ಇದರಿಂದ ಮನುಷ್ಯ ಹೇಗೆ ಸದಾಚಾರಿಯಾಗುತ್ತಾನೆ?"

ಸಾಧುವು ತಿಳಿಯಪಡಿಸಿದ - "ಮಹಾರಾಜರೆ, ಭ್ರಷ್ಟಾಚಾರ ಮತ್ತು ಸದಾಚಾರವು ಮನುಷ್ಯನ ಆತ್ಮದಲ್ಲಿರುತ್ತದೆ. ಹೊರಗಿರುವುದಿಲ್ಲ. ವಿಧಾತನು ಮನುಷ್ಯನನ್ನು ಸೃಷ್ಟಿ ಮಾಡುವಾಗ ಕೆಲವರ ಆತ್ಮದಲ್ಲಿ ಪ್ರಾಮಾಣಿಕತೆಯ ಯಂತ್ರವನ್ನೂ, ಕೆಲವರ ಆತ್ಮದಲ್ಲಿ ಅಪ್ರಾಮಾಣಿಕತೆಯ ಯಂತ್ರವನ್ನೂ ಫಿಟ್ ಮಾಡಿರುತ್ತಾನೆ".

"ಆ ಯಂತ್ರದಿಂದ ಪ್ರಾಮಾಣಿಕತೆಯ ಅಥವಾ ಅಪ್ರಾಮಾಣಿಕತೆಯ ಸ್ವರವು ಮೊಳಗುತ್ತದೆ. ಅದನ್ನೇ 'ಆತ್ಮದ ಕರೆ' ಎನ್ನುತ್ತಾರೆ. ಆತ್ಮದ ಕರೆಗನುಸಾರವಾಗಿನೇ ಮನುಷ್ಯನು ಕೆಲಸ ಮಾಡುತ್ತಿರುತ್ತಾನೆ. ಯಾರ ಆತ್ಮದಿಂದ ಅಪ್ರಾಮಾಣಿಕತೆಯ ಸ್ವರವು ಬರುತ್ತಿದೆಯೋ ಅದನ್ನು ಹತ್ತಿಕ್ಕಿ ಪ್ರಾಮಾಣಿಕತೆಯ ಸ್ವರನ್ನು ಹೇಗೆ ಹೊರಡಿಸುವುದು ಎಂಬುದೇ ನಮ್ಮ ಮುಂದಿರುವ ಸವಾಲು. ನಾನು ಹಲವಾರು ವರ್ಷಗಳಿಂದ ಈ ಕುರಿತು ತಪಸ್ಸು ಮಾಡಿದ್ದೇನೆ. ಅದರ ಫಲವಾಗಿ ನಾನು ಈ ಸದಾಚಾರದ ತಾಯಿತವನ್ನು ತಯಾರು ಮಾಡಿದ್ದೇನೆ. ಇದನ್ನು ಯಾರ ತೋಳಿಗೆ ಕಟ್ಟುತ್ತೇವೋ ಆತ ಸದಾಚಾರಿಯಾಗುತ್ತಾನೆ. ಇದನ್ನು ನಾನು ಒಂದು ನಾಯಿಯ ಮೇಲೆ ಪ್ರಯೋಗಿಸಿ ನೋಡಿದ್ದೇನೆ. ಈ ತಾಯಿತವನ್ನು ಕತ್ತಿಗೆ ಕಟ್ಟುವುದರಿಂದ ನಾಯಿ ರೊಟ್ಟಿ ತುಂಡನ್ನೂ ಕದ್ದು ತಿನ್ನುವುದಿಲ್ಲ. ವಿಷಯ ಏನೆಂದರೆ, ಈ ತಾಯಿತದಿಂದ ಸದಾಚಾರದ ಸ್ವರಗಳುಹೊರಡುತ್ತವೆ. ಯಾರದೇ ಆತ್ಮವು ಅಪ್ರಾಮಾಣಿಕತೆಯ ಸ್ವರವನ್ನು ಮೊಳಗಿಸುತ್ತಿದ್ದರೆ ಈ ತಾಯಿತದ ಶಕ್ತಿಯು ಆ ಯಂತ್ರದ ಕುತ್ತಿಗೆಯನ್ನೊತ್ತಿ ಬಿಡುತ್ತದೆ. ಆಗ ಮನುಷ್ಯನಿಗೆ ತಾಯಿತದ ಪ್ರಮಾಣಿಕತೆಯ ಸ್ವರವು ಕೇಳಿಬರುತ್ತದೆ. ಆತ ಈ ಸ್ವರವನ್ನು ಆತ್ಮದ ಕರೆ ಎಂದು ತಿಳಿದು ಸದಾಚಾರದೆಡೆಗೆ ಪ್ರೇರಿತನಾಗುತ್ತಾನೆ. ಇದೇ ಈ ತಾಯಿತದ ಮಹಿಮೆ ಮಹಾರಾಜರೆ"

ಆಸ್ಥಾನದಲ್ಲಿ ಕೋಲಾಹಲವೆದ್ದಿತು. ಒಬ್ಬೊಬ್ಬರೂ ಎದ್ದು ಎದ್ದು ತಾಯಿತವನ್ನು ನೋಡತೊಡಗಿದರು.

ರಾಜನು ಸಂತುಷ್ಟನಾಗಿ ಹೇಳಿದ - "ನನ್ನ ರಾಜ್ಯದಲ್ಲಿ ಇಂತಹ ಚಮಾತ್ಕಾರ ಮಾಡುವ ಸಾಧುಗಳು ಇದ್ದಾರೆಂದು ನನಗೆ ಗೊತ್ತೇ ಇರಲಿಲ್ಲ. ಮಹಾತ್ಮರೆ ನಾವು ನಿಮಗೆ ಅಭಾರಿಯಾಗಿದ್ದೇವೆ. ನೀವು ನಮ್ಮ ಸಂಕಟವನ್ನು ದೂರ ಮಾಡಿದಿರಿ. ಭ್ರಷ್ಟಾಚಾರದಿಂದ ನಾವು ಬಹಳ ಚಿಂತೆಯಲ್ಲಿದ್ದೆವು. ಆದರೆ ನಮಗೆ ಲಕ್ಷಗಟ್ಟಲೆ ಅಲ್ಲ,ಸರ್ವವ್ಯಾಪಿ ಕೋಟಿಗಟ್ಟಲೆ ತಾಯಿತಗಳು ಬೇಕು. ನಾವು ನಮ್ಮ ರಾಜ್ಯದ ವತಿಯಿಂದ ತಾಯಿತವನ್ನು ತಯಾರಿಸುವ ಒಂದು ಕಾರ್ಖಾನೆಯನ್ನು ತೆರೆಯುತ್ತೇವೆ. ನೀವು ಅದರ ಜನರಲ್ ಮ್ಯಾನೇಜರ್ ಆಗಿರಿ ಹಾಗೂ ನಿಮ್ಮ ಮೇಲುಸ್ತುವಾರಿಯಲ್ಲಿ ಒಳ್ಳೊಳ್ಳೆಯ ತಾಯಿತಗಳು ತಯಾರಾಗಿಲಿ"

ಒಬ್ಬ ಮಂತ್ರಿಯೆಂದ - "ಮಹಾರಾಜರೆ, ಸರಕಾರ ಯಾಕೆ ಈ ಉಸಾಬರಿಯನ್ನು ಹೊತ್ತುಕೊಳ್ಳಬೇಕು? ತನ್ನ ವಿನಂತಿಯೆಂದರೆ ಈ ಸಾಧು ಮಹಾತ್ಮರಿಗೇಇದರ ಗುತ್ತಿಗೆ ಕೊಡೋಣ. ಅವರು ತಮ್ಮ ಮಂಡಳಿಯಿಂದ ತಾಯಿತ ತಯಾರಿಸಿ ನಮಗೆ ಸಪ್ಲಾಯ್ ಮಾಡಲಿ"

ರಾಜನಿಗೆ ಈ ಸಲಹೆ ಇಷ್ಟವಾಯಿತು.

ಪುಟ 12'ಕ್ಕೆ


ಲೇಖಕರ ಪರಿಚಯ

ಪರಸಾಯಿಯವರು ಪರಂಪರಾಗತ ರಚನಾಶೈಲಿಯನ್ನು ನಿರಂತರವಾಗಿ ಮುರಿಯುತ್ತಾ ಬಂದವರು. ಅವರದ್ದು ಅವರದ್ದೇ ಆದ ಶೈಲಿ. ಆ ಶೈಲಿಗೆ ಹೋಲಿಸಬಹುದಾದ ಇನ್ನೊಂದು ಶೈಲಿ ಹಿಂದಿಯಲ್ಲಿಲ್ಲ. ಪ್ರಕಾರಗಳಲ್ಲಿ ಹೇಳುವುದಾದರೆ ಸಣ್ಣ ಕತೆ. ಲಲಿತ ನಿಬಂಧ, ಕಾದಂಬರಿ, ರೇಖಾಚಿತ್ರ, ಸಂದರ್ಶನ, ವಿಚಾರ ಪ್ರಧಾನ, ವಿಶ್ಲೇಷಣಾತ್ಮಕ ಪ್ರಬಂಧ - ಇವು ಮುಖ್ಯವಾಗಿ ಅವರ ಕ್ಷೇತ್ರಗಳು. 'ದಡದ ಹುಟುಕಾಟ', 'ಜ್ವಾಲೆ ಮತ್ತು ನೀರು', 'ರಾಣಿ ನಾಗಫಣಿಯ ಕತೆ' - ಉದಾರಿಸಬಹುದಾದ ಅವರ ಕೆಲವು ಕಾದಂಬರಿಗಳು.

ಪರಸಾಯಿಯವರ ಕತೆಗಳಲ್ಲಿ ಒಂದು ವಿಶೇಷ ಬಗೆಯ ನಾವೀನ್ಯತೆಯಿದೆ. ಅವರು ದೈನಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ವಿಷಯಗಳಿಗೇನೆ ಹೆಚ್ಚು ಮಹತ್ವನ್ನು ಕೊಡುತ್ತಿದ್ದರು. ಅವರ ವ್ಯಂಗ್ಯದ ಮೊನಚು ಪ್ರಾಯಃ ಭಾರತೀಯ ಸಾಹಿತ್ಯದಲ್ಲಿ ಮತ್ತೆಲ್ಲೂ ಕಾಣಸಿಗದು. ಭಾರತೀಯ ಅಲಂಕಾರ ಶಾಸ್ತ್ರದಲ್ಲಿ 'ವಕ್ರೋಕ್ತಿ' ಯ ಬಗೆಗೆ ವಿಶ್ಲೇಷಣೆಯಿದೆ. ಆಧುನಿಕ ಯುಗದಲ್ಲಿ ಅದಕ್ಕೆ ರಚನಾತ್ಮಕವಾದ ಭಾಷ್ಯ ಬರೆದವರೆಂದರೆ ಹರಿಶಂಕರ ಪರಸಾಯಿಯವರೊಬ್ಬರೇ ಎಂದೆನಿಸುತ್ತದೆ.

ಪರಸಾಯಿಯವರ ಪ್ರತಿಯೊಂದು ಕೃತಿಗಳಲ್ಲಿಯೂ ಸಮಕಾಲೀನ ರಾಜಕೀಯ ಘಟನೆಗಳು ಒಂದಲ್ಲೊಂದು ಬಗೆಯಲ್ಲಿ ಕಾಣಸಿಕೊಳ್ಳುತ್ತದೆ. ಆದರೆ, ಅವರ ಕೃತಿಗಳನ್ನು ರಾಜಕೀಯ ದಸ್ತಾವೇಜುಗಳೆಂದು ಭಾವಿಸಿದಲ್ಲಿ ಅವರನ್ನು ಸೆಕ್ಯುಲರ್ ರಾಜಕೀಯದ ಮಹೋನ್ನತ ದಾರ್ಶನಿಕನೆನ್ನುವುದು ಉಚಿತ. ಅವರ ಕೃತಿಗಳು ಅತ್ಯಂತ ಸುಂದರ ಕಲಾತ್ಮಕ ಅಭಿವ್ಯಕ್ತಿಗಳಾಗಿವೆ. ಮೂಢನಂಬಿಕೆ ಮತ್ತು ಅಂಧರೂಢಿಗಳು ಖಂಡಿತವಾಗಿಯೂ ಅವರ ತೀವ್ರ ಆಕ್ರಮಣಕ್ಕೆ ಗುರಿಯಾಗಿವೆ.

ಅಮೆರಿಕದ ಕಾರ್ಮಿಕರ ಭವಿಷ್ಯ ನಿರ್ಧರಿಸುವ ಹೋರಾಟವೊಂದು ಕಳೆದ ಕೆಲವು ತಿಂಗಳುಗಳಿಂದ ನಡೆಯುತ್ತಾ ಬಂದಿದ್ದು ನಿರ್ಣಾಯಕ ಹಂತ ತಲುಪಿದೆ. ಈ ವರ್ಷದ ಮೇ ನಿಂದ ನಡೆಯುತ್ತಿರುವ ಪಶ್ಚಿಮ ಕರಾವಳಿ ಬಂದರು ಕಾರ್ಮಿಕರ ಹೋರಾಟ ಆ ಹತ್ತು ಸಾವಿರ ಕಾರ್ಮಿಕರ ಹಕ್ಕು-ಸವಲತ್ತುಗಳಿಗೆ ಮೀರಿದ ಪ್ರಶ್ನೆ. ಕಾರ್ಮಿಕರ ಹೋರಾಟದ ವಿರುದ್ಧ ಅಮೆರಿಕದಲ್ಲಿ ಬಳಸಬಹುದಾದ ಅತ್ಯಂತ ಪ್ರಬಲ ಬ್ರಹ್ಮಾಸ್ತ್ರವಾದ ಟಾಫ್ಟ್-ಹಾರ್ಟ್‌ಲೀ ಕಾನೂನನ್ನು ಅಧ್ಯಕ್ಷ ಬುಶ್ ಬಳಸಿದ್ದರಿಂದ ಈ ಮಹತ್ವ ಬಂದಿದೆ. ಬಂದರು ಕಾರ್ಮಿಕರು ಹೋರಾಟದಲ್ಲಿ ಗೆಲ್ಲುತ್ತಾರೋ, ಸೋಲುತ್ತಾರೋ ಎನ್ನುವುದರ ಮೇಲೆ ಅಮೆರಿಕದ ಕಾರ್ಮಿಕರ ಭವಿಷ್ಯ ನಿಂತಿದೆ. ಈ ನಿರ್ಣಾಯಕ ಹೋರಾಟದ ಹಿನ್ನೆಲೆ, ಸ್ವರೂಪ, ಪರಿಣಾಮಗಳ ಮೇಲೆ ಬೆಳಕು ಚೆಲ್ಲುವ ಲೇಖನ.



ಅಮೆರಿಕದ ಪಶ್ಚಿಮ ಕರಾವಳಿ ಬಂದರು ಕಾರ್ಮಿಕರ ಹೋರಾಟ

ಅಮೆರಿಕದ ಕಾರ್ಮಿಕರ ಭವಿಷ್ಯ ನಿರ್ಧರಿಸುವ ಹೋರಾಟ ಆರಂಭವಾಗಿದೆ

"ನಮ್ಮ ಬಂದರುಗಳಿಗೀಗ ಹೊಸ ಮಾಲಕ ಬಂದಿದ್ದಾನೆ. ಅವನ ಹೆಸರು ಜಾರ್ಜ್ ಬುಶ್ ಅಂತ" ಹೀಗಂತ ಉದ್ಗಾರ ತೆಗೆದದ್ದು ಅಮೆರಿಕದ ಪಶ್ಚಿಮ ಕರಾವಳಿ ಬಂದರು ಕಾರ್ಮಿಕರ ಯೂನಿಯನ್‌ನ ಸಾನ್‌ಫ್ರಾನ್ಸಿಸ್ಕೋ ಘಟಕದ ಅಧ್ಯಕ್ಷ. ಯಾಕೆ? ಬಂದರು ಕಾರ್ಮಿಕರ ಮೂರುವರ್ಷಗಳ ಒಪ್ಪಂದ ಜೂನ್ 1 ಕ್ಕೆ ಕೊನೆಗೊಂಡಿತ್ತು. ಮೇ ನಿಂದ ಹೊಸ ಒಪ್ಪಂದದ ಬಗ್ಗೆ ಮಾತುಕತೆ ನಡೆಯುತ್ತಿದೆ. ಮೊದಲಿನಿಂದಲೇ ಕಳೆದ ಸೆಪ್ಟೆಂಬರ್ 11 ರಿಂದ ಆರಂಭವಾಗಿರುವ 'ಭಯೋತ್ಪಾದನೆ ಮೇಲೆ ಯುದ್ಧ'ದ ವಾತಾವರಣದ ದುರ್ಬಳಕೆ ಮಾಡಿ, ತಮ್ಮ ಬೇಳೆ ಬೇಯಿಸಿಕೊಳ್ಳಲು ಬಂದರು ಮಾಲಕರು ತೀವ್ರ ಪ್ರಯತ್ನ ನಡೆಸಿದ್ದಾರೆ. ಅವರು ಆಕ್ರಮಕ 'ಮೂಡ್' ನಲ್ಲಿದ್ದಾರೆ. ಬಂದರು ಕಾರ್ಮಿಕರು ದಶಕಗಳ ಹೋರಾಟದಿಂದ ಗೆದ್ದುಕೊಂಡ ಎಲ್ಲಾ ಸವಲತ್ತುಗಳನ್ನು ವಾಪಸು ಕಿತ್ತುಕೊಳ್ಳಲು ಹುನ್ನಾರ ನಡೆಸಿದ್ದಾರೆ. ಕಾರ್ಮಿಕರನ್ನು ತೀವ್ರ ಕಾರ್ಯಾಚರಣೆಗೆ ಪ್ರಚೋದಿಸುತ್ತಿದ್ದಾರೆ. ಅವರು ಒಪ್ಪಲಾರದಂಥ ಪ್ರಸ್ತಾವಗಳನ್ನು ಮಂಡಿಸುತ್ತಿದ್ದಾರೆ. ಕೊನೆಗೂ ಕಾರ್ಮಿಕರ ತಾಳ್ಮೆ ಕೆಡಿಸಲಾಗದೆ, ತಾವೇ ತಾಳ್ಮೆಗೆಟ್ಟು ಸೆಪ್ಟೆಂಬರ್ 27 ರಂದು 'ಲಾಕೌಟ್' ಘೋಷಿಸಿದರು. 10 ದಿನಗಳೊಳಗೆ 'ಲಾಕೌಟ್' ತೆಗೆಯಲು ಇತರ ಮಾಲಕರಿಂದ ಒಂದೆಡೆ ಒತ್ತಡ ಬಂದರೆ, ಇನ್ನೊಂದೆಡೆ ಸರ್ಕಾರ ಮಾಲಕರ ಪರ ಈ ಕಾರ್ಮಿಕ ವಿವಾದದಲ್ಲಿ ಮಧ್ಯ ಪ್ರವೇಶಿಸುವಂತೆ ತೀವ್ರ ಒತ್ತಡ ಹೇರುತ್ತಿದ್ದರು. ಕೊನೆಗೂ ಅವರು ಯಶಸ್ವಿಯಾಗಿದ್ದರು. ಮಾಲಕರ ಮುಖಭಂಗವಾಗದಂತೆ ಅಧ್ಯಕ್ಷ ಬುಶ್ ಟಾಫ್ಟ್-ಹಾರ್ಟ್‌ಲೀ ಕಾನೂನು ಬಳಸಿ 'ಲಾಕೌಟ್' ಕೊನೆಗೊಳಿಸಿದ್ದ. ಇದು ಅಮೆರಿಕದ ಸರ್ಕಾರ ಕಾನೂನು ಪ್ರಕಾರ ಕಾರ್ಮಿಕರ ಹೋರಾಟದ ವಿರುದ್ಧ ಬಳಸಬಹುದಾದ ಬ್ರಹ್ಮಾಸ್ತ್ರಗಳಲ್ಲಿ ಅತ್ಯಂತ ಪ್ರಬಲವಾದದ್ದು. (ವಿವರಗಳಿಗೆ 'ಕಾರ್ಮಿಕ ವಿರುದ್ಧ ಬ್ರಹ್ಮಾಸ್ತ್ರ'ಗಳು ಮತ್ತು 'ಟಾಫ್ಟ್-ಹಾರ್ಟ್‌ಲೀ ಬ್ರಹ್ಮಾಸ್ತ್ರ ನೋಡಿ). ಬಂದರು ಕಾರ್ಮಿಕ ನಾಯಕನ ಉದ್ಗಾರಕ್ಕೆ ಕಾರಣವೂ ಇದೇ. ಬುಶ್ ಆಡಳಿತ ಮಾಲಕರ ಪರವಾಗಿದೆ ಮಾತ್ರವಲ್ಲ ತಾನೇ ಮಾಲಕ ಎಂಬಂತೆ ವರ್ತಿಸುತ್ತಿದೆ ಎಂಬ ವ್ಯಂಗ್ಯ ಇದೆ ಆ ಮಾತಲ್ಲಿ.

'ಟಾಫ್ಟ್-ಹಾರ್ಟ್‌ಲೀ ಬ್ರಹ್ಮಾಸ್ತ್ರಕ್ಕೆ ಸೊಪ್ಪು ಹಾಕುವುದಿಲ್ಲ'

ಅಕ್ಟೋಬರ್ 8 ರಂದು ಅಧ್ಯಕ್ಷ ಬುಶ್ ತರಾತುರಿಯಲ್ಲಿ ಟಾಫ್ಟ್-ಹಾರ್ಟ್‌ಲೀ ಬ್ರಹ್ಮಾಸ್ತ್ರವನ್ನು ಬಂದರು ಕಾರ್ಮಿಕರ ಮೇಲೆ ಬಳಸಿದ್ದಾರೆ. ಆದರೆ ನಾವು ಇದಕ್ಕೆ ಸೊಪ್ಪುಹಾಕುವುದಿಲ್ಲ. ನ್ಯಾಯಯುತವಲ್ಲದ ಯಾವುದೇ ಪ್ರಸ್ತಾವಕ್ಕೆ ತಲೆ ಬಾಗುವುದಿಲ್ಲ ಎಂದು ಕಾರ್ಮಿಕರು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಕಾರಣವೂ ಇದೆ. ಹಿಂದೆ ಎರಡು ಬಾರಿ ಬಂದರು ಕಾರ್ಮಿಕರ ಮೇಲೆ ಈ ಬ್ರಹ್ಮಾಸ್ತ್ರ ಬಳಸಲಾಗಿದೆ. ಒಂದು ಬಾರಿ 1948 ರಲ್ಲಿ ಮತ್ತು ಇನ್ನೊಂದು ಬಾರಿ 1970 ರಲ್ಲಿ. ಎರಡೂಬಾರಿ ಬಂದರು ಕಾರ್ಮಿಕರೇ ಗೆದ್ದು, ಉತ್ತಮ ಹಕ್ಕು ಸವಲತ್ತು ಗಳಿಸುವ ಒಪ್ಪಂದ ಮಾಡಿಕೊಂಡಿದ್ದರು. ಈ ಎರಡೂ ಬಾರಿ 80 ದಿನಗಳ ನಂತರದ ಅವಧಿಯಲ್ಲಿ ಕಾರ್ಮಿಕರು ಹೋರಾಟ ಮುಂದುವರೆಸಿ ತಮ್ಮ ಹಕ್ಕು ಗೆದ್ದುಕೊಂಡಿದ್ದರು. ದಮನಕ್ಕೆ ತಲೆ ಬಾಗದಿರುವ ಫಲ, ಮತ್ತು ಪ್ರಚಂಡ ಐಕ್ಯತೆ ಇರುವವರೆಗೆ ಗೆಲುವು ತಮ್ಮದೇ ಎಂದು ಬಂದರು ಕಾರ್ಮಿಕರ ಚಳುವಳಿಯ ನಾಯಕರು ಸಾರಿದ್ದಾರೆ. ಅವರಿಗೆ ಹಲವು ಪ್ರಮುಖ ಯೂನಿಯನ್ನಗಳಲ್ಲದೆ AFL-CIO(ಅಮೆರಿಕದ ಟ್ರೇಡ್ ಯೂನಿಯನ್ ರಾಷ್ಟ್ರೀಯ ಕೇಂದ್ರ) ಸಹ ಪ್ರಚಂಡ ಬೆಂಬಲ ವ್ಯಕ್ತಪಡಿಸಿದೆ. ಸೆಪ್ಟೆಂಬರ್ 27 ರಿಂದ ಜಾರಿಯಲ್ಲಿರುವ ಎರಡು ವಾರಗಳ 'ಲಾಕೌಟ್' ಅವಧಿಯಲ್ಲೇ, ಪ್ರಚಂಡ ಬೆಂಬಲ ವ್ಯಕ್ತವಾಗಿದೆ. ಅಕ್ಟೋಬರ್ 4 ರಂದು ಸಾಹಾರ್ದತಾ ಕಾರ್ಯಾಚರಣೆಯ ಭಾಗವಾಗಿ ಹಲವು ಕಡೆ ಬೃಹತ್ ರ್‍ಯಾಲಿಗಳಾಗಿವೆ. ಮಾಲಕರ ಲಾಕೌಟ್‌ಗೆ ಬೆದರದವರು ಸರ್ಕಾರದ 'ಲಾಕ್ ಇನ್' ಗೆ ಹೆದರುವುದಿಲ್ಲ ಎಂದು ಹೇಳಿದ್ದಾರೆ ಬಂದರು ಕಾರ್ಮಿಕರ ಯೂನಿಯನ್ ಅಂತರ‍್ರಾಷ್ಟ್ರೀಯ ಯೂನಿಯನ್. ಅವರ ಯೂನಿಯನ್ ಹೆಸರು ILWU(International Longshore and workUnion) ಹತ್ತು ಸಾವಿರ ಕಾರ್ಮಿಕರ ಸದಸ್ಯತ್ವ ಇರುವ ILWU ಅತ್ಯಂತ ಪ್ರಬಲ ಯೂನಿಯನ್. ಅಮೆರಿಕದ ಆಮದು-ರಫ್ತು ಅಲ್ಲದೆ, ಹಲವು ದೇಶಗಳ ಆಮದು-ರಫ್ತು ಈ ಯೂನಿಯನ್ ಸದಸ್ಯರು ಕೆಲಸ ಮಾಡುವ ಪಶ್ಚಿಮ ಕರಾವಳಿಯ 79 ಬಂದರುಗಳಲ್ಲಿ ಹಾದು ಹೋಗುತ್ತದೆ. ಪ್ರತಿದಿನದ ವಹಿವಾಟು ಒಂದು ಶತಕೋಟಿ ಡಾಲರು ಎನ್ನಲಾಗಿದೆ.



ಉದ್ಯೋಗ ಭದ್ರತೆ, ವೈದ್ಯಕೀಯ ಸೌಲಭ್ಯ, ಪೆನ್‌ಶನ್ ಸೌಲಭ್ಯ, ಕೆಲಸದ ಅವಧಿ - ಇವೆಲ್ಲವನ್ನೂ ಮೊಟಕು ಮಾಡುವ ಹವಣಿಕೆಯಿಲ್ಲದೆ ಬಂದರು ಮಾಲಿಕರ ಸಂಘ PMA(Pacific Maritime Association). ಇದಲ್ಲದೆ ಹೊಸ ತಂತ್ರಜ್ಞಾನ ಬಳಸಲು ಬೇಕಾಗುವ ಕಾರ್ಮಿಕರು ಯೂನಿಯನ್‌ಗೆ ಸೇರಬಾರದು ಎನ್ನುವ ಶರತ್ತು ಹಾಕುತ್ತಿದೆ.

ಅಮೆರಿಕದಲ್ಲಿ ಕಾರ್ಮಿಕರಿಗೆ ಮುಷ್ಕರದ ಹಕ್ಕು ಇದೆಯೇ?

ಇಡೀ ಅಮೆರಿಕದ ಕಾರ್ಮಿಕ ವರ್ಗ ಮತ್ತು ಜನತೆ ILWU ನತ್ತ ನೋಡುತ್ತಿದ್ದಾರೆ. ದೇಶದ ಕಾರ್ಮಿಕರಲ್ಲೇ ಉತ್ತಮ ವೇತನ-ಸವಲತ್ತು-ಹಕ್ಕು ಪಡೆದಿರುವವರು ಇವರು. ಅದಲ್ಲದೆ ದೇಶದ ಅತ್ಯಂತ ಸುಸಂಘಟಿತ ಪ್ರಜ್ಞಾವಂತ ಯೂನಿಯನ್ ಸಹ. ಅದಕ್ಕಾಗಿಯೇ ಅಧ್ಯಕ್ಷ ಬುಶ್ ಈ ಬ್ರಹ್ಮಾಸ್ತ್ರ ಬಳಸಿರುವುದು. ಹೇಗಾದರೂ ಮಾಡಿ ಈ ಬಾರಿ ILWU ನ್ನು ಸೋಲಿಸಿ ಇಡೀ ಅಮೆರಿಕ ಕಾರ್ಮಿಕ ವರ್ಗಕ್ಕೆ ನಡುಕ ತರಬೇಕು ಎಂದು ಬುಶ್ ಮತ್ತು ಮಾಲಕರ ಹವಣಿಕೆ. ಮಾತುಕತೆಗಳ ಆರಂಭದಿಂದಲೂ ಸರ್ಕಾರ ಮಾಲಕರ ಪರವಾಗಿ ಮಸಲತ್ತು ನಡೆಸುತ್ತಿದೆ. ಮಾತುಕತೆಗಳಲ್ಲಿ ಮಿಲಿಟರಿ ಗೂಢಚಾರ ಅಧಿಕಾರಿಗಳು, ಆಂತರಿಕ ಭದ್ರತಾ ಅಧಿಕಾರಿಗಳು ಬಂದು ಕೂಡುತ್ತಿದ್ದಾರಂತೆ. ಕಾರ್ಮಿಕರು 'ರಾಷ್ಟ್ರೀಯ ಭದ್ರತೆ'ಗೆ ಅಪಾಯ ಒಡ್ಡುವ 'ಭಯೋತ್ಪಾದಕರು' ಎಂಬಂತೆ ಸರ್ಕಾರ ವರ್ತಿಸುತ್ತಿತ್ತು. ಆದ್ದರಿಂದ ಇಡೀ ಅಮೆರಿಕದ ಕಾರ್ಮಿಕವರ್ಗ ಬಂದರು ಕಾರ್ಮಿಕರ ಬೆಂಬಲಕ್ಕೆ ನಿಲ್ಲಲು ಸಜ್ಜಾಗಿದೆ.

ಬಂದರು ಕಾರ್ಮಿಕರ ಸೋಲು ಎಲ್ಲರಿಗೂ ಅಪಾಯಕರ

ಬಂದರು ಕಾರ್ಮಿಕರು ಸೋತರೆ ಈ ಬ್ರಹ್ಮಾಸ್ತ್ರಗಳನ್ನು ಪದೇ ಪದೇ ಬಳಸಲಾಗುತ್ತದೆ. ಕಾರ್ಮಿಕರಿಗೆ ಮುಷ್ಕರದ ಹಕ್ಕು ಇದೆಯೇ ಎಂಬ ಸಂಶಯ ಅಮೆರಿಕದ ಕಾರ್ಮಿಕರಿಗೆ ಬಂದಿದೆ. ಕಾರ್ಮಿಕರಿಗೆ ಯಾವುದೇ ಚೌಕಾಶಿ ಮಾಡುವ ಶಕ್ತಿ ಉಳಿಯುವುದಿಲ್ಲ. ಬುಶ್ ಇರಾಕ್ ಜತೆ ಕಾರ್ಮಿಕರ ಮೇಲೂ ಈ ಮೂಲಕ ಯುದ್ಧ ಸಾರಿದ್ದಾರೆ. ಬುಶ್ ಸವಾಲು ಸ್ವೀಕರಿಸಿ, ಅವರಿಗೆ ಮರೆಯಗಾದ ಎದಿರೇಟು ಕೊಡಬೇಕು ಎಂದು ಕಾರ್ಮಿಕರು ದೃಢ ನಿರ್ಧಾರ ಕೈಗೊಂಡಿದ್ದಾರೆ. ಅವರಿಗೆ ಅಂತರ‍್ರಾಷ್ಟ್ರೀಯವಾಗಿಯೂ ಬಂದರು ಕಾರ್ಮಿಕರು ಸೌಹಾರ್ದ ಬೆಂಬಲ ಸೂಚಿಸಿದ್ದಾರೆ. ಅಮೆರಿಕದ ಪಶ್ಚಿಮ ಕರಾವಳಿಯ ಕಾರ್ಮಿಕರ ಹೋರಾಟ ಎಲ್ಲರ ಹೋರಾಟ. ಇಡೀ ಜಗತ್ತಿನ ಕಾರ್ಮಿಕರು ಅವರ ಬೆಂಬಲಕ್ಕೆ ನಿಲ್ಲಬೇಕು. ಇರಾಕ್ ಮೇಲೆ ಹಾಗೂ ಕಾರ್ಮಿಕರ ಮೇಲೆ ಬುಶ್ ಯುದ್ಧ ಸಾರದಂತೆ ಹಿಮ್ಮೆಟ್ಟಿಸಬೇಕು. ಒಂದೊಮ್ಮೆ ಯುದ್ಧ ಸಾರಿದರೆ ಸೋಲಿಸಬೇಕು.

ಹಿಂದೆ ಅಧ್ಯಕ್ಷ ರೇಗನ್ 1982 ರಲ್ಲಿ ವಿಮಾನಯಾನ ನೌಕರರ ಮುಷ್ಕರದಲ್ಲಿ, ಸೈನ್ಯದ ಸಿಬ್ಬಂದಿಯನ್ನು ಮುಷ್ಕರ ಕಾಲದಲ್ಲಿ ಕೆಲಸಕ್ಕೆ ಹಚ್ಚುವ ಮೂಲಕ ಮುಷ್ಕರವನ್ನು ಮುರಿದಿದ್ದ. ಅದು ವಿಮಾನಯಾನ ನೌಕರರ ಮುಷ್ಕರದ ಸೋಲು ಮಾತ್ರ ಆಗಿರಲಿಲ್ಲ. ಆ ಮೇಲಿನ ಎರಡು ದಶಕಗಳ ಪ್ರತಿಯೊಂದು ವ್ಯಾಪಕ ಮುಷ್ಕರಕ್ಕೆ ತಯಾರಾಗುವಾಗ ಕಾರ್ಮಿಕರಿಗೆ ಈ ಬೆದರಿಕೆ ಹಾಕಲಾಗುತ್ತಿತ್ತು. ಅಷ್ಟರ ಮಟ್ಟಿಗೆ ಕಾರ್ಮಿಕರ ಹೋರಾಟಕ್ಕೆ ಹಿನ್ನಡೆಯಾಗಿತ್ತು. ಬಂದರು ಕಾರ್ಮಿಕರ ಹೋರಾಟದ ವಿರುದ್ಧ ಟಾಫ್ಟ್-ಹಾರ್ಟ್‌ಲೀ ಬ್ರಹ್ಮಾಸ್ತ್ರದ ಬಳಕೆ ಅಂತಹ ಪರಿಣಾಮ ಬೀರದಂತೆ ಜಾಗ್ರತೆ ವಹಿಸಬೇಕಾಗಿದೆ.

- ಶರತ್‌ಚಂದ್ರ

ಕಾರ್ಮಿಕರ ವಿರುದ್ಧ ಬ್ರಹ್ಮಾಸ್ತ್ರಗಳು

ಅಮೆರಿಕದಲ್ಲಿ ಕಾರ್ಮಿಕರ ಮುಷ್ಕರವನ್ನು ಸಹಿಸುವುದಿಲ್ಲ - ಮಾಲಕರೂ, ಸರ್ಕಾರವೂ. 'ಹೈರ್ ಅಂಡ್ ಫೈರ್' ಸಾರ್ವತ್ರಿಕವಾಗಿರುವ ದೇಶದಲ್ಲಿ ಮುಷ್ಕರವೇಕೆ? ಯೂನಿಯನ್ನನ್ನು ಸಹಿಸುವುದಿಲ್ಲ. ಯೂನಿಯನ್ ರಚನೆಯೇ ಆಗದಂತೆ ಮಾಡಲು ಎಲ್ಲಾ ರೀತಿಯ ಅಸ್ತ್ರಗಳು ಮಾಲಕರ, ಅವರ ತೊತ್ತಾದ ಸರ್ಕಾರದ ಬತ್ತಳಿಕೆಯಲ್ಲಿವೆ. ಆದರೆ 20ನೇ ಶತಮಾನದ ಪೂರ್ವಾರ್ಧದಲ್ಲಿ ಸ್ಥಾಪಿತವಾದ ಉಕ್ಕು, ಮೋಟಾರು ವಾಹನ, ಸಾಗಾಣಿಕೆ ಮುಂತಾದ ಸಂಘಟಿತ ವಲಯಗಳಲ್ಲಿ ಪ್ರಬಲ ಕಾರ್ಮಿಕರ ಸಂಘಟನೆಗಳ ಚರಿತ್ರೆಯೇ ಇದೆ. ಚರಿತ್ರೆಯನ್ನು ಮಾಲಕರಾಗಲೀ, ಸರ್ಕಾರವಾಗಲೀ ಬದಲಾಯಿಸಲು ಆಗುವುದಿಲ್ಲವಲ್ಲ. ಆದರೆ ಆ ಯೂನಿಯನ್‌ಗಳು ಸಮರಶೀಲ ಹೋರಾಟಕ್ಕೆ ಇಳಿದಾಗ ಅಸ್ತ್ರಗಳು ಸಾಲುವುದಿಲ್ಲ. ಬ್ರಹ್ಮಾಸ್ತ್ರಗಳು ಬೇಕು. ಇಂತಹ ಹಲವು ಬ್ರಹ್ಮಾಸ್ತ್ರಗಳು ಮಾಲಕರ-ಸರ್ಕಾರದ ಬತ್ತಳಿಕೆಯಲ್ಲಿವೆ.

ಸೈನ್ಯವನ್ನು ಮುಷ್ಕರ ದಮನ ಮಾಡಲು ಕಳಿಸುವುದು, ಆ ಕೈಗಾರಿಕೆಯ ಕೆಲಸವನ್ನು ಸೈನ್ಯವೇ ವಹಿಸಿಕೊಳ್ಳುವುದು. ಆ ಕೈಗಾರಿಕೆಯ ಕಾರ್ಮಿಕರನ್ನು 'ರೈಲ್ವೆ ಕಾರ್ಮಿಕರ ಕಾನೂನು' ಅಡಿತರುವುದು (ಅಂದರೆ ಅದು 'ರಾಷ್ಟ್ರೀಯ ಜರೂರಿನ ಕೈಗಾರಿಕೆ' ಅಥವಾ ನಮ್ಮಲ್ಲಿದ್ದಂತೆ 'ಅಗತ್ಯ ಸೇವೆ' ಎಂದು ಘೋಷಿಸುವುದು ಮತ್ತು 'ಟಾಫ್ಟ್-ಹಾರ್ಟ್‌ಲೀ' ಕಾನೂನು ಪ್ರಕಾರ ಮುಷ್ಕರ ಲಾಕೌಟ್ ನಿಷೇಧಿಸಿ 90 ದಿನಗಳ 'ಕದನ ವಿರಾಮ' ಏರ್ಪಡಿಸುವುದು. ಜೂನ್‌ನಿಂದ ಈವರೆಗೆ ಸರ್ಕಾರ ಬಂದರು ಮಾಲಕರ ಜಂಟಿ ಸಭೆಗಳು ನಡೆದು, ಈ ಎಲ್ಲಾ ಬ್ರಹ್ಮಾಸ್ತ್ರಗಳನ್ನು ಬಳಸುವ ಬಗ್ಗೆ ಚರ್ಚೆ ನಡೆದಿತ್ತು. ಕೊನೆಗೂ ಅತ್ಯಂತ ಪ್ರಬಲವಾದ ಟಾಫ್ಟ್-ಹಾರ್ಟ್‌ಲೀ ಬ್ರಹ್ಮಾಸ್ತ್ರ ಬಳಸಲು ನಿರ್ಧರಿಸಲಾಯಿತು

ಟಾಫ್ಟ್-ಹಾರ್ಟ್‌ಲೀ ಬ್ರಹ್ಮಾಸ್ತ್ರ

ಇದು 1947 ರಲ್ಲಿ ಬಂದರು ಕಾರ್ಮಿಕರ ಹೋರಾಟ ಹತ್ತಿಕ್ಕುವ ಸಲುವಾಗಿಯೇ ತಂದ ಕಾನೂನು ಎಂದರೆ ಯಾರಿಗೂ ಆಶ್ಚರ್ಯವಾಗ ಬೇಕಾಗಿಲ್ಲ. ಆಗ ಪ್ರಗತಿಪರರು, ಎಡ ಪಂಥೀಯರು, ಕಮ್ಯುನಿಸ್ಟರು, ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಪ್ರಬಲವಾಗಿದ್ದ ಕಾಲ. ಹಲವು ಪ್ರಮುಖ ಯೂನಿಯನ್‌ಗಳು ಇವರ ನಾಯಕತ್ವದಲ್ಲಿ ಇದ್ದವು. ಈ ಕಾನೂನನ್ನು ಸರ್ಕಾರ ಯಾವುದೇ ಮಾಲಕ-ಕಾರ್ಮಿಕ ವಿವಾದದ 'ಪರಿಹಾರ'ಕ್ಕಾಗಿ ಬಳಸಿದಾಗ, 80 ದಿನಗಳವರೆಗೆ ಹಳೇ ಒಪ್ಪಂದದ ಪ್ರಕಾರ ನಡೆಯಬೇಕು. ಈ ಅವಧಿಯಲ್ಲಿ ಕಾನೂನು ಉಲ್ಲಂಘಿಸುವವರಿಗೆ ದಂಡ, ಕೋರ್ಟು ನಿಂದನೆ, ಜೈಲು ಶಿಕ್ಷೆಯಾಗಬಹುದು. ಮೊದಲ 60 ದಿನಗಳಲ್ಲಿ ಮಾಲಕರು ಮತ್ತು ಯೂನಿಯನ್ ಮಾತುಕತೆ ಮುಂದುವರೆಸಿ ಒಂದು ಒಪ್ಪಂದಕ್ಕೆ ಬರಲು ಪ್ರಯತ್ನಿಸಬೇಕು. ಅದು ಸಾಧ್ಯವಾಗ ದಿದ್ದಲ್ಲಿ 60ನೇ ದಿನ ಮಾಲಕರ ಅತ್ಯಂತ ಈಚಿನ 'ಪ್ರಸ್ತಾವ'ವನ್ನು ಯೂನಿಯನ್ ಸರ್ವ ಸದಸ್ಯರಿಗೆ ಮತದಾನದ ಮೂಲಕ ನಿರ್ಧರಿಸಲು ಇಡಬೇಕು. 75 ದಿನಗಳೊಳಗೆ ಈ ಪ್ರಸ್ತಾವದ ಬಗೆಗಿನ ಮತದಾನದ ಫಲಿತಾಂಶವು ಸರ್ಕಾರಿ ಲೇಬರ್ ಬೋರ್ಡ್ ಪ್ರಕಟಿಸುವುದು. ಕಾರ್ಮಿಕರು ಬಹು ಮತದಲ್ಲಿ ತಿರಸ್ಕರಿಸಿದರೆ, 80ನೇ ದಿನದ ನಂತರ ಹಿಂದಿನ ಸ್ಥಿತಿಗೆ ಮರಳುವುದು. ಆನಂತರ ಕಾರ್ಮಿಕರು-ಮಾಲಕರು ಪುನಃ ಯಾವುದೇ 'ಕೈಗಾರಿಕಾ ಕಾರ್ಯಾಚರಣೆ' ನಡೆಸಲು ಪುನಃ ಸ್ವಾತಂತ್ರ್ಯ ಸಿಗುತ್ತದೆ. ಇದು ಮೇಲ್ನೋಟಕ್ಕೆ ಮಾಲಕ- ಕಾರ್ಮಿಕರನ್ನು ಒಂದೇ ತಕ್ಕಡಿಯಲ್ಲಿ ತೂಗಿದಂತೆ ಕಂಡರೂ, ಕಾರ್ಮಿಕರಿಗೆ ವಿರೋಧವಾದ ಕಾನೂನು. ಈ 80 ದಿನಗಳಲ್ಲಿ ಕಾರ್ಮಿಕರ ಹೋರಾಟವನ್ನು ಮುರಿಯಲು ಮಾಲಕರಿಗೆ ಅದು ಅವಕಾಶ ಮಾಡಿಕೊಡುತ್ತದೆ. ಇದನ್ನು ಕಾರ್ಮಿಕರ ಹೋರಾಟ ತಾರಕಕ್ಕೆ ಹೋಗಿ ವಿಜಯದ ಹೊಸ್ತಿಲಲ್ಲಿ ಇದ್ದಾಗ ಬಳಸಲಾಗುತ್ತದೆ ಎಂದು ಗಮನಿಸಬೇಕು.



14ನೇ ಏಷ್ಯನ್ ಕ್ರೀಡಾ ಕೂಟ ಭಾವೈಕ್ಯತೆ ಬೆಸುಗೆ

ಆರ್.ಡಿ.ಮಿಲ್ಕಿಯೋರ್

14ನೇ ಏಷ್ಯನ್ ಕ್ರೀಡಾಕೂಟ ಇದೀಗ ದ.ಕೊರಿಯಾದ ಬುಸಾನ್‌ನಲ್ಲಿ ಸಮಾಪ್ತಿಗೊಂಡಿತು. ಒಲಂಪಿಕ್ಸ್ ನಂತರ ವಿಶ್ವದಲ್ಲಿ ಅತೀ ದೊಡ್ಡ ಕ್ರೀಡಾಕೂಟ 'ಏಷ್ಯನ್ ಕ್ರೀಡಾಕೂಟ'ವಾಗಿದೆ. ಇದೀಗ ದ.ಕೊರಿಯಾ ಎರಡನೇ ಬಾರಿಗೆ ಏಷ್ಯನ್ ಕ್ರೀಡಾಕೂಟ ಸಂಘಟಿಸಿದೆ (ಮೊದಲು 1986). 1998 ರಲ್ಲಿ ಒಲಂಪಿಕ್ಸ್ ಕ್ರೀಡಾಕೂಟ ನಡೆಸಿದ ಹಾಗೂ ಇದೇ ವರ್ಷದಲ್ಲಿ ವಿಶ್ವಕಪ್ ಫುಟ್ಬಾಲ್ ಕ್ರೀಡೋತ್ಸವಕ್ಕೆ ಆಥಿತ್ಯ ನೀಡಿದ್ದ ದ.ಕೊರಿಯಾ ಇದೀಗ ಪುನಃ 14ನೇ ಏಷ್ಯನ್ ಕ್ರೀಡಾಕೂಟಕ್ಕೆ ಆಥಿತ್ಯ ನೀಡಿ ಇಂದಿನ ವಾಣಿಜ್ಯ ಯುಗದಲ್ಲಿ ತಾನೊಂದು ಶಕ್ತಿ ಎಂದು ತೋರಿಸಿಕೊಂಡಿದೆ.

14ನೇ ಏಷ್ಯಾ ಕ್ರೀಡಾ ಕೂಟ ಈ ಬಾರಿ ವಿಶೇಷತೆಯಿಂದ ಕೂಡಿತ್ತು. ಯುದ್ಧದಿಂದ ಬೇರ್ಪಟ್ಟ ನಂತರ ಮೊದಲ ಬಾರಿಗೆ ಉ.ಕೊರಿಯಾದ ಕ್ರೀಡಾಪಟುಗಳು ದ.ಕೊರಿಯಾದಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು. 14ನೇ ಏಷ್ಯನ್ ಕ್ರೀಡಾಕೂಟದ ಜ್ಯೋತಿಯನ್ನು ಉ.ಕೊರಿಯಾದ ಹಾಗೂ ದ.ಕೊರಿಯಾದ ಎರಡು ಬೆಟ್ಟಗಳಲ್ಲಿ ಹೊತ್ತಿಸಿ ನಂತರ ಈ ಜ್ಯೋತಿಯನ್ನು ಎರಡೂ ಕೊರಿಯಾಗಳ ಗಡಿಯಲ್ಲಿ ಒಂದಾಗಿ ಹೊತ್ತಿಸಿ ಕ್ರೀಡಾಕೂಟ ನಡೆಯುವಲ್ಲಿ ತರಲಾಯಿತು. ಎರಡೂ ಕೊರಿಯಾ ದೇಶಗಳ ಪ್ರತಿನಿಧಿಗಳು ಒಂದಾಗಿ 14ನೇ ಏಷ್ಯ ಕ್ರೀಡಾಕೂಟದ ಜ್ಯೋತಿ ಬೆಳಗಿಸಿದ್ದು ಮಾತ್ರವಲ್ಲದೆ ಎರಡೂ ಕೊರಿಯಾಗಳ ಸ್ಪರ್ಧಿಗಳು ಒಂದೇ ಕ್ರೀಡಾ ಧ್ವಜವಿಡಿದು ಆರಂಭ ಸಮಾವೇಶದ ಪಥ ಸಂಚಲನದಲ್ಲಿ ಭಾಗವಹಿಸಿದರು. ಉ.ಕೊರಿಯಾ ಹಾಗೂ ದ.ಕೊರಿಯಾ ಒಗ್ಗೂಡುವಿಕೆಯಲ್ಲಿ ಇದೊಂದು ಮಹತ್ತರ ಹೆಜ್ಜೆ ಎಂದು ಪತ್ರಿಕೆಗಳು ಹೊಗಳುತ್ತಿವೆ.

14ನೇ ಏಷ್ಯಾ ಕ್ರೀಡಾಕೂಟದಲ್ಲಿ ಎಂದಿನಂತೆ ಚೀನಾ ತನ್ನ ಪ್ರಾಬಲ್ಯ ಮೆರೆದು ಪ್ರಥಮ ಸ್ಥಾನಗಳಿಸಿದೆ. ಈ ಕ್ರೀಡಾಕೂಟದಲ್ಲಿ ಚೀನಾ 150 ಚಿನ್ನದ ಪದಕಗಳನ್ನು ಬಾಚಿಕೊಂಡಿದೆ. ಭಾರತ 8 ಚಿನ್ನದ ಪದಕಗಳೊಂದಿಗೆ ಒಟ್ಟು 36 ಪದಕ ಗಳಿಸಿ 7ನೇ ಸ್ಥಾನ ಗಳಿಸಿದೆ. ಅಂಜೂ ಜಾರ್ಜ್ ಉದ್ದ ಜಿಗಿತದಲ್ಲಿ, ಕೆ.ಎಂ.ಬೀನಾಮೋಲ್ 800 ಮೀಟರ್ ಓಟದಲ್ಲಿ, ನೀಲಂ ಸಿಂಗ್ ಡಿಸ್ಕಸ್ ಎಸೆತದಲ್ಲಿ, ಸರಸ್ವತಿ ಸಹಾ 200 ಮೀಟರ್ ಓಟದಲ್ಲಿ, ಬಹದ್ದೂರ್ ಸಿಂಗ್ ಗುಂಡು ಎಸೆತದಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಭಾರತ ಕಬ್ಬಡ್ಡಿ, ಟೆನಿಸ್, ಅಥ್ಲೆಂಟಿಕ್ಸ್‌ನಲ್ಲಿ ತನ್ನ ಪ್ರಾಬಲ್ಯ ಮೆರೆದಿದೆ. ರಾಷ್ಟ್ರೀಯ ಕ್ರೀಡೆಯಾದ ಹಾಕಿಯಲ್ಲಿ ತನ್ನ ಪಾರಂಪರಿಕ ಎದುರಾಳಿ ಪಾಕಿಸ್ತಾನವನ್ನು ಮಣಿಸಿದರೂ ಪ್ರಬಲ ದ.ಕೊರಿಯಾದೆದುರು ಸೋತು ಬೆಳ್ಳಿ ಪದಕಕ್ಕೆ ತೃಪ್ತಿ ಪಡಬೇಕಾಯಿತು.

ವ್ಯವಸ್ಥೆಯ ಬದಲಾವಣೆಯಿಲ್ಲದೆ ಕ್ರೀಡೆಯಲ್ಲಿ ಭಾರತದಿಂದ ಹೆಚ್ಚಿನ ಸಾಧನೆ ನಿರೀಕ್ಷಿಸಲಾಗದು. ಕ್ರೀಡೆ ವ್ಯವಸ್ಥಿತವಾಗಿರುವ ಕೇರಳದ ಕ್ರೀಡಾಪಟುಗಳು ಏಷ್ಯಾದ ಕ್ರೀಡಾಕೂಟದಲ್ಲಿ ಹಿಂದಿನಿಂದಲೂ ಭಾರತಕ್ಕೆ ಕೀರ್ತಿ ಗಳಿಸಿಕೊಡುತ್ತಿದ್ದಾರೆ. ಚಿನ್ನದ ಬಾಲೆ ಪಿ.ಟಿ.ಉಷಾ, ಶೈನಿವಿಲ್ಸನ್, ವಲ್ಸಮ್ಮ ಟಿ.ಸಿ.ಯೋಹಾನನ್, ಸುರೇಶ್ ಬಾಬು ಈ ಸಲ ಪದಕ ಗಳಿಸಿದ ಅಂಚುಬಾಬಿ ಜಾರ್ಜ್, ಕೆ.ಎಂ.ಬಿನಾಮೊಲ್, ಜಿನ್ನಿ ಫಿಲಿಫ್, ಬಾಬಿ ಅಲಾಷಿಯಸ್, ಬಿನೂ ಜಾರ್ಜ್ ಎಲ್ಲರೂ ಕೇರಳದವರು. ಈ ಸಲ ಚಿನ್ನ ಗೆದ್ದ ಸರಸ್ವತಿ ಸಹಾ, ಸೋಮ ಬಿಸ್ವಾಸ್ ಹಿಂದೆ ಚಿನ್ನ ಗೆದ್ದಿದ್ದ ಜ್ಯೋತಿರ್ಮಯಿ ಸಿಕ್ದರ್ ಪ.ಬಂಗಾಲದವರು. ಏಷ್ಯಾದಲ್ಲಿ ಇತ್ತೀಚೆಗೆ ಭಾರತ ದೇಶಕ್ಕೆ ಕೀರ್ತಿ ಗಳಿಸಿ ಕೊಡುವಲ್ಲಿ ಮಹಿಳಾ ಕ್ರೀಡಾಪಡುಗಳದೇ ಮೇಲುಗೈ.

ಈ ಎಲ್ಲಾ ಸಾದನೆ ನಡುವೆ ಭಾರತದ ಕ್ರೀಡಾಪಟು 1500 ಮೀಟರ್ ಓಟದಲ್ಲಿ ಚಿನ್ನ ಗಳಿಸಿದ್ದ ಹಾಗೂ 5000 ಮೀಟರ್ ಓಟದಲ್ಲಿ ಕಂಚಿನ ಪದಕ ಗಳಿಸಿದ್ದ ಸುನಿತಾ ರಾಣಿ ಉದ್ದೀಪನ ಮದ್ದು ಸೇವನೆ ಆಪಾದನೆಗೆ ಒಳಗಾಗಿದ್ದು ಒಂದು ದುರಂತ.









ಏಷ್ಯನ್ ಕ್ರೀಡಾಕೂಟ ಉಗಮ - ಭಾರತದ ಆಶಯದಿಂದ ಪ್ರಾರಂಭ

ಏಷ್ಯನ್ ಕ್ರೀಡಾಕೂಟ ಭಾರತದ ಪ್ರಯತ್ನದಿಂದ ಆರಂಭವಾದ ವಿಷಯ ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಎರಡನೇ ಮಹಾಯುದ್ಧದ ನಂತರ ಎಲ್ಲಾ ರಾಷ್ಟ್ರಗಳು ಜರ್ಜರಿತವಾಗಿದ್ದಾಗ ಏಷ್ಯಾ ರಾಷ್ಟ್ರಗಳ ನಡುವೆ ಐಕ್ಯತೆ ಬೆಳೆಸುವ ನಿಟ್ಟಿನಲ್ಲಿ ಏಷ್ಯಾ ಕ್ರೀಡಾಕೂಟ ಆಯೋಜಿಸಲು ಭಾರತದ ಪ್ರಥಮ ಪ್ರಧಾನಿ ಜವಾಹರ ಲಾಲ್ ನೆಹರೂ ಸೂಚಿಸಿದ್ದರು. ಕ್ರೀಡೆ ರಾಷ್ಟ್ರಗಳ ನಡುವೆ ಬಾಂಧವ್ಯ, ಐಕ್ಯತೆ ಬೆಳೆಸುತ್ತದೆ ಎಂದು ಸಾರಿದ ನೆಹರೂ ಸಾರಥ್ಯದಲ್ಲಿ 1951 ರಲ್ಲಿ ದೆಹಲಿಯಲ್ಲಿ ಭಾರತದ ಆತಿಥ್ಯದಲ್ಲಿ ಪ್ರಥಮ ಏಷ್ಯನ್ ಕ್ರೀಡಾಕೂಟ ನಡೆಯಿತು. ಪ್ರಥಮ ಏಷ್ಯನ್ ಕ್ರೀಡಾಕೂಟದಲ್ಲಿ 11 ರಾಷ್ಟ್ರಗಳು ಭಾಗವಹಿಸಿದ್ದವು. ನಂತರದಲ್ಲಿ ಪುನಃ ನೆಹರೂ ಪುತ್ರಿ ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದಾಗ 1982 ರಲ್ಲಿ ಭಾರತದ ಆತಿಥ್ಯದಲ್ಲಿ ದೆಹಲಿಯಲ್ಲಿ ಪುನಃ ಏಷ್ಯನ್ ಕ್ರೀಡಾಕೂಟ ನಡೆಯಿತು. ಪ್ರಥಮ ಏಷ್ಯಾ ಕ್ರೀಡಾಕೂಟದಲ್ಲಿ ಭಾರತ ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿತು. ನಂತರ ಹಿಂಜರಿತ ಕಂಡ ಭಾರತ ಆರಕ್ಕೆ ಏರದೆ ಮೂರಕ್ಕೆ ಇಳಿಯದೆ 5 ರಿಂದ 10 ರ ಸ್ಥಾನದಲ್ಲಿ ನೆಲೆ ನಿಂತಿದೆ. ಚೀನಾ ಏಷ್ಯನ್ ಕ್ರೀಡಾಕೂಟಕ್ಕೆ ಪ್ರವೇಶಪಡೆಯುವ ಮೊದಲು ಜಪಾನ್, ದ.ಕೊರಿಯಾಗಳ ಅಧಿಪತ್ಯವಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ 1982 ರ ನಂತರ ಚೀನಾ ಸದಾ ಪ್ರಥಮ ಸ್ಥಾನದಲ್ಲಿ ನಿಂತಿದೆ. ರಷ್ಯಾ ವಿಭಜನೆ ನಂತರ ಉಜ್ಬಕಿಸ್ತಾನ್, ಕಜಾಕ್ ಸ್ತಾನ್, ಟರ್ಕಿಮನಿಸ್ತಾನ್, ಕೆರ್ಗಿಸ್ತಾನ್ ಏಷ್ಯಾ ಖಂಡಕ್ಕೆ ಸೇರಿ ಇದೀಗ ಈ ರಾಷ್ಟ್ರಗಳು ಕ್ರೀಡೆಯಲ್ಲಿ ಏಷ್ಯಾದಲ್ಲಿ ಒಂದು ಪ್ರಬಲ ಶಕ್ತಿಯಾಗಿವೆ. ಜೊತೆಗೆ ಸಮಾಜವಾದಿ ರಾಷ್ಟ್ರಗಳಾದ ಉ.ಕೊರಿಯಾ, ಮಂಗೋಲಿಯಾ, ವಿಯೆಟ್ನಾಮ್ ನಂತಹ ಪುಟ್ಟ ರಾಷ್ಟ್ರಗಳು ಏಷ್ಯದ ಕ್ರೀಡೆಯಲ್ಲಿ ಮೇಲೇರುತ್ತಾ ಸಮಾಜವಾದಿ ವ್ಯವಸ್ಥೆಯ ಫಲಿತಾಂಶಕ್ಕೆ ನಿದರ್ಶನವಾಗಿವೆ.

ಕಥೆ - ಸದಾಚಾರದ ತಾಯಿತ

ಪುಟ 10 ರಿಂದ

ಸಾಧುವಿಗೆ ತಾಯಿತ ತಯಾರಿಸುವ ಕಂಟ್ರಾಕ್ಟ್ ಕೊಡಲಾಯಿತು. ಅದೇ ಸಮಯದಲ್ಲಿ ಕಾರ್ಖಾನೆ ತೆರೆಯಲು ಆತನಿಗೆ 5 ಕೋಟಿ ರೂಪಾಯಿಗಳನ್ನು ಮುಂಗಡವನ್ನು ಕೊಡಲಾಯಿತು.

ರಾಜ್ಯದ ಪತ್ರಿಕೆಗಳಲ್ಲಿ ಪ್ರಕಟವಾಯಿತು. "ಸದಾಚಾರ ತಾಯಿತ ಶೋಧನೆ" "ತಾಯಿತ ತಯಾರಿಸುವ ಕಾರ್ಖಾನೆಯ ಕಾರ್ಯಾರಂಭ"

ಲಕ್ಷಗಟ್ಟಲೆ ತಾಯಿತಗಳು ತಯಾರಾದವು. ಸರಕಾರದ ಆಜ್ಞೆಯ ಮೇರೆಗೆ ಪ್ರತಿಯೊಬ್ಬ ಸರ್ಕಾರಿ ನೌಕರನ ತೋಳಿಗೂ ಒಂದೊಂದು ತಾಯಿತ ಕಟ್ಟಲಾಯಿತು.

ಭ್ರಷ್ಟಾಚಾರದ ಸಮಸ್ಯೆಗೆ ಇಷ್ಟೊಂದು ಸರಳವಾದ ಪರಿಹಾರ ದೊರಕಿದ್ದು ರಾಜನಿಗೂ ರಾಜದರ್ಬಾರಿನವರಿಗೂ ಬಹಳ ಸಂತೋಷವನ್ನುಂಟು ಮಾಡಿತು.

ಒಂದು ದಿನ ರಾಜನಿಗೆ ಕುತೂಹಲವುಂಟಾಯಿತು. "ತಾಯಿತ ಹೇಗೆ ಕೆಲಸ ಮಾಡುತ್ತದೆ ನೋಡೋಣ" ಎನ್ನಿಸಿತು.

ಆತ ವೇಷ ಬದಲಾಯಿಸಿಕೊಂಡು ಒಂದು ಕಚೇರಿಗೆ ಹೋದ. ಅಂದು ಎರಡನೆಯ ತಾರೀಖು. ಮುಂಚಿನ ದಿನವಷ್ಟೇ ಸಂಬಳ ಸಿಕ್ಕಿತ್ತು.

ಒಬ್ಬ ನೌಕರನ ಬಳಿ ಹೋಗಿ ಹಲವಾರು ಕೆಲಸ ಹೇಳಿ ಐದು ರೂಪಾಯಿ ನೋಟು ಕೊಡಲು ಹೋದ. ನೌಕರ ಗದರಿಸಿದ - "ನಡಿ ಇಲ್ಲಿಂದ, ಲಂಚ ತೆಗೆದುಕೊಳ್ಳುವುದು ಪಾಪ"

ರಾಜ ಸಂತುಷ್ಟನಾದ. ತಾಯಿತವು ನೌಕರರನ್ನು ಪ್ರಾಮಾಣಿಕನನ್ನಾಗಿ ಮಾಡಿದೆ!

ಕೆಲವು ದಿನಗಳ ನಂತರ ಮತ್ತೆ ವೇಷ ಬದಲಿಸಿಕೊಂಡು ಅದೇ ನೌಕರನ ಬಳಿಗೆ ಹೋದ. ಅಂದು 31ನೇ ತಾರೀಖು. ತಿಂಗಳಿನಕೊನೆಯ ದಿನ.

ರಾಜ ಆತನಿಗೆ 5 ರ ನೋಟೊಂದನ್ನು ಕೊಟ್ಟ. ಆತ ಅದನ್ನು ತೆಗೆದುಕೊಂಡು ಜೇಬಿಗೆ ಹಾಕಿಕೊಂಡ.


ರಾಜ ಕೂಡಲೇ ಆತನ ಕೈಯನ್ನು ಹಿಡಿದುಕೊಂಡ "ನಾನು ನಿನ್ನ ರಾಜ. ನೀನು ಸದಾಚಾರ ತಾಯಿತವನ್ನು ಕಟ್ಟಿಕೊಂಡು ಬರಲಿಲ್ಲವೇ?"

"ಕಟ್ಟಿಕೊಂಡಿದ್ದೇನೆ ಸ್ವಾಮಿ. ಇದೋ ನೋಡಿ..."

ರಾಜನಿಗೆ ತಲೆ ಬಿಸಿಯಾಯಿತು. "ಮತ್ತೆ ಹೀಗೇಕೆ ಆಯ್ತು?"

ರಾಜ ತಾಯಿತಕ್ಕೆ ಕಿವಿಗೊಟ್ಟು ಆಲಿಸಿದ - ತಾಯಿತದಿಂದ ಸ್ವರ ಹೊರಡುತ್ತಿತ್ತು : "ಅರೆ, ಇವತ್ತು ತಾರೀಖು 31 ತಗೋ ತಗೋ"

ಸಾದರ ಸ್ವೀಕಾರ



- ಹರಿಶಂಕರ
  ಪರಸಾಯಿಯವರ ಆಯ್ದ ಕಥೆಗಳು
  ಡಾ. ಜಿ.ಭಾಸ್ಕರ ಮಯ್ಯ
  ರೂ. 50.00
- ರಾಹುಲ ಸಾಂಕೃತ್ಯಾಯನ
  ಜೀವನ ಮತ್ತು ಕೃತಿ
  ಡಾ. ಜಿ.ಭಾಸ್ಕರ ಮಯ್ಯ
  ರೂ. 50.00
- ಜ್ಯೋತಿಷ್ಯ ವೈಜ್ಞಾನಿಕವೇ
  ವಂಚನೆಯೇ?
  ಡಾ. ಜಿ.ಭಾಸ್ಕರ ಮಯ್ಯ
  ರೂ. 45.00
- ಸಾಮ್ರಾಜ್ಯಶಾಹಿ ದವಡೆಯಲ್ಲಿ ಭಾರತ
  ಡಾ. ಜಿ.ಭಾಸ್ಕರ ಮಯ್ಯ
  ರೂ. 50.00
- ಜಿಜ್ಞಾಸ್ ಡಾ.ಜಿ. ಭಾಸ್ಕರ ಮಯ್ಯ
  ರೂ. 65.00

ಪ್ರಕಾಶಕರು:
ಜನವಾದಿ ಪ್ರಕಾಶನ
ಗುಂಡ್ಮಿ - 576226 ಕುಂದಾಪುರ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಾ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH